# ಕಲ್ಯಾಣ ಕಿರಣ

ಜೂನ್-೨೦೦೦

ಬೆಲೆ : ೫ ರೂ





ದಿನಾಂಕ ೫-೫-೨೦೦೦ದಂದು ಮೈಸೂರು ನಗರದ ಟೌನ್ ಹಾಲದಲ್ಲಿ ನಡೆದ ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಸ್ವಾಗತ ಭಾಷಣ ಮಾಡುತ್ತಿರುವ ಶರಣೆ ಸರೋಜಮ್ಮ ನಾಗರಾಜ್ ಅವರು.



ಮಾಲಾರ್ಪಣೆ ಮಾಡುತ್ತಿರುವ ಶರಣೆ ಚೂಡಾಮಣಿ ಮತ್ತು ಶರಣೆ ಸೌಭಾಗ್ಯ ನಾಗರಾಜು

★ ಕಲ್ಯಾಣ ಕಿರಣ ★

ಸಂಪುಟ ೩೧ | ಬಸವ ಶಕೆ ೮೬೭ | ಆಜೀವ ಸದಸ್ಯತ್ವ ೫೦೦ ರೂ

ಸಂಚಿಕೆ ೬ | ಜೂನ್-೨೦೦೦ | ವಾರ್ಷಿಕ ಚಂದಾ ೫೦/- ರೂ

# ಸಂಸ್ಮರಣೆ

ಶ್ರೀ ಗುರುವಿನ ಶಿವಚರಣಕೆ ನಮೋ ನಮೋ ಎಂಬೆನು
ಗುರುದೇವನ ಮಹಾತ್ಯಾಗಕೆ ನತಮಸ್ತಕಳಾದೆನು ॥ ॥ ಪ ॥

ಬಸವಣ್ಣನ ಶ್ರೀ ರಕ್ಷೆಯ ಹೊತ್ತು ನೀವು ಬಂದಿರಿ
ಹೊಸ ಬಾಳನು ಬಾಳ್ವ ಬಗೆಯ ಈ ಲೋಕಕೆ ತೋರ್ದಿರಿ ॥
ದೇವನೊಬ್ಬ ಮನುಜ ಕುಲಕೆ ಎಂಬ ತತ್ತ್ವ ಸಾರ್ದಿರಿ
ಮನುಜರೆಲ್ಲರೊಂದೆ ಎಂಬ ಭ್ರಾತೃತ್ವವ ಬೀರ್ದಿರಿ ॥ ॥ ೧ ॥

ಜಾತಿವಾದ ಶುಷ್ಕಮಾರ್ಗ ಮೂಢರೂಢಿ ಜರಿದಿರಿ
ಕ್ರಾಂತಿ ಕಹಳೆಯೂದಿ ನೀವು ಜಾಗೃತಿಯಂ ಗೈದಿರಿ ॥
ಪ್ರವಚನದ ನಿಜಸುಧೆಯ ಜನಮನಕೆ ಎರೆದಿರಿ
ಭವಗೆಲ್ಲುವ ಶಿವಮಂತ್ರವ ಹೃದಯ ತುಂಬಿ ಉಸಿರ್ದಿರಿ ॥ ॥ ೨ ॥

ಬಸವಣ್ಣನ ನಿಜತತ್ತ್ವವ ಮತ್ತೆ ಬಿತ್ತಿ ಬೆಳೆದಿರಿ
ಎನಿತೆನಿತೋ ಜೀವಗಳಲಿ ಸ್ಫೂರ್ತಿ ಕಿಡಿಯ ಹಚ್ಚಿದಿರಿ ॥
ಮಿಥ್ಯ ಹಳಿದು ಸತ್ಯ ಹಿಡಿದು ಸುತ್ತ್ಯಪಥದಿ ನಡೆದಿರಿ
ಇಟ್ಟ ಹೆಜ್ಜೆ ಹಿಂದೆಗೆಯದ ಕ್ರಾಂತಿ ಪುರುಷರಾದಿರಿ ॥ ॥ ೩ ॥

ಬಂದ ಎಡರು ತೊಡರು ಜಯಿಸಿ ಭವ್ಯ ಮೂರ್ತಿಯಾದಿರಿ
ಸಂದ ಕೀರ್ತಿವಾರ್ತೆಯನ್ನು ಸಮಚಿತ್ತದಿ ಪಡೆದಿರಿ ॥
ಎನಿತು ಪುಣ್ಯ ನಮ್ಮದಿತ್ತೊ ಇಂಥ ಗುರುವ ಪಡೆಯಲು
ಶಿವರಕ್ಷೆಯ ಅಭಯ ಹೊತ್ತು ದಿವ್ಯ ಪಥದಿ ನಡೆಯಲು ॥ ॥ ೪ ॥

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ ॥
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ತು ಚಿತ್ತು ಆನಂದನ ಶುಭ ರಕ್ಷೆಯು ತಮಗಿದೆ ॥ ॥ ೫ ॥

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ದಿ. ೩೦-೬-೧೯೯೫ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಲಿಂಗೈಕ್ಯರಾಗಿದ್ದು, ದಿ. ೩೦-೬-೨೦೦೦ದಂದಿಗೆ ೫ ವರ್ಷಗಳು ಸಂದಿರುವ ಹಿನ್ನೆಲೆಯಲ್ಲಿ ಭಕ್ತಿಪೂರ್ವಕ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇವೆ.

ಕಲ್ಯಾಣ ಕಿರಣ ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

# ★ ಕಲ್ಯಾಣ ಕಿರಣ ★


| | | |
|---|---|---|
| ಸಂಪುಟ ೩೧ | ಬಸವ ಶಕೆ ೮೬೭ | ಆಜೀವ ಸದಸ್ಯತ್ವ ೫೦೦ ರೂ |
| ಸಂಚಿಕೆ ೬ | ಜೂನ್-೨೦೦೦ | ವಾರ್ಷಿಕ ಚಂದಾ ೫೦ ರೂ |


ಕಿರಣಗನ್ನಡಿ





ಜೈ ಗುರುವೆ ಜೈ ಗುರುವೆ
ಲಿಂಗಾನಂದ ಗುರು ಜೈ ಜೈ ॥

ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿವೆವು ತಮ್ಮನ್ನು ಹಾಡಿ ಕೊಂಡಾಡಿ ॥

ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೋತ್ಸವ - ಜೂನ್ ೩೦


KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಕಲ್ಯಾಣ ಕಿರಣ. DTP : ರಮೇಶ್ ಲಿಂಗಾಯತ


## ಲಿಂಗಾಯತ ನಾನು ಲಿಂಗಾಯತ

ಲಿಂಗಾಯತ ನಾನು ಲಿಂಗಾಯತ
ವಿಶ್ವಬಂಧುವು ನಾನು ವಿಶ್ವಬಂಧುವು ॥ ಪ ॥

ನನ್ನ ಧರ್ಮ ಲಿಂಗಾಯತ ಎಂದು ಸಾರಿ ನುಡಿವೆನು
ಬಸವಣ್ಣನೆ ಧರ್ಮಗುರುವು ಎಂದು ನಂಬಿ ನಡೆವೆನು
ಲಿಂಗದೇವ ಜಗದ ಕರ್ತ ಎಂಬ ಶ್ರದ್ಧೆ ಹೊಂದುತ
ವಚನ ಶಾಸ್ತ್ರ ನಮ್ಮ ನಡೆಗೆ ಧರ್ಮಸೂತ್ರವೆಂಬೆನು ॥ ೧ ॥

ಇಷ್ಟಲಿಂಗ ದೇವಕುರುಹು ಎಂದು ನಾನು ಧರಿಪೆನು
ಸಂಗಮವು ಧರ್ಮಕ್ಷೇತ್ರ ಎಂದು ತಿಳಿದು ಬರುವೆನು
ಶರಣ ವ್ರತವ ಧರಿಸಿ ನಾನು ಜನ್ಮ ಧನ್ಯ ಗೈವೆನು
ಶರಣ ಮೇಳದಲ್ಲಿ ಕೂಡಿ ಹಾಡಿ ಪಾಡಿ ನಲಿವೆನು ॥ ೨ ॥

ಷಟ್‌ಕೋನ ಬಸವ ಧ್ವಜವ ಹಿಗ್ಗಿನಿಂದ ಹಾರಿಪೆನು
ಇಷ್ಟಲಿಂಗ ದೀಕ್ಷೆ ಹೊಂದಿ ಗಣಪದವಿಯ ಹೊಂದುವೆನು
ಭಕ್ತಿ ಪಕ್ಷ ಹೊಂದಲಿಕ್ಕೆ ಬಸವ ಮಂಟಪ ಕಟ್ಟುವೆನು
ವಾರಕ್ಕೊಮ್ಮೆ ಶರಣ ಜನರ ಸಂಗದಲ್ಲಿ ಸೇರುವೆನು ॥ ೩ ॥

ಶ್ರಾವಣ ಮಾಸದಲ್ಲಿ ನಾನು ವಚನ ಪಠಣಗೈವೆನು
ಶರಣ ಭಾಷೆ ಕನ್ನಡವೆಂದು ಹೆಮ್ಮೆಯಿಂದ ನುಡಿವೆನು
ಬಸವಾದಿ ಶರಣರ ಪರಂಪರೆಯು ನನ್ನದು
ಜಾತಿವರ್ಣವರ್ಗಾತೀತ ಸಹೋದರತೆ ನಮ್ಮದು ॥ ೪ ॥

ಮರ್ತ್ಯಲೋಕ ಕರ್ತಾರನ ಕಮ್ಮಟವೆಂದೆನ್ನುತ
ದಿವ್ಯ ಗಣಲಿಂಗವು ಬೆಸೆವ ಕುರುಹು ಎಂಬೆನು
ಜಾತಿ ಸೂತ್ರ ತೊರೆದು ನಾನು ನೀತಿ ಸೂತ್ರ ಹಿಡಿವೆನು
ವಿಶ್ವಸೋದರತ್ವ ಸಾರಿ ಕಲ್ಯಾಣರಾಜ್ಯ ಕಟ್ಟುವೆನು ॥ ೫ ॥

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

( ಬಸವ ಭಕ್ತರು ಎಂಬ ಧಾಟಿ) ರಚನೆ : ೨೦-೫-೨೦೦೦

೨೦೦೧ನೆಯ ಇಸವಿಯಲ್ಲಿ ಜನಗಣತಿ ಬರುತ್ತಿದ್ದು ಲಿಂಗಾಯತ ಧರ್ಮೀಯರು ಕಾಲಮ್ ನಂ.೮ (Religion) ಧರ್ಮ ಎಂದಿದ್ದಲ್ಲಿ ಲಿಂಗಾಯತ ಎಂದೇ ಬರೆಸಬೇಕು. ಈ ವಿಷಯವನ್ನು ಈ ವರ್ಷ (೨೦೦೦) ನೀವು ಮುದ್ರಿಸುವ ವಿವಾಹ ಆಮಂತ್ರಣ, ಗೃಹಪ್ರವೇಶ ಮುಂತಾದ ಎಲ್ಲ ಕರಪತ್ರ, ಆಹ್ವಾನ ಪತ್ರಗಳಲ್ಲಿ ಮುದ್ರಿಸಿ ಪ್ರಚಾರ ಮಾಡಿರಿ.

## ಸಂಪಾದಕೀಯ

# ಲಿಂಗಾಯತ ಮತ್ತು ಹಿಂದುತ್ವದ ಸಂಬಂಧ

"ಲಿಂಗಾಯತರು ಧಾರ್ಮಿಕವಾಗಿ ಹಿಂದುಗಳಲ್ಲ ; ಲಿಂಗಾಯತ-ವೀರಶೈವ ಬೇರೆ ಬೇರೆ" ಎಂಬ ನಮ್ಮ ವಿಚಾರಧಾರೆಯ ಪತ್ರಿಕಾ ಹೇಳಿಕೆ ದಿ.೨೩-೫-೨೦೦೦ ನೋಡಿ ಅನೇಕರಿಗೆ ಆಶ್ಚರ್ಯ, ಆಘಾತ ಎರಡೂ ಆಗಿರಲು ಸಾಧ್ಯ. ನಾವು ಜಾತಿವಾದಿಗಳು ಮತ್ತು ಸಂಕುಚಿತ ವಿಚಾರದವರೂ ಆಗುತ್ತಿದ್ದೇವೆ. ಎಂದು ಕೆಲವರು ಭಾವಿಸಿರಲೂ ಸಾಧ್ಯ. ನಮ್ಮ ಕೆಲವೊಂದು ಅಪೂರ್ವ ಆದರ್ಶ, ಧ್ಯೇಯ ಕುರಿತು ಅಭಿಮಾನ ಹೊಂದಿದ್ದ ಲಿಂಗಾಯತೇತರರಿಗೆ ತುಂಬಾ ಮಾನಸಿಕ ಆಘಾತವಾಗಿರಲೂ ಸಾಧ್ಯ. ಈ ಬಗ್ಗೆ ಸರಿಯಾದ ಚಿತ್ರಣಕೊಡಲಿಕ್ಕೆ ಈ ಸಂಪಾದಕೀಯವನ್ನು ಬರೆಯುತ್ತಿದ್ದೇನೆ.

"ಹಿಂದು" ಪದ ಯಾವುದೇ ಸೈದ್ಧಾಂತಿಕ, ತಾತ್ವಿಕ, ಸಾಂಸ್ಕೃತಿಕ ಹಿನ್ನೆಲೆ ಇಲ್ಲದೆ ಬಳಕೆಗೆ ಬಂದ ಪದ. ಸಿಂಧು ಎಂಬ ನದಿಯ ದಂಡೆಯ ಮೇಲೆ ವಾಸವಾಗಿದ್ದ ಜನರನ್ನು ಪರ್ಷಿಯಾ ಮುಂತಾದ ಆ ಕಡೆಯ ಜನರು ಸಿಂಧುಗಳು ಎಂದರು ; ಸ ಕಾರ ಹ ಕಾರವಾಗುವ ರೂಢಿಯಂತೆ ಹಿಂದುಗಳು ಎಂಬ ಪದ ರೂಢಿಯಲ್ಲಿ ಬಂದಿತು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಈ ಭೂಭಾಗದಲ್ಲಿ- ಮೊದಲು ಇದಕ್ಕೆ ಜಂಬೂದ್ವೀಪ ಎಂಬ ಹೆಸರು, ವಾಸ ಮಾಡುತ್ತಿದ್ದ ಜನರನ್ನು ಧಾರ್ಮಿಕವಾಗಿ ಶೈವ, ವೈಷ್ಣವ, ಜೈನ ಹೀಗೆ ಗುರುತಿಸಲಾಗುತ್ತಿತ್ತು. ಆಗ ಈ ದೇಶದ ಹೊರಗಿನ ಧರ್ಮಗಳಾವೂ ಇರದ್ದರಿಂದ ಇಲ್ಲಿದ್ದವರೇ ಆರ್ಯ-ದ್ರಾವಿಡ ಎಂದು ಜನಾಂಗ ವಾಚಕವಾಗಿ, ಶೈವ, ವೈಷ್ಣವ, ಶಾಕ್ತ ಎಂದು ಧಾರ್ಮಿಕವಾಗಿ ಗುರುತಿಸಲ್ಪಡುತ್ತಿದ್ದರು.

ಪರಕೀಯರ ದಾಳಿ ಶುರುವಾದಾಗ ಇಲ್ಲಿದ್ದವರನ್ನೆಲ್ಲ ಭೌಗೋಲಿಕವಾಗಿ ಒಂದು ಮಾಡಿ ಮಾತನಾಡುವ ಸಲುವಾಗಿ ಹಿಂದು ಪದವು ಬಳಕೆಗೆ ಬಂದಿತು. ಇದಕ್ಕೆ ಸೈದ್ಧಾಂತಿಕ ಅರ್ಥವಿಲ್ಲ. ಅಭಾರತೀಯ ಧಾರ್ಮಿಕ ಶತ್ರುಗಳನ್ನು ಎದುರಿಸಲು ಹಿಂದು ಮಹಾಸಭಾದ ಸ್ವಾತಂತ್ರ್ಯವೀರ ಸಾವರ್ಕರ್ ಅವರು ಮೊಟ್ಟ ಮೊದಲ ಬಾರಿಗೆ ಹಿಂದೂ ವ್ಯಾಖ್ಯಾನವನ್ನು ವಿಶೇಷವಾಗಿ ಮಾಡಿದರು. ನಂತರ ವಿಶ್ವ ಹಿಂದು ಪರಿಷತ್ ವಿಶಾಲ ವ್ಯಾಖ್ಯಾನವನ್ನು ನೀಡಿತು. ನಾವೂ ಸಹ ಅದೇ ರೀತಿ ಸದುದ್ದೇಶದಿಂದ ವ್ಯಾಖ್ಯಾನ ನೀಡಿ ಹಿಂದು ಯಾರು ? Who is a Hindu ? ಮುಂತಾದ ಪುಸ್ತಕಗಳನ್ನು ಬರೆದೆವು ; ಪ್ರಚಾರ ಮಾಡಿದೆವು. ೧೯೭೩-೭೪ರ ಸುಮಾರಿಗೆ ಪ್ರೊ॥ ಶ್ರೀ ನಂಜುಂಡಸ್ವಾಮಿಯವರು ಒಮ್ಮೆ ಹೇಳಿದರು, "ಬೆಂಗಳೂರಿನ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಒಂದು ಕಾರ್ಯಕ್ರಮ ಇಡುತ್ತೇವೆ. ನಾವು ಹಿಂದು ಧರ್ಮವನ್ನು ಬಿಡುವುದಾಗಿ ಘೋಷಿಸುತ್ತೇವೆ. ಈ ಕಾರ್ಯಕ್ರಮದ ಸಾನ್ನಿಧ್ಯ ನೀವು ವಹಿಸಬೇಕು" ಎಂದರು. "ಹಿಂದು ಒಂದು ಧರ್ಮವಲ್ಲ ; ಒಂದು ಪರಂಪರೆ. ಇದನ್ನೇಕೆ ಬಿಡಬೇಕು ? ಬಿಟ್ಟು ಏನು ಹಿಡಿಯುತ್ತೀರಿ ?" ಎಂದು ನಾನು ಕಾರ್ಯಕ್ರಮದ ಸಾನ್ನಿಧ್ಯ ವಹಿಸಲು ಒಪ್ಪಿಕೊಳ್ಳಲಿಲ್ಲ. ನಂತರ ಒಮ್ಮೆ ಡಾ॥ ಶ್ರೀ ದೇ. ಜವರೇಗೌಡರು ಹೇಳಿದರು, "ನಾವು ಅಂದರೆ ಒಕ್ಕಲಿಗರು ಹಿಂದು ಧರ್ಮದ ಪ್ರಕಾರ ಶೂದ್ರರು. ಆದ್ದರಿಂದ ನಾವು ಏಕೆ ಹಿಂದು ಅಂತ ಕರೆದುಕೊಳ್ಳಬೇಕು ? ಹಿಂದು ಕಕ್ಷೆಯ ಹೊರಹೋಗಲು ಬಯಸುತ್ತೇವೆ."

ಪ್ರೊ॥ ನಂಜುಂಡಸ್ವಾಮಿಯವರಾಗಲೀ ಡಾ॥ ದೇಜಗೌ ಅವರಾಗಲೀ ಸಾಮಾನ್ಯರಲ್ಲ, ಚಿಂತನಶೀಲರು. ಅವರ ಅಭಿಪ್ರಾಯ ಒಬ್ಬರದಲ್ಲ ಒಂದು ಬೃಹತ್ ಜನ ಸಮುದಾಯದ ಅಂತರಂಗದ ಅಳಲು ಎನ್ನಬಹುದಲ್ಲವೆ ? ೧೯೭೩-೭೪ರ ಸುಮಾರಿನಲ್ಲಿ ಈ ಉಭಯತರು ಆಡಿದ ಮಾತನ್ನು ೨೦೦೦ ಇಸವಿಯಲ್ಲಿ ಈಗ ನಾನೂ ಆಡುವ ಸನ್ನಿವೇಶ ಬಂದಿರುವುದು ಬಹಳ ಆಶ್ಚರ್ಯಕರ ಎನ್ನಿಸತೊಡಗಿದೆ.



ಭಾರತೀಯ ಪರಂಪರೆ ಬಗ್ಗೆ, ಭಾರತ ದೇಶದ ಬಗ್ಗೆ ಇದರ ಸಮಗ್ರತೆ, ಅಖಂಡತೆ ಬಗ್ಗೆ ಒಂದು ಗುಲಗಂಜಿಯಷ್ಟೂ ಕೊರತೆ ಇಲ್ಲದ ಅಭಿಮಾನ ನಮ್ಮೆಲ್ಲರಲ್ಲಿ ತುಂಬಿ ತುಳುಕುತ್ತಿದೆ. ಆದರೆ ಹಿಂದು ಕಕ್ಷೆ ಅಸಹನೀಯವಾಗುತ್ತಿದೆ ಎಂದರೆ ಎಲ್ಲರಿಗೂ ಅಚ್ಚರಿ ಎನಿಸಬಹುದು.

ಹೀಗೊಂದು ಊರು ; ಅಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ನಡೆದಿತ್ತು. ಜಾತೀಯತೆ, ಮಡಿವಂತಿಕೆಗೆ ಹೆಸರಾದ ಊರದು. ಈ ಹಿಂದೆ ನಮ್ಮಿಂದಲೇ ದೀಕ್ಷೆ ಪಡೆದು ಸತ್ಯ ಸದಾಚಾರ ಸಂಪನ್ನರಾಗಿ ಪರಿಶುದ್ಧರಾಗಿ ಜೀವನ ನಡೆಸುವ ಕೆಲವು ಶರಣರು ಪೂರ್ವಾಶ್ರಮದಲ್ಲಿ ಒಕ್ಕಲಿಗರು, ದಲಿತರು, ಈಡಿಗರು ಇತ್ಯಾದಿ. ಮಾಂಸಾಹಾರವಿಲ್ಲ, ಮದ್ಯಪಾನವಿಲ್ಲ, ಬಹುದೇವತೋಪಾಸನೆ ಇಲ್ಲ. ಇಷ್ಟಲಿಂಗ ನಿಷ್ಠೆ, ಗುರು ಬಸವ ನಿಷ್ಠೆಯನ್ನು ಅಳವಡಿಸಿಕೊಂಡವರು, ಬಸವ ಪಥಿಕರು. ಅವರುಗಳ ಮನೆಗೆ ಪೂಜೆ-ಪ್ರಸಾದಕ್ಕೆ ಹೋಗಬಾರದೆಂದು ಕೆಲವು ಮಡಿವಂತ ವೀರಶೈವರ ಆಗ್ರಹ. ಪೂಜ್ಯ ಗಂಗಾ ಮಾತಾಜಿ ನನಗೆ ಫೋನ್ ಮಾಡಿ ಹೇಳಿದರು. "ಈಗ ನಾವು ಬಸವಗುರುವಿನ ಮಾತು ಕೇಳಬೇಕೋ, ಮಡಿವಂತ ವೀರಶೈವರದೋ ?" ಎಂದು ಪ್ರಶ್ನಿಸಿದೆ. "ಬಸವ ಗುರುವಿನದು" ಎಂದು ಹೇಳಿದರು.

"ಸ್ವತಃ ಧರ್ಮಪಿತರು, ದೀಕ್ಷಿತನಾದ ಕಂಬಳಿ ನಾಗಿದೇವನ ಮನೆಗೆ ಹೋಗಲಿಲ್ಲವೆ ? ಹರಳಯ್ಯನವರ ಮನೆಗೆ ಹೋಗಲಿಲ್ಲವೆ ? ಮಡಿವಂತ ವೀರಶೈವರು ಕಾಣಿಕೆ ಕೊಡದಿರಬಹುದು. ಪ್ರವಚನಕ್ಕೆ ಬರದೆ ಇರಬಹುದು. ನಾವು ಧರ್ಮಪಿತರ ಆದೇಶದಂತೆ ನಡೆಯಬೇಕು" ಎಂದು ಹೇಳಿದೆ. ಅದರಂತೆ ಪೂಜ್ಯ ಗಂಗಾ ಮಾತಾಜಿ ಅವರುಗಳಲ್ಲಿ ಹೋಗಿ ಪೂಜೆ-ಪ್ರಸಾದ ಮಾಡಿದರು. ಇದರಿಂದ ಮಡಿವಂತ ವೀರಶೈವರ ಅಸಹಕಾರವನ್ನು ಅವರು ಎದುರಿಸಬೇಕಾಯಿತು. ಕಾಣಿಕೆಯ ದೃಷ್ಟಿಯಿಂದ ತೊಂದರೆಯಾದರೂ ಆತ್ಮತೃಪ್ತಿಯ ಮಹಾಪೂರ ಹರಿಯಿತು. ಧರ್ಮಪಿತರ ಆದೇಶದಂತೆ ನಡೆದ ಸಂತೃಪ್ತಿ ದೊರೆಯಿತು. ಲಿಂಗಾಯತ ಸಮಾಜದಲ್ಲಿ ಕೆಲವು ಮಡಿವಂತ ಜಾತಿಯವರ ಅಹಂಕಾರಪೂರ್ಣ ಜಾತೀಯ ಮನೋಭಾವದ ವರ್ತನೆಯಿಂದ ಬಸವಣ್ಣನವರ ಬಗ್ಗೆ ಅಪಾರಭಕ್ತಿ, ಅಭಿಮಾನವಿದ್ದರೂ ಲಿಂಗಧಾರಣೆ ಮಾಡಿಕೊಂಡು ಒಳಬರಲು ಅನೇಕ ಅನ್ಯಜಾತಿಗಳವರು ಹಿಂಜರಿಯುತ್ತಾರೆ. ರಾಷ್ಟ್ರೀಯ ಬಸವ ದಳಗಳಿಂದಾಗಿ ವಿಚಾರಶೀಲ ಜನಾಂಗವೊಂದು ನಿರ್ಮಾಣವಾಗುತ್ತಿದ್ದು, ಇವರು ಸಮಾನತೆ-ಸೌಜನ್ಯದಿಂದ ಕಾಣುವುದರಿಂದ ದೀಕ್ಷೆ ಪಡೆಯುವವರ ಸಂಖ್ಯೆ ಜಾಸ್ತಿಯಾಗುತ್ತಿದೆ.

ಲಿಂಗಾಯತ ಸಮಾಜದಲ್ಲಿ ಹೇಗೆ ಕೆಲವು ಮಡಿವಂತ ಜಾತಿಗಳವರು ಸ್ವಯಂ ಘೋಷಿತ ಶ್ರೇಷ್ಠತೆಯಿಂದ ಬೀಗಿ ಅನ್ಯರನ್ನು ತಿರಸ್ಕರಿಸುತ್ತಾರೋ ಅದೇ ರೀತಿ ಹಿಂದು ಸಮಾಜದಲ್ಲಿ ಸವರ್ಣೀಯರ ಆಟಾಟೋಪ. ಹಿಂದು ಶ್ರೇಣೀಕೃತ (Ladder type) ಸಮಾಜ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಕ್ರಮವಾಗಿ ೧,೨,೩,೪ ದರ್ಜೆಯ ಧಾರ್ಮಿಕ ಸೌಲಭ್ಯಗಳಿವೆ. ಹೀಗಾಗಿ ವೈದಿಕೀಕರಣ (ಬ್ರಾಹ್ಮಣೀಕರಣ)ಗೊಂಡ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಹಿಂದು ಸಮಾಜದಲ್ಲಿ ಸಮಾಧಾನದಿಂದ ಇರಬಲ್ಲವರಾಗಿದ್ದಾರೆ. ಜಾತ್ಯತೀತ ಧೋರಣೆಯ, ಪ್ರಗತಿಪರ ಚಿಂತಕರು ನಾಲ್ಕೂ ವರ್ಣಗಳವರಲ್ಲಿ ಅಸುಖಿಗಳಾಗಿದ್ದಾರೆ ; ವಿಚಾರಶೀಲ ಶೂದ್ರರಂತೂ ತಳಮಳದಿಂದ ಕುದಿಯುತ್ತಿದ್ದಾರೆ. "ನಮಗೆ ಯಾವ ಧರ್ಮವೂ ಬೇಡ ;" ಎಂದು ಅಂಥ ಕೆಲವರು ತೋರಿಕೆಗೆ ನುಡಿವರಾದರೂ, ಬರೆಯುವರಾದರೂ ಲೌಕಿಕ ಜೀವನ, ಹುಟ್ಟು-ಸಾವು, ಮುಪ್ಪು-ಮರಣ ಮುಂತಾದ ಸನ್ನಿವೇಶಗಳಲ್ಲಿ ಒಂದು ಧರ್ಮದ ಆಸರೆ ಧಾರ್ಮಿಕ ಗುಂಪಿನ ಸಾಂಗತ್ಯ ಇಲ್ಲದಾಗ ಬಹಳಷ್ಟು ಮಾನಸಿಕ ಖಿನ್ನತೆ (depression)ಗೆ ಒಳಗಾಗುತ್ತಾರೆ. ಅದನ್ನೇ ಧರ್ಮಪಿತರು "ಭಕ್ತಿಪಕ್ಷ" ಎಂದು

ಕರೆದಿರುವುದು. ಪ್ರತಿಯೊಬ್ಬ ಮಾನವನಿಗೂ ಒಂದು ಧಾರ್ಮಿಕ ಒಕ್ಕೂಟದ ಅವಲಂಬನೆ, ಆಸರೆ ಬೇಕಾಗುತ್ತದೆ. ನಿಚ್ಚಣಿಕೆಯೋಪಾದಿಯಲ್ಲಿ ರಚನೆಯಾದ ಸಾಂಪ್ರದಾಯಿಕ ಹಿಂದೂ ಸಮಾಜದ ವ್ಯವಸ್ಥೆ ವಿಚಾರಶೀಲರನ್ನು ತುಡಿತಕ್ಕೆ ಒಳಗು ಮಾಡಿರುವಂತೆ ಇದರ ಮೂಢನಂಬಿಕೆ, ಬಹುದೇವತೋಪಾಸನೆ, ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ಸಹ ಬಹುಪಾಲು ಭಾರತೀಯರನ್ನು ತಳಮಳಕ್ಕೆ ಒಳಗು ಮಾಡಿವೆ.

ಮೊನ್ನೆ ದಿನದ ಪತ್ರಿಕೆಗಳ ಮುಖಪುಟದ ಮೇಲೆ ಎರಡು ಜಿಂಕೆಗಳ ಮದುವೆ ಬಗ್ಗೆ ಚಿತ್ರ ಸಹಿತವಾಗಿ ವೈಭವಿಸಿ ಬರೆಯಲಾಗಿತ್ತು. ಇದು ಮೂರ್ಖತನದ ಪರಮಾವಧಿ. ಬ್ರಾಹ್ಮಣ ಪುರೋಹಿತರು ತಮ್ಮ ಹೊಟ್ಟೆಪಾಡಿಗಾಗಿ ಅವರು ಅಭಿಮಾನವಿರಬೇಕೆಂದು ಒತ್ತಿ ಒತ್ತಿ ಹೇಳುವ ಹಿಂದುತ್ವದ ಬಗ್ಗೆ ಹಿಂದುಗಳಲ್ಲೇ ಜಿಗುಪ್ಸೆ ಹುಟ್ಟುವಂತೆ ಆಚರಣೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಬೆಳೆಸುತ್ತಿದ್ದಾರೆ. ಗಿಡ-ಮರಗಳಿಗೆ ಮದುವೆ ಮಾಡಿಸುವುದು, ಜಿಂಕೆಗಳಿಗೆ ಮದುವೆ ಮಾಡಿಸುವುದು ಎಷ್ಟು ಅರ್ಥ ರಹಿತ ? ವೈಭವದ ಯಜ್ಞ-ಯಾಗಗಳಲ್ಲಿ ಎಂಥಾ ಅಪವ್ಯಯ ! ಅನಾರೋಗ್ಯಕರ ಹೊಗೆ ! ಏನೇನೋ ಮಾಡಿ ಸಮರ್ಥಿಸಿಕೊಳ್ಳುತ್ತಾರೆ. ಇಲ್ಲಿ ನೆಲೆಗೊಂಡಿದ್ದ ಸಮಾಜವು ೪ ವರ್ಣ, ಸಹಸ್ರಾರು ಜಾತಿಗಳಿಂದ ಸೀಳು ಸೀಳಾಗಿ ಹೋದುದನ್ನು ಕಂಡು ಮನನೊಂದು ಬಸವಣ್ಣನವರು ಹೊಸಧರ್ಮವೊಂದನ್ನು ಸ್ಥಾಪಿಸಿದರು. ಆದರೆ ಅದು ಬೆಳೆಯಲಿಕ್ಕೆ ವೈದಿಕ ಪುರೋಹಿತರು ಅಂದು ಬಿಡಲಿಲ್ಲ ; ವೀರಶೈವ ಪುರೋಹಿತರು ಇಂದು ಬಿಡುತ್ತಿಲ್ಲ. ಈ ಪುರೋಹಿತಶಾಹಿ ಜನರು ತಮ್ಮ ಹೊಟ್ಟೆ ಪಾಡಿಗೆ ಕೊಂಚ ತೊಂದರೆಯಾದರೂ ಚಿಂತೆಯಿಲ್ಲ ನಿಜಧರ್ಮವನ್ನು ಉಳಿಸಲು ಸ್ವಲ್ಪ ತ್ಯಾಗಮಾಡಿದರೂ ಈ ದೇಶಕ್ಕೆ ಒದಗಬಹುದಾದ ಇನ್ನಷ್ಟು ದುರಂತಗಳನ್ನು ತಪ್ಪಿಸಲು ಸಾಧ್ಯ. ಹಿಂದುತ್ವ ಉಳಿಯಬೇಕು ಎಂದು ಭಾಷಣ ಮಾಡಿದರೆ ಉಳಿಯದು. ಒಳಗಿದ್ದವರನ್ನು ಹೊರಗೆ ದೂಡುತ್ತಿರುವ ವಿಲಕ್ಷಣ ಕಾರಣಗಳನ್ನು ಪತ್ತೆ ಹಚ್ಚಿ ಅವನ್ನು ನಿರ್ಮೂಲನೆ ಮಾಡಬೇಕು. ಶಿಕ್ಷಣವು ಜಾಸ್ತಿಯಾದಂತೆ ದಲಿತರು ಜಾಗೃತರಾಗುತ್ತಿದ್ದಾರೆ ಮಾತ್ರವಲ್ಲ ಉಳಿದ ಶೂದ್ರರು ಜಾಗೃತರಾಗುತ್ತಿದ್ದಾರೆ. ಈ ಜಾಗೃತಿ ಅಪ್ರತ್ಯಕ್ಷವಾಗಿ ಭಾರತ ದೇಶದ ಬಗ್ಗೆಯೇ ಒಂದು ಬಗೆಯ ಮಾನಸಿಕ ಜಿಗುಪ್ಸೆ ಹುಟ್ಟಿಸಿದರೆ ಇದಕ್ಕಿಂತ ದೊಡ್ಡ ವಿಪತ್ತು ಮತ್ತೊಂದಿಲ್ಲ. ಈ ದೇಶವನ್ನು ರಕ್ಷಣೆ ಮಾಡಲೆಂದೇ ಬಸವಣ್ಣನವರು ಜಾತಿಯ ವೈಷಮ್ಯ ತೊಡೆದು ಹಾಕಲು ಕಳಕಳಿಯಿಂದ ಹೋರಾಟ ಮಾಡಿದುದನ್ನು ಪುರೋಹಿತಶಾಹಿ ಅರ್ಥ ಮಾಡಿಕೊಳ್ಳಲಿಲ್ಲ, ಮಾಡಿಕೊಳ್ಳುತ್ತಿಲ್ಲ. ಸಿಖ್ ಧರ್ಮವು ಸಹ ಹುಟ್ಟಿದ್ದು ಇದೇ ಉದ್ದೇಶದಿಂದಲೇ. ಹಿಂದು ಸಮಾಜದೊಳಗಣ ಜಾತೀಯತೆ, ಮೂಢನಂಬಿಕೆ ಬಹುದೇವತೋಪಾಸನೆ, ಯಜ್ಞ-ಯಾಗ, ಅಸಮಾನತೆಗಳಿಂದ ಹಾಳಾಗುತ್ತಿರುವ ಭಾರತೀಯ ಧಾರ್ಮಿಕ ಪರಂಪರೆಯನ್ನು ರಕ್ಷಿಸಲು ಗುರು ತೇಜಬಹಾದ್ದೂರ ಕಾಶ್ಮೀರಕ್ಕೆ ಹೋಗಿ ಮುಸಲೀಮ್ ದೊರೆಗೆ ತಲೆ ಒಪ್ಪಿಸಿದರು. ಆದರೆ ಇವರು ಯಾರ ಕಳಕಳಿಯನ್ನೂ ಅರ್ಥಮಾಡಿಕೊಳ್ಳದ ವೈದಿಕ ಪುರೋಹಿತಶಾಹಿ ತಾನೇನು ತಪ್ಪು ಮಾಡುತ್ತಿದ್ದೇನೆ ಎಂಬ ಅರಿವಿಲ್ಲದೆ ಇಂದಿಗೂ ಹಳೆಯ ಕೊಳೆಯನ್ನೇ ಪೋಷಿಸುತ್ತ ಬರುತ್ತಿದೆ.

## ಹಿಂದು ಧರ್ಮವೆಂದರೆ ವೈದಿಕ ಧರ್ಮ ?!

ಹಿಂದು ಒಂದು ಧರ್ಮವಲ್ಲ, ಹಲವು ಧರ್ಮಗಳ ಒಕ್ಕೂಟ ಎಂದು ವ್ಯಾಖ್ಯಾನಿಸಿದಾಗ ಭಾರತ ದೇಶದಲ್ಲಿ ಹುಟ್ಟಿದ ಎಲ್ಲ ಧರ್ಮಗಳೂ ಹಿಂದು ಕಕ್ಷೆಯಲ್ಲಿ ಬರುತ್ತವೆ. ಲಿಂಗಾಯತವೂ ಹಿಂದೂ ಕಕ್ಷೆಯೊಳಗೆ ಬರುತ್ತದೆ. ಆದರೆ ಜನಗಣತಿಯ ಕಾರ್ಯದಲ್ಲಿ ಹಿಂದು ಧರ್ಮ ಎಂದು ಗಡಿ ರೇಖೆ ಎಳೆದಾಗ ಅದು ವೇದ-ಆಗಮ-ಶೃತಿ-ಸ್ಮೃತಿ-ಪುರಾಣ ಆಧಾರಿತ ವೈದಿಕ ಧರ್ಮವೇ ಆಗುತ್ತದೆ. ಆಗ



ಅನಿವಾರ್ಯವಾಗಿ ಅವೈದಿಕವಾದ ಲಿಂಗಾಯತವು ಅಹಿಂದು ಧರ್ಮ ಎನಿಸಿಕೊಳ್ಳುತ್ತದೆ. ಜಗತ್ತಿನ ಪ್ರಥಮಯೋಗಿ ಪಿತಾಮಹ ಶಿವನಿಂದ ಪ್ರಾರಂಭವಾದ ಭಾರತೀಯ (ಹಿಂದು) ಪರಂಪರೆಯ ಸಂಬಂಧ ಕಳಚಿಕೊಳ್ಳುವುದು ಅತ್ಯಂತ ವೇದನೆಯ ಕೆಲಸ. ಆದರೆ, ಧ್ರುವನ ಮಲತಾಯಿ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಧ್ರುವನಿಗೆ ಅವಕಾಶ ನೀಡದೆ ಇದ್ದಾಗ ಅವನು ಛಲ ತೊಟ್ಟು ಹೋಗಿ ತಪಸ್ಸು ಮಾಡಿ ಧ್ರುವ ಎಂಬ ಹೆಸರನ್ನು ನಕ್ಷತ್ರ ಒಂದಕ್ಕೆ ಇಡಿಸಿಕೊಂಡಂತೆ, ಇಂದು ಬ್ರಾಹ್ಮಣ ಪುರೋಹಿತಶಾಹಿಯ ಧೂರ್ತತೆ, ಕುತಂತ್ರಗಳಿಂದ ಬೇಸತ್ತು ಲಿಂಗಾಯತ ಧರ್ಮ ಸಹ ಹಿಂದೂ ಧರ್ಮದ ಹೊರಗಾಗುವ ಸನ್ನಿವೇಶ ಒದಗುತ್ತಿದೆ. ಮಹಾಭಾರತ, ರಾಮಾಯಣ ಅವುಗಳ ನಾಯಕರಾದ ಶ್ರೀ ಕೃಷ್ಣ, ಶ್ರೀರಾಮರು ಕಾಪಾಡ ಬಯಸಿದ ಸಾಮಾಜಿಕ ವ್ಯವಸ್ಥೆ ಧರ್ಮದ ಹೆಸರಿನಲ್ಲಿ ನಡೆಸಿದ ದಬ್ಬಾಳಿಕೆ ಮತಿಶೀಲರನ್ನು ಪ್ರಕ್ಷುಬ್ಧಗೊಳಿಸುತ್ತವೆ. ಆದರೂ ಕುಂಬಳ ಕಾಯಿಗೆ ಕಬ್ಬುಣದ ಕಟ್ಟು ಕಟ್ಟುವಂತೆ ವೈದಿಕ ಪುರೋಹಿತಶಾಹಿ ಅದೇ ರಾಮಾಯಣ, ಮಹಾಭಾರತಗಳಿಗೆ ತಿರುತಿರುಗಿ ವ್ಯಾಖ್ಯಾನ ಬರೆಯುತ್ತ ಶ್ರೀರಾಮ, ಶ್ರೀ ಕೃಷ್ಣರನ್ನು ವೈಭವಿಸುತ್ತಾ ಹೊರಟಿದ್ದಾರೆ.

ಆದ್ದರಿಂದ ಭಾರತೀಯ ಮಹಾನ್ ಪರಂಪರೆಯನ್ನು ಉಳಿಸಲೆಂದೇ ಜೈನ-ಬೌದ್ಧ-ಲಿಂಗಾಯತ-ಸಿಖ್ ಧರ್ಮಗಳು ಮಾನವತಾವಾದದ ಆಧಾರದ ಮೇಲೆ ಹುಟ್ಟಿದವೆಂದು ಸ್ಪಷ್ಟವಾಗಿ ಹೇಳಬಹುದು. ''ಲಿಂಗಾಯತವು ಹಿಂದು ಧರ್ಮವಲ್ಲ, ಹಿಂದು ಧರ್ಮದೊಳಗಣ ಒಂದು ಜಾತಿ ಅಥವಾ ಶಾಖೆಯಲ್ಲ; ಸ್ವತಂತ್ರ ಧರ್ಮ ಎಂದು ಹೇಳುವಲ್ಲಿ ತಮ್ಮ ಉದ್ದೇಶವೇನಿದೆ? ಅಲ್ಪಸಂಖ್ಯಾತರ ಸವಲತ್ತು ಪಡೆಯುವುದೇ ?'' ಎಂದು ಓರ್ವ ಪತ್ರಿಕಾ ಕರ್ತರು ದಿ.೨೩-೪-೨೦೦೦ರ ಪತ್ರಿಕಾ ಗೋಷ್ಠಿಯಲ್ಲಿ ನೇರವಾಗಿ ಕೇಳಿದರು. ಆಗ ನಾನು ಹೇಳಿದೆ, ''ಅಲ್ಪ ಸಂಖ್ಯಾತರ ಸವಲತ್ತು ಪಡೆಯುವುದು ಎರಡನೆಯ ಸ್ಥಾನ ಪಡೆಯುತ್ತದೆ. ನಮ್ಮ ಮುಖ್ಯ ಉದ್ದೇಶ, ಸಮಾನತೆ ಪ್ರತಿಪಾದಿಸುವ, ಯಜ್ಞ-ಯಾಗಾದಿಗಳಿಲ್ಲದ, ಶೋಷಣೆ ರಹಿತವಾದ, ವೈಜ್ಞಾನಿಕವಾದ, ಪ್ರಗತಿಪರ ಚಿಂತನೆಯ ಒಂದು ಧರ್ಮ, ಬಸವಣ್ಣನವರಿಂದ ಕೊಡಲ್ಪಟ್ಟಿದ್ದು ಇಲ್ಲಿದೆ. ಇದು ಎಲ್ಲರಿಗೂ ಬಾಗಿಲು ತೆರೆಯುತ್ತದೆ. ಆದ್ದರಿಂದ ಧರ್ಮದ ಹಸಿವೆ ಇರುವವರು, ನೊಂದು ಬೆಂದವರು, ತುಳಿತಕ್ಕೊಳಗಾದವರು ಅತ್ತಿತ್ತ ಹೋಗಬೇಡಿ ಇಲ್ಲಿಗೆ ಬನ್ನಿ. ಇದು ನಿಮ್ಮನ್ನು ಭಾರತೀಯ ಸಾಂಸ್ಕೃತಿಕ ಪರಂಪರೆಗೆ ಹೊರಗು ಮಾಡದೆ ನಿಮ್ಮ ಶೂದ್ರತ್ವ, ಅಸ್ಪೃಶ್ಯತೆಯನ್ನು ಕಳೆದು ಶರಣರನ್ನಾಗಿ ಮಾಡುತ್ತದೆ ಎಂಬುದನ್ನು ಜಗಜ್ಜಾಹೀರು ಮಾಡುವುದೇ ನಮ್ಮ ಉದ್ದೇಶ.'' ಈ ಘನ ಉದ್ದೇಶವನ್ನರಿಯದ ಸಾಮಾನ್ಯ ಲಿಂಗಾಯತರ ಮನಸ್ಸಿಗೆ ಒಂದು ಗುರಿ, ಧಾರ್ಮಿಕ ಅಲ್ಪಸಂಖ್ಯಾತರ ಸ್ಥಾನ ಪಡೆಯುವ ಆಸೆ. ಇಂದು ಅನೇಕ ಹಿಂದುಳಿದ ಜಾತಿಗಳಲ್ಲಿರುವವರು ಪಡೆಯುತ್ತಿರುವ ಸವಲತ್ತು ಧರ್ಮಸಂಸ್ಕಾರ ಪಡೆದಾಗ ಕೈಬಿಡುತ್ತವೇನೋ ಎಂಬ ಆತಂಕ ಕೆಲವರದು ಇದ್ದು, ಧಾರ್ಮಿಕ ಅಲ್ಪಸಂಖ್ಯಾತರ ಸ್ಥಾನ ಲಿಂಗಾಯತರಿಗೆ, ಸ್ವತಂತ್ರ ಧರ್ಮದ ಮಾನ್ಯತೆ ಲಿಂಗಾಯತ ಧರ್ಮಕ್ಕೆ ಸಿಕ್ಕಾಗ ಅನೇಕ ಜನರು ಧರ್ಮಸಂಸ್ಕಾರ ಹೊಂದಿ ಧನ್ಯತಾಭಾವ ಪಡೆಯುವರು.''

ವೈದಿಕ ಧರ್ಮವೇ ಹಿಂದು ಧರ್ಮ ಎಂಬ ವಾದವನ್ನು ಹಿಂದು ಪುರೋಹಿತಶಾಹಿಯ ಜನರು ದಿನದಿನಕ್ಕೂ ಹೆಚ್ಚು ದೃಢಪಡಿಸುತ್ತಿರುವರು. ಹೀಗಾಗಿ ವೇದ, ಆಗಮ, ಶೃತಿ, ಸ್ಮೃತಿ, ಪುರಾಣ ಒಪ್ಪದ ಲಿಂಗಾಯತ ಧರ್ಮ ಗೀತೆ-ಗಾಯಿತ್ರಿಗಳನ್ನು ಪಠಿಸದ, ಗೋವು-ಗಂಗೆಯರನ್ನು ಪೂಜಿಸದ ಲಿಂಗಾಯತ ಧರ್ಮ ಹಿಂದು ಕಕ್ಷೆ ಹೊರಕ್ಕೆ ಜಾರುವುದು ಬಹಳ ಸ್ವಾಭಾವಿಕವೆನಿಸುತ್ತದೆ. ಚತುರ್ವರ್ಣ ವ್ಯವಸ್ಥೆ- ಅಸ್ಪೃಶ್ಯತೆ ಮನ್ನಿಸದ, ಹಿಂದು ದೇವತೆಗಳ ಪರಿವಾರವನ್ನು ಪೂಜಿಸದೆ ಒಬ್ಬನೇ ದೇವನನ್ನು ನಂಬಿ

ಪೂಜಿಸುವ ಲಿಂಗಾಯತ ಧರ್ಮ ಅಹಿಂದು ಎಂದು ಘೋಷಿಸಿಕೊಳ್ಳುವ ಕಾಲ ಬಂದೇ ಬಿಟ್ಟಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ೪ ವರ್ಣಗಳಲ್ಲಿ ಬರುತ್ತಾರೆ. ೫ನೆಯ ವರ್ಣ, ಅಸ್ಪೃಶ್ಯ. ಇವರನ್ನು ಭಾರತ ಸರಕಾರ ಜನಗಣತಿಯ ೯ನೇ ಕಾಲಂನಲ್ಲಿ ಪ್ರತ್ಯೇಕವಾಗಿಟ್ಟಿದೆ. ೪ ವರ್ಣಗಳಲ್ಲಿ ಮೊದಲ ಮೂವರಿಗೆ ದ್ವಿಜ ಸಂಸ್ಕಾರವಿದೆ. ಯಜ್ಞೋಪವೀತ ಧಾರಣೆ ಇದೆ. ಶೂದ್ರ ವರ್ಣೀಯನಿಗೆ ಸಂಸ್ಕಾರವಿಲ್ಲ. ಜನ್ನಿವಾರವಿಲ್ಲ. ಪೂಜೆಯ ಹಕ್ಕಿಲ್ಲ. ಲಿಂಗಾಯತರು ಹಿಂದು ಎಂದುಕೊಂಡರೆ ಜನ್ನಿವಾರವಿಲ್ಲದ ಅವರು ಶೂದ್ರರಾಗಿ ಉಳಿಯುವರು. ಬಸವಣ್ಣನವರ ಕೃಪೆಯಿಂದ ಶೂದ್ರತ್ವದ ಸಂಕೋಲೆಯಿಂದ ಎಂದೋ ಬಿಡುಗಡೆ ಹೊಂದಿದ ಲಿಂಗಾಯತರು ಹಿಂದುವೇ ಆಗಿ ಉಳಿದರೆ ಶೂದ್ರರೇ ಆಗಿರುವುದು ಸ್ವಾಭಾವಿಕ. ಆದ್ದರಿಂದ ಶರಣತ್ವದಿಂದ ಶೂದ್ರತ್ವಕ್ಕೆ ಇಳಿಯುವುದು ಯಾರಿಗೂ ಇಷ್ಟವಾಗದ ವಿಚಾರ.

ಭಾರತ ದೇಶದ ಅಸಂಖ್ಯಾತ ಜನರಿಗೆ ಇನ್ನೂ ಧರ್ಮ ಸಂಸ್ಕಾರ ಲಭ್ಯವಾಗಿಲ್ಲ. ಆದ್ದರಿಂದ ಆ ಎಲ್ಲ ಜನರ ವಿಮುಕ್ತಿಗಾಗಿ, ಅವರೆಲ್ಲರ ಆಶಾಕಿರಣವಾಗಿ, ಮಾತೃಹೃದಯಿ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮವು ಸ್ವತಂತ್ರ ಹಾಗೂ ಅಹಿಂದು ಧರ್ಮ ಎಂದು ಘೋಷಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಈ ಘೋಷಣೆಯ ಹಿಂದಿನ ಉದ್ದೇಶ ಉದಾತ್ತವಾದುದಾಗಿದೆ. **-ಮಾತಾಜಿ**

## ಸಮಸ್ಯೆ-ಸಮಾಧಾನ

- ಬಸವರಾಜೇಂದ್ರಪ್ಪ, ವಿಜಯಪುರ **-ಡಾ|| ಚಿದಾನಂದಮೂರ್ತಿಯವರು ಬಸವಣ್ಣನವರು ಧರ್ಮ ಸ್ಥಾಪಕರಲ್ಲ ; ಅವರಿಗೂ ಮೊದಲು ಅದಿತ್ತು ಇದಿತ್ತು ಎಂದು ಹೇಳುವರಲ್ಲ. ನಿಮ್ಮ ಅಭಿಪ್ರಾಯವೇನು ?.**

★ ಅವರ ಇತ್ತೀಚಿನ ಅಸಂಬದ್ಧ ಪ್ರಲಾಪ ನೋಡಿ ನನಗೆ ಒಂದು ಉತ್ತಮ ಹೋಲಿಕೆ ನೆನಪಾಗುತ್ತಿದೆ. ''ಬಸವಣ್ಣನವರ ಒಂದು ಸುಂದರ ಭಾವಚಿತ್ರವನ್ನು ಮುಂದೆ ಇಟ್ಟುಕೊಂಡು, ಇಂಥ ಮೂಗು ಹಿಂದೆ ಅವರಲ್ಲಿತ್ತು. ಇಂಥ ಹಣೆ ಆ ಅವರಲ್ಲಿತ್ತು. ಇಂಥ ಕಣ್ಣುಗಳು ಇವರಲ್ಲಿತ್ತು ; ಈ ಮೈ ಬಣ್ಣ ಅವರಲ್ಲಿತ್ತು. ಆದ್ದರಿಂದ ಬಸವಣ್ಣನವರು ೧೨ನೆಯ ಶತಮಾನದ ವ್ಯಕ್ತಿ ಎನ್ನಲಾಗದು. ಮೊದಲೇ ಇಂಥ ಕಣ್ಣು, ಅಂಥ ಮೂಗು ಇದ್ದ ಅನೇಕರು ಅಸ್ತಿತ್ವದಲ್ಲಿದ್ದರು'' ಎಂಬ ವಾದದಂತಿದೆ.

- ಹೆಚ್. ಎ.ಶರಣಪ್ಪ, ಬೆಂಗಳೂರು - **ಡಾ|| ಚಿದಾನಂದ ಮೂರ್ತಿಯವರು ಬಹಳ ದೊಡ್ಡ ಸಂಶೋಧಕರೆಂದು ಭಾವಿಸಿದ್ದೆವು. ಅವರ ವಾದದ ಸರಣಿ ನೋಡಿದಾಗ ಅವರ ಸಂಶೋಧನೆಯ ಆಳದ ಬಗ್ಗೆಯೇ ಸಂದೇಹ ಬರುತ್ತಿದೆ.**

★ ಹಾಗೇನು ಸಂದೇಹಿಸಬೇಡಿರಿ. ಸಂಶೋಧನೆಯ ವ್ಯಾಖ್ಯಾನವನ್ನು ಬದಲಾಯಿಸಿದರೆ ಸಾಕು. ಸಂ-ಶೋಧನೆ ಎಂದರೆ ಸತ್ಯಶೋಧನೆ, ಸಮ್ಯಕ್ ಶೋಧನೆ ಎಂದು ಅರ್ಥಮಾಡದೆ, ಇಂಥದನ್ನೇ ಸಿದ್ಧಪಡಿಸಬೇಕು ಎಂದು ಮೊದಲೇ ನಿರ್ಧರಿಸಿಕೊಂಡು ಅದಕ್ಕೆ ಪೂರಕವಾಗುವ ತುಕಡಿ ತುಕಡಿ ಹೇಳಿಕೆಗಳನ್ನು ಹೊಂದಿಸುವವರು ಎಂದು ಅರ್ಥಮಾಡಿದರೆ ಸಾಕು.

-ರಾಜಶೇಖರ ಪಾಟೀಲ್, ಹುಬ್ಬಳ್ಳಿ **-ಲಿಂಗಾಯತರು ವೀರಶೈವರಲ್ಲ ; ಅವು ಬೇರೆ ಬೇರೆ ಎಂದರೆ ಸಮಾಜವು ಒಡೆಯುವುದಲ್ಲ ಎಂಬ ಆತಂಕ ಕಾಡುತ್ತಿದೆ.**

★ ಈಗೇನು ಲಿಂಗಾಯತ ಸಮಾಜವು ಬಹಳ ಚಂದವಾಗಿ ಒಗ್ಗಟ್ಟಿನಿಂದಿದೆಯೆ ? ಈಗ ನೂರಾರು ಹೋಳಾಗಿದೆ, ಸ್ಪಷ್ಟವಾಗಿ ಧ್ರುವೀಕರಣವಾಗುವುದರಿಂದ ಬಸವಣ್ಣನವರನ್ನು ಧರ್ಮಗುರುವೆಂದು ಒಪ್ಪುವ, ವಚನ ಸಾಹಿತ್ಯವನ್ನು ಧರ್ಮಸಂಹಿತೆ ಎಂದು ಮನ್ನಿಸುವ ಲಿಂಗಾಯತರು ; ಇವೆರಡನ್ನೂ ಒಪ್ಪದ ವೀರಶೈವರು ಎಂದು ಎರಡೇ ವರ್ಗೀಕರಣವಾಗುತ್ತದೆ. ಅಲ್ಲದೆ



ಸಮಾಜವು ಒಡೆಯುತ್ತದೆ ಎನ್ನುವುದಕ್ಕೆ ಅರ್ಥವೇ ಇಲ್ಲ. ನೀವು ದಾರಿಯಲ್ಲಿ ಹೋಗುತ್ತಾ ಯಾರನ್ನೋ, ''ಏನ್ರೀ ಶಿವಪ್ಪನವರೇ ಹೇಗಿದ್ದೀರಿ ?'' ಎನ್ನುತ್ತೀರಿ. ಆಗ ಅವರು, ''ನಾನು ಶಿವಪ್ಪ ಅಲ್ರೀ, ಬಸವರಾಜಪ್ಪ ಅನ್ನುತ್ತಾರೆ. ನಿಮ್ಮ ನೆನಪು ಜಾಗೃತವಾಗಿ ''ಅಹುದಲ್ರಿ ಏಕೋ ಮರೆವಾಯಿತು !'' ಎನ್ನುವಿರಿ. ಬಸವರಾಜಪ್ಪನನ್ನು ಮರೆತು ಶಿವಪ್ಪ ಅಂದ ಮಾತ್ರಕ್ಕೆ ಆತನೇನೂ ಸಾಯಲಿಲ್ಲ. ನಿಮ್ಮ ತಪ್ಪು ತಿದ್ದಿಕೊಂಡು ಬಸವರಾಜಪ್ಪನನ್ನು ಮಾತನಾಡಿಸುವಿರಿ. ಹಾಗೆ ಲಿಂಗಾಯತರು ತಪ್ಪುತಪ್ಪಾಗಿ ತಮ್ಮನ್ನು ತಾವು ವೀರಶೈವರೆಂದು ಕರೆದುಕೊಳ್ಳುತ್ತಿದ್ದಾರೆ. ಇದನ್ನು ತೊರೆದು ಸರಿಯಾಗಿ ಲಿಂಗಾಯತ ಎಂದು ಕರೆದುಕೊಂಡರೆ ಸಾಕು.

- ಶಿವರಾಜ್ ಪಾಟೀಲ, ಅತಿವಾಳ, ಬೀದರ್ - **ವೀರಶೈವವಾದಿಗಳು ಇಷ್ಟು ದಿನ ಸುಮ್ಮನೇ ಇದ್ದರು. ನೀವು ಎರಡು ವರ್ಷಗಳಿಂದ ಜನಗಣತಿಯಲ್ಲಿ ಲಿಂಗಾಯತ ಎಂದೇ ಬರೆಸಿರಿ ಎಂದು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಎಲ್ಲ ಭಾಷೆಗಳಲ್ಲಿ ಕರಪತ್ರ ಮುದ್ರಿಸಿ ಪ್ರಚಾರ ಮಾಡುತ್ತಿದ್ದೀರಿ. ಈಗ ವೀರಶೈವವಾದಿಗಳು ಬುದುಗ್ಗನೇ ಎಚ್ಚರಗೊಂಡು ವೀರಶೈವ ಎಂದು ಬರೆಸಿರಿ ಎಂದು ವಿರುದ್ಧ ಪ್ರಚಾರವನ್ನು ಶುರು ಮಾಡಿದ್ದಾರೆ. ಇದರಿಂದ ಜನರಲ್ಲಿ ಗೊಂದಲ ಉಂಟಾಗಿ ಲಿಂಗಾಯತ ಎಂದು ಬರೆಸುವವರ ಸಂಖ್ಯೆ ಕಡಿಮೆಯಾದೀತೇ ಎಂಬ ಸಂದೇಹ ಕಳವಳ ನನ್ನನ್ನು ಕಾಡತೊಡಗಿದೆ.**

★ ಏನೂ ಚಿಂತಿಸಬೇಡಿರಿ. ಏಕೆಂದರೆ ''ವೀರಶೈವ'' ಎಂಬ ಪದವೇ ಶೈವದ ಒಂದು ಪ್ರಭೇದ ಇದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹಿಂದು ಧರ್ಮದಲ್ಲಿ ವೇದ ಆಧಾರಿತ ವೈದಿಕ ಮತ, ಆಗಮ ಆಧಾರಿತ ಶೈವ ಮತಗಳು-ಎರಡು ಪ್ರಬಲ ವಾಹಿನಿಗಳು. ವೀರಶೈವ ಪದ ಇರಿಸಿಕೊಂಡು ಎಷ್ಟು ತಿಪ್ಪರಲಾಗ ಹೊಡೆದರೂ ಅದು ಸ್ವತಂತ್ರ ಧರ್ಮದ ಮಾನ್ಯತೆ ಹೊಂದಲಾರದು. ಆದ್ದರಿಂದ ಲಿಂಗಾಯತರು ಸ್ಪಷ್ಟವಾಗಿ ತತ್ತ್ವ ತಿಳಿದು, ಬರೆಸಿ ಮಾನ್ಯತೆ ಪಡೆದರೆ ಎಷ್ಟೇ ಸಂಖ್ಯೆಯಲ್ಲಿರಲಿ, ಸ್ವತಂತ್ರ ಧರ್ಮದ ಸ್ಥಾನಮಾನ ಹೊಂದಲು ಸಾಧ್ಯವಿದೆ. ಡಾ|| ಚಿ.ಮೂ.ಯವರು ವೀರಶೈವವು ಹಿಂದು ಧರ್ಮದ ಅವಿಭಾಜ್ಯ ಅಂಗ ಎನ್ನುವುದಕ್ಕೆ ತುಂಬಾ ಉತ್ತಮ ದಾಖಲೆ ಕೊಡುತ್ತಿರುವರು. ಆದರೆ ಅವರು ಧೂರ್ತತನದಿಂದ ಲಿಂಗಾಯತ-ವೀರಶೈವಗಳನ್ನು ಕಲಬೆರಕೆ ಮಾಡಲು ಅವಕಾಶ ನೀಡಬಾರದು. ಆದ್ದರಿಂದ ತಿಳುವಳಿಕೆ ಹೊಂದಿದವರು ನಿಖರವಾಗಿ ಲಿಂಗಾಯತ ಎಂದು ಬರೆಸಿದರೆ ಹೇಗಿದ್ದರೂ ಇದು ಸ್ವತಂತ್ರ ಧರ್ಮ ಎಂಬ ಮಾನ್ಯತೆ ಹೊಂದಬಲ್ಲುದಾದ್ದರಿಂದ ಜನಸಂಖ್ಯೆ ಎಷ್ಟೇ ಇರಲಿ ಮುಂದೆ ಮಾನ್ಯತೆ ಪಡೆಯುವುದು.

-ಇಂದು ಶೇಖರ್, ರಾಜಾಜಿನಗರ, ಬೆಂಗಳೂರು - **ಚಿದಾನಂದ ಮೂರ್ತಿಯವರು ವೀರಶೈವಕ್ಕೆ ಒತ್ತು ಕೊಡುತ್ತಾರೆ. ನೀವು ಲಿಂಗಾಯತ ಎಂದು ಖಂಡಿತವಾಗಿ ಹೇಳುತ್ತೀರಿ. ವೀರಶೈವ ಮಹಾಸಭೆ ವೀರಶೈವ /ಲಿಂಗಾಯತ ಎನ್ನುತ್ತದೆ. ಈ ಮಧ್ಯಮ ಮಾರ್ಗವೇ ಒಳ್ಳೆಯದಲ್ಲವೆ ?**

★ ನಮ್ಮ ನಿಲುವೂ ಸರಿ ಇದೆ ; ಚಿದಾನಂದ ಮೂರ್ತಿಯವರ ನಿಲುವೂ ಸರಿ ಇದೆ. ಬಸವಣ್ಣನವರನ್ನು ಧರ್ಮಗುರು ಎಂದು ನಂಬಿದ ಲಿಂಗಾಯತರದು ಒಂದು ಪ್ರತ್ಯೇಕ ಧಾರ್ಮಿಕ ಗುಂಪು ಎಂಬುದು ನಿಸ್ಸಂದೇಹಾತ್ಮಕವಾಗಿ ಸಿದ್ಧಪಡಿಸಲು ಸಾಧ್ಯ. ವೀರಶೈವರು ತಮ್ಮದನ್ನು ತಾವು ಹೇಗಾದರೂ ಸಮರ್ಥಿಸಿಕೊಳ್ಳಲಿ. ಎರಡೂ ಸೇರಿಸುವುದು ಹೇಗೆಂದರೆ ಚುನಾವಣಾ ಪತ್ರದಲ್ಲಿ ಕಣದಲ್ಲಿ ನಿಂತ ಎಲ್ಲಾ ಅಭ್ಯರ್ಥಿಗಳಿಗೆ ಮುದ್ರೆ ಒತ್ತಿದಂತೆ, ಆ ಮತವು ಅಸಿಂಧು (invalid) ಆಗುತ್ತದೆ. ಚಳ್ಳಕೆರೆ ತಾಲ್ಲೋಕಿನ ಒಂದು ಗ್ರಾಮದಲ್ಲಿ ಇಬ್ಬರು ಸ್ನೇಹಿತರು ತೋಟಕ್ಕೆ ಹೋಗಿದ್ದರು. ಬಸವರಾಜು ಎಂಬುವವ ಬಲ್ಲಿದ ಈಜುಗಾರ; ಮತ್ತೊಬ್ಬ ಈಜು ಬರದವ ಭಾವಿಕಟ್ಟೆ ಮೇಲೆ ನಿಂತು ಸ್ನಾನ ಮಾಡುತ್ತ ಕಾಲುಜಾರಿದ. ಆ ಮಿತ್ರನನ್ನು ಉಳಿಸಲು ಬಸವರಾಜು ಹೋದಾಗ ಆತನು ಬಿಗಿದಪ್ಪಿದ್ದರಿಂದ ಈತನೂ ಈಜು ಹೊಡೆಯಲಾರದೆ ಮುಳುಗಿದ. ಹಾಗೆಯೇ ಸ್ವಂತ ಶಕ್ತಿಯಿಲ್ಲದ ವೀರಶೈವವನ್ನು ಉಳಿಸಲು ಲಿಂಗಾಯತವು ಯತ್ನಿಸಿದರೆ ಅದನ್ನು ಉಳಿಸಲಸಾಧ್ಯ ಮತ್ತು ತಾನೂ ಮುಳುಗಬೇಕಾದೀತು. ★★

# ಗುರುಚರಣಕೆ ನುಡಿ ನಮನ

## ಸದ್ಗುರು ಲಿಂಗಾನಂದ ಜ್ಯೋತಿ

ಜ್ಯೋತಿಯ ನೋಡಿದಿರಾ ! ದಿವ್ಯ ಜ್ಯೋತಿಯ ನೋಡಿದಿರಾ
ಗುರು ಲಿಂಗಾನಂದರೆಂಬ ; ಶುಭ ನಾಮದೊಳು ಮೆರೆದು
ಜಗದ ಕತ್ತಲೆ ಕಳೆದು ; ಜನ ಮನವ ಬೆಳಗಿದ ಜ್ಯೋತಿ ॥
ಮಣಗವಳ್ಳಿಯೊಳು ಉದಿಸಿ , ಮಂಗಳ ಬೆಳಕಾಗಿ
ಬಸವ ಧರ್ಮದ ಕಿರಣ , ವಿಶ್ವಕ್ಕೆ ಬಿತ್ತರಿಸಿದ
ಶತಕೋಟಿ ಸೂರ್ಯ ಪ್ರಕಾಶದ ಜ್ಯೋತಿ ॥
ಜಾತಿ ಭೂತವ ಹಿಡಿದ , ಜಗದ ಭ್ರಾಂತಿಯ ಬಿಡಿಸಿ
ಸತ್ಯ ಧರ್ಮಾಮೃತವ , ತುತ್ತು ಮಾಡಿ ಉಣಿಸಿದ
ಬತ್ತಿ ಹೋದ ಧರ್ಮದ ಸೆಲೆ , ಮತ್ತೆ ಹರಿಸಿದ ಜ್ಯೋತಿ ॥
ಪಶುವಿನಂದದಿ ವಿಷಯ ಕೆಸರೊಳು ಮುಳುಗಿದ್ದ ಜನರ
ವಿಷಯದ ನಿಶೆ ಇಳಿಸಿ , ಭಸಿತವನು ಪೂಸಿಸುತ
ಪರಮಾನಂದದ ಸುಧೆಯ ಕರೆಕರೆದು ನೀಡಿದ ಜ್ಯೋತಿ ॥
ಬರಿಯ ಭ್ರಮೆಯನು ಬಿಡಿಸಿ, ಬಸವ ಮಂತ್ರವ ಕಲಿಸಿ
ವಚನಗಳ ಪ್ರವಚನ ಮಾಡುತ್ತ ಚರಜಂಗಮವಾಗಿ ಜಗದ ಮೇಲೆ
ಪ್ರವಚನ ಪಿತಾಮಹರೆಂಬ ಖ್ಯಾತಿಗಳಿಸಿದ ಜ್ಯೋತಿ ॥
ಲಿಂಗದ ನಿಷ್ಠೆಯ ಕಲಿಸಿ, ಜಂಗಮತ್ವವ ತಿಳಿಸಿ
ಲಿಂಗಾಂಗ ಸಮರಸದ ಗುಂಗು ಹಿಡಿಸುತಲಿ
ದರುಶನ ಮಾತ್ರದಲಿ ಹರುಷ ನೀಡುವ ಜ್ಯೋತಿ ॥
ಜಗದ ಕಲ್ಯಾಣಕಾಗಿ, ತನು ಮನವ ಸವೆಸುತಲಿ
ಕಾರಣಕೆ ಅವತರಿಸಿ ಕಾರ್ಯವನು ಪೂರೈಸಿ
ಬಯಲೊಳು ಬಯಲಾದ ಬ್ರಹ್ಮತೇಜದ ಜ್ಯೋತಿ ॥
ಆದಿ ಅಂತ್ಯವ ಕಳೆದು, ಜ್ಞಾನ ಬ್ರಹ್ಮವ ಉಳಿದು
ಅಂಗ ಲಿಂಗದಿ ಬೆರೆದು, ಘನಲಿಂಗವೇ ತಾನಾಗಿ
ಸಂಗಮ ಕ್ಷೇತ್ರದೊಳು, ಮಂಗಲ ಗೊಂಡಿಹ ಜ್ಯೋತಿ ॥

-ಮಹಾದೇವ ಗುಡೇರ
ಜೆ.ಎಸ್.ಎಸ್. ಕಾಲೇಜು, ಗೋಕಾಕ್

## ಜನಗಣತಿ ಸಲುವಾಗಿ ತೀವ್ರ ಪ್ರಯತ್ನ

ಹತ್ತು ವರ್ಷಗಳಿಗೊಮ್ಮೆ ಬರುವ ಜನಗಣತಿಯು ೨೦೦೧ಕ್ಕೆ ಪುನಃ ಬರಲಿದೆ. ಆದ್ದರಿಂದ ಲಿಂಗಾಯತರು ತಮ್ಮ ಧರ್ಮದ ಹೆಸರು ಬರೆಸಲು ಇದು ಸದವಕಾಶ ನೀಡುತ್ತದೆ. ಪ್ರತಿಯೊಬ್ಬರೂ ದಿನಾಲು ಒಂದೆರಡು ತಾಸುಗಳನ್ನು ಈ ಪ್ರಚರಕ್ಕೆ ಮೀಸಲಿಡಬೇಕು. ರಜಾ ದಿನಗಳಂದು ಹಳ್ಳಿಗಳನ್ನು ಸಂದರ್ಶಿಸಿ ಪ್ರಚಾರ ಮಾಡಿಬರಬೇಕು.



### ಅಶ್ವಾರೂಢ ಬಸವಣ್ಣನವರ ಪುತ್ಥಳಿಯ ಬಳಿ

# ಲಿಂಗಾಯತ ಜನಗಣತಿ ಕುರಿತು

## ಪ್ರಚಾರ ಆಂದೋಲನ ಉದ್ಘಾಟನೆ

"೧೨ನೆಯ ಶತಮಾನದಲ್ಲಿ ಆಗಿ ಹೋದ ವಿಶ್ವಗುರು ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ, ವಚನ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡ ಲಿಂಗಾಯತ ಧರ್ಮವು ಒಂದು ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮ. ಇದು ಕೇವಲ ಒಂದು ಜಾತಿಯಲ್ಲ, ಮತವಲ್ಲ, ಪಂಥ ಪಂಗಡವಲ್ಲ ಆದ್ದರಿಂದ ಲಿಂಗಾಯತ ಧರ್ಮೀಯರು ಮುಂಬರುವ ೨೦೦೧ನೆಯ ಇಸವಿಯಲ್ಲಿ ಭಾರತ ಸರಕಾರವು ನಡೆಸುವ ಧರ್ಮವಾರು ಜನಗಣತಿಯಲ್ಲಿ ೮ನೆಯ ಕಾಲಂ ಧರ್ಮ ಎಂದಿರುವಲ್ಲಿ ಕೇವಲ ಲಿಂಗಾಯತ ಎಂದು ಬರೆಸಬೇಕೇ ವಿನಾ ಹಿಂದು ಲಿಂಗಾಯತ, ವೀರಶೈವ ಲಿಂಗಾಯತ, ವೀರಶೈವ ಎಂದಲ್ಲ. ಈ ಜಾಗೃತಿಯನ್ನು ಮಾಡಲಿಕ್ಕೆ ಇಂದು ನೀವೆಲ್ಲರೂ ಸನ್ನದ್ಧರಾಗುವ ಸಂಕಲ್ಪ ತೊಡಬೇಕು. ಲಿಂಗಾಯತ ಎಂದರೆ ಸಂಕುಚಿತ ಮನೋಭಾವವಲ್ಲ, ವಿಶ್ವಬಂಧುತ್ವ ; ಲಿಂಗಾಯತವು ಒಂದು ಸ್ವತಂತ್ರ ಧರ್ಮ ಎಂದು ತಿಳಿದು, ಜಗತ್ತಿಗೆ ತಿಳಿಸುವ ಮೂಲಕ ಶ್ರೇಷ್ಠ ಪ್ರವಾದಿ ಬಸವಣ್ಣನವರ ಸಾಧನೆಯನ್ನು ಜಗತ್ತಿಗೆ ತೋರಿಸಿ ಕೊಟ್ಟಂತಾಗುವುದಲ್ಲದೆ ಭಾರತೀಯ ಧರ್ಮ ಪರಂಪರೆಗೆ ಹೊರಗಾಗದೆಯೇ ಧರ್ಮ ಸಂಸ್ಕಾರವಿಲ್ಲದ ಎಲ್ಲರೂ ಧರ್ಮ ಸಂಸ್ಕಾರವನ್ನು ಪಡೆಯಲು ಸಾಧ್ಯವೆಂಬ ಭರವಸೆ ಹುಟ್ಟಿಸಬಹುದು." ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಅಶ್ವಾರೂಢ ಬಸವಣ್ಣನವರ ಪುತ್ಥಳಿಯ ಮುಂದೆ ಧ್ವಜಾರೋಹಣವನ್ನು ಮಾಡಿ ಪ್ರಚಾರ ಆಂದೋಲನವನ್ನು ಉದ್ಘಾಟಿಸಿದ ಪೂಜ್ಯ ಶ್ರೀ ಮಾತೆ ಮಹಾದೇವಿಯವರು ಪ್ರಚಾರ ಕಾರ್ಯಕ್ರಮದ ಅಗತ್ಯವನ್ನು ಕರ್ನಾಟಕ ರಾಜ್ಯದಾದ್ಯಂತ ಮತ್ತು ಹೊರರಾಜ್ಯಗಳಲ್ಲೂ ಪ್ರಚಾರ ಮಾಡುವುದಕ್ಕೆ ಅನೇಕ ಮಾತೆಯರನ್ನು, ಸ್ವಾಮೀಜಿಗಳನ್ನು ಆಯೋಜಿಸಿದರು. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ವಿಶ್ವಕಲ್ಯಾಣ ಮಿಷನ್‌ನ ಬಸವ ಮಂಟಪದ ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳು, ದಾವಣಗೆರೆಯ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯದ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಬೀದರಿನ ಪೂಜ್ಯ ಶ್ರೀ ಸಿದ್ಧೇಶ್ವರಾನಂದ ಸ್ವಾಮಿಗಳು, ನವದೆಹಲಿಯ ಪೂಜ್ಯ ಶ್ರೀ ಮಾತೆ ಮಂಗಳಾದೇವಿಯವರು, ಬೆಳಗಾಂವ ಜಿಲ್ಲೆಯ ಗೋಕಾಕದ ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು, ಕೂಡಲ ಸಂಗಮದ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳನ್ನು ಬೇರೆ ಬೇರೆ ಭಾಗಗಳಿಗೆ ನಿಯೋಜಿಸಿದರು.

ಮಹಾರಾಷ್ಟ್ರ ರಾಜ್ಯದ ರಾಷ್ಟ್ರೀಯ ಬಸವ ದಳದ ಅಧ್ಯಕ್ಷೆ ಶರಣೆ ಮಾಲೂತಾಯಿ ಚಂದ್ರಕಾಂತ ಸ್ವಾಮಿ, ಆಂಧ್ರದ ಅಧ್ಯಕ್ಷ ಶರಣ ಸುಭಾಷ್ ಪಾಟೀಲ್, ಕರ್ನಾಟಕ ರಾಜ್ಯದ ಅಧ್ಯಕ್ಷ ಶರಣ. ವೀರಣ್ಣ ಕೊರ್ಲಳ್ಳಿ ಇವರಿಗೆ ರಾಜ್ಯದಾದ್ಯಂತ ತಿರುಗಾಡಿ ಜನಗಣತಿ ವಿಷಯದಲ್ಲಿ ಲಿಂಗಾಯತ ಜನ ಸಾಮಾನ್ಯರಿಗೂ ವಿಷಯ ತಲ್ಪಿಸಲು ಹೊಣೆಗಾರಿಕೆ ವಹಿಸಿದರು.

ಜನ ಗಣತಿಯ ನಿರ್ದೇಶಕರಿಗೆ ಮನವಿಯನ್ನು ಅರ್ಪಿಸಲಾಯಿತು. ಸನ್ಮಾನ್ಯ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ, ಗೌರವಾನ್ವಿತ ರಾಜ್ಯಪಾಲರಿಗೆ ಮನವಿಯನ್ನು ಅರ್ಪಿಸಿ, ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾದ್ದರಿಂದ ಅದಕ್ಕೆ ಮಾನ್ಯತೆ ನೀಡಿ ಬೌದ್ಧ,

ಜೈನ, ಸಿಖ್ ಧರ್ಮಗಳಂತೆ ಜನಗಣತಿಯಲ್ಲಿ ಪ್ರತ್ಯೇಕ ಗಣತಿಗೆ ಅವಕಾಶ ಮಾಡಿಕೊಡಲು ಶಿಫಾರಸು ಮಾಡಬೇಕೆಂದು ಕೋರಿಕೆ ಸಲ್ಲಿಸಲಾಯಿತು. ವಿವಿಧ ರಾಜ್ಯಗಳಿಂದ ಬಂದಿದ್ದ ರಾಷ್ಟ್ರೀಯ ಬಸವ ದಳಗಳ ಪ್ರಮುಖರು ಹಿಂದಿನ ಸರ್ಕಾರವು ಮಾತ್ಸರ್ಯಪೂರ್ಣ ಮಠಾಧೀಶರ ಪ್ರಚೋದನೆಯಿಂದ ರಾಜಕೀಯ ಒತ್ತಡಕ್ಕೆ ಒಳಗಾಗಿ ಮುಟ್ಟುಗೋಲು ಹಾಕಿಕೊಂಡಿರುವ **"ಬಸವ ವಚನ ದೀಪ್ತಿ"** ಪುಸ್ತಕದ ಮೇಲಿನ ನಿರ್ಬಂಧ ತೆಗೆದುಹಾಕಿ ದಿನನಿತ್ಯ. ಅದರ ಪಾರಾಯಣ-ಪಠಣ ಮಾಡುವವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿಕೆ ಸಲ್ಲಿಸಿದರು.

ಪ್ರಚಾರ ಕಾರ್ಯಕ್ರಮ ಉದ್ಘಾಟನೆಗೂ ಮೊದಲು ವಿವಿಧ ರಾಜ್ಯಗಳು, ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಆಗಮಿಸಿದ್ದ ಬಸವ ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಮೆರವಣಿಗೆ-ಪಥ ಸಂಚಲನದ ಮೂಲಕ ನಗರ್ತಪೇಟೆಯ ಶ್ರೀ ನಗರೇಶ್ವರ ದೇವಾಲಯದಿಂದ ಹೊರಟರು. ಬಸವೇಶ್ವರರ ಬೃಹತ್ ಭಾವಚಿತ್ರದ ಮೆರವಣಿಗೆಯನ್ನು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಉದ್ಘಾಟಿಸಿದರು. ಲಿಂಗಾಯತ ಧರ್ಮ ಮಹಾಸಭಾಧ್ಯಕ್ಷ ಶರಣ. ಎನ್.ಪುಟ್ಟರುದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ಶರಣೆ. ದೇವಿಕಾ ಶರಣಪ್ಪ ಮೆರವಣಿಗೆಯ ಮುಂದಾಳತ್ವ ವಹಿಸಿದ್ದರು. ದಾರಿಯುದ್ದಕ್ಕೂ ಕಾವಿಯ ಸ್ಕಾರ್ಫ್ ಹೊದ್ದ ಶರಣರ ಕೋಲಾಟ, ಜಯಘೋಷಗಳು ಜನತೆಗೆ ಆಕರ್ಷಣೀಯವಾಗಿದ್ದವು.

**-ವರದಿ : ಶಿವಕುಮಾರ ಡಾಕುಳಗೆ**

---

### ದಿ. ೨೩-೫-೨೦೦೦ ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ವಿವರ

## ಲಿಂಗಾಯತರನ್ನು ಪ್ರತ್ಯೇಕವಾಗಿ ಜನಗಣತಿಯಲ್ಲಿ ಲೆಕ್ಕ ಮಾಡಲು ಮನವಿ

ಹನ್ನೆರಡನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಂದ ಕೊಡಲ್ಪಟ್ಟ ಲಿಂಗಾಯತ ಧರ್ಮವು ಒಂದು ಸ್ವತಂತ್ರ, ಸ್ವಾವಲಂಬಿ ಮತ್ತು ಪ್ರಗತಿಪರ ಧರ್ಮವಾದುದರಿಂದ ೨೦೦೧ನೆಯ ಇಸವಿಯಲ್ಲಿ ಭಾರತ ಸರಕಾರವು ನಡೆಸುವ ಜನಗಣತಿಯಲ್ಲಿ ಲಿಂಗಾಯತ ಸಮಾಜದ ಜನಸಂಖ್ಯೆಯನ್ನು ಪ್ರತ್ಯೇಕವಾಗಿ ಗಣತಿ ಮಾಡಬೇಕೆಂದು ; ಇದು ಹಿಂದು ಧರ್ಮದ ಒಂದು ಅಂಗವಲ್ಲ ; ಒಂದು ಜಾತಿಯಲ್ಲ. ಆದ್ದರಿಂದ ಹಿಂದು ಧರ್ಮದ ಜೊತೆಗೆ ಸೇರಿಸಬಾರದು ಎಂದು ; ವೀರಶೈವವು ಸಪ್ತಶಾಖೆಗಳಲ್ಲಿ ಒಂದು ಶಾಖೆಯಾದ ಕಾರಣ ಅದು ಹಿಂದು ಧರ್ಮದ ಅವಿಭಾಜ್ಯ ಅಂಗವಾದ ಕಾರಣ ಸ್ವತಂತ್ರ ಧರ್ಮವಾದ ಲಿಂಗಾಯತವನ್ನು ವೀರಶೈವದೊಡನೆ ಸಮೀಕರಿಸಿ ವೀರಶೈವ ಲಿಂಗಾಯತ ಎಂದಾಗಲಿ, ಲಿಂಗಾಯತ ವೀರಶೈವ ಎಂದಾಗಲಿ ಗಣತಿ ಮಾಡಬಾರದೆಂದು ಜನಗಣತಿಯ ನಿರ್ದೇಶಕರಲ್ಲಿ ಮನವಿ ಸಲ್ಲಿಸಲಾಗಿದೆಯಲ್ಲದೆ ; ಈ ಬಗ್ಗೆ ತಾವು ಸಹ ಶಿಫಾರಸು ಮಾಡಬೇಕೆಂದು ಸನ್ಮಾನ್ಯ ರಾಜ್ಯಪಾಲರಿಗೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ." ಎಂದು ಬಸವ ಧರ್ಮ ಪೀಠದ ಅಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು. ಅವರು ಇಂದು ಕರೆದಿದ್ದ ಪತ್ರಿಕಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, "ಡಾ|| ಚಿದಾನಂದಮೂರ್ತಿಯವರು ವೀರಶೈವರು ಹಿಂದುಗಳು; ನನ್ನ ಬಳಿ ದಾಖಲೆಗಳಿವೆ" ಎಂದು ಹೇಳುತ್ತಿರುವುದು ನೂರಕ್ಕೆ ನೂರು ಸತ್ಯ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನನ್ನು ಆರಾಧಿಲು ಹೇಳುವುದರಿಂದ ವೀರಶೈವವು ಹಿಂದೂ ಶೈವದ ಶಾಖೆಗಳಲ್ಲಿ ಒಂದು. ಆದರೆ ಲಿಂಗಾಯತವು ಒಂದು ಧರ್ಮ, ಅದು ಯಾವುದರ ಶಾಖೆಯೂ ಅಲ್ಲ. ಲಿಂಗಾಯತ ಧರ್ಮದ ಸ್ಥಾಪಕರಾದ ವಿಶ್ವಗುರು ಬಸವಣ್ಣನವರು ಪೂಜಿಸಲು ಹೇಳಿರುವುದು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನನ್ನಲ್ಲ ಅಥವಾ ಬೇರಾವುದೇ ದೇವತೆಯನ್ನಲ್ಲ ; ಸೃಷ್ಟಿಕರ್ತನಾದ



ಪರಮಾತ್ಮನನ್ನು. ಲಿಂಗಾಯತ ಧರ್ಮಕ್ಕೆ ವಚನ ಸಾಹಿತ್ಯವೇ ಧಾರ್ಮಿಕ ಸಂವಿಧಾನ ; ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗವೇ ಉಪಾಸ್ಯ ವಸ್ತು ಇದು ಹೋಮ-ಹವನ-ಯಜ್ಞ ಯಾಗಾದಿಗಳನ್ನು ಒಪ್ಪುವುದಿಲ್ಲ. ವರ್ಣವ್ಯವಸ್ಥೆ ಜಾತಿಪದ್ಧತಿ, ಪುರೋಹಿತ ಶಾಹಿಗಳನ್ನು ನಿರಾಕರಿಸುವ ಲಿಂಗಾಯತವನ್ನು ವೀರಶೈವದೊಡನೆ ಎಂದೂ ಸಮೀಕರಿಸಬಾರದು" ಎಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

"ಡಾ|| ಚಿದಾನಂದ ಮೂರ್ತಿಯವರಾಗಲೀ, ಇನ್ನಿತರ ವೀರಶೈವ ವಾದಿಗಳಿರಲಿ ಅವರು ವೀರಶೈವವನ್ನು ವಚನ ಸಾಹಿತ್ಯದ ಆಧಾರ ತೆಗೆದುಕೊಳ್ಳದೆ ಪ್ರತಿಪಾದಿಸಲು ಯಾರ ಅಭ್ಯಂತರವೂ ಇಲ್ಲ. ಅದರ ಸಂಸ್ಥಾಪಕರು ಯಾರು ಎಂದು ಹೇಳಲು ಅವರು ಸರ್ವತಂತ್ರ ಸ್ವತಂತ್ರರು. ಆದರೆ ವೀರಶೈವವಾದಿಗಳಿಗೆ ಜಾತಿವರ್ಣವರ್ಗರಹಿತ ಧರ್ಮಸಹಿತ ಶರಣ ಸಮಾಜ ಕಟ್ಟುವ ಉದಾತ್ತ ಉದ್ದೇಶವುಳ್ಳ ವಚನ ಸಾಹಿತ್ಯವನ್ನು ಬಳಸಿಕೊಂಡು ವೀರಶೈವವನ್ನು ಪ್ರತಿಪಾದಿಸಲು ಯಾವ ನೈತಿಕ ಹಕ್ಕೂ ಇಲ್ಲ. ಆದ್ದರಿಂದ ಡಾ|| ಚಿದಾನಂದ ಮೂರ್ತಿಯವರಾಗಲೀ, ಇನ್ನಿತರ ವೀರಶೈವವಾದಿಗಳಾಗಲೀ ಲಿಂಗಾಯತ ಧರ್ಮವನ್ನು ವಚನ ಸಾಹಿತ್ಯವನ್ನು ಬಳಸಿಕೊಂಡು ವೀರಶೈವವನ್ನು ಬದುಕಿಸುವ ಕಲಬೆರಕೆ ಕೆಲಸವನ್ನು ಕೈಬಿಡಬೇಕು. ಅತ್ಯಂತ ಸುಂದರವು, ಸಮಗ್ರವು, ವೈಚಾರಿಕವೂ, ವೈಜ್ಞಾನಿಕವೂ ಆಗಿರುವ, ಏಕದೇವೋಪಾಸನೆಯ ಮೂಲಕ ಮೂಢನಂಬಿಕೆ, ಶೋಷಣೆಗಳಿಂದ ಜನರನ್ನು ಮುಕ್ತ ಮಾಡುವ ಲಿಂಗಾಯತ ಧರ್ಮವನ್ನು ಅರ್ಥಾತ್ ಶರಣರ ಕೊಡುಗೆಯನ್ನು ವಿಕೃತಗೊಳಿಸುವ ಧೂರ್ತತಂತ್ರವನ್ನು ಸ್ಪಷ್ಟವಾಗಿ ವಿರೋಧಿಸುವ ಕಾಲ ಈಗ ಸನ್ನಿಹಿತವಾಗಿದೆ. ಎಂದು ಮಾತೆ ಮಹಾದೇವಿಯವರು ಸ್ಪಷ್ಟಪಡಿಸಿದರು.

ವಿಶ್ವಹಿಂದೂ ಪರಿಷತ್, ಹಿಂದೂ ಮಹಾಸಭಾ ಮುಂತಾದವು 'ಹಿಂದು ಒಂದು ಧರ್ಮವಲ್ಲ, ಹಲವಾರು ಧರ್ಮಗಳ ಒಕ್ಕೂಟ' ಎಂದು ಪ್ರತಿಪಾದಿಸಿದಂತೆ ನಾವೂ ಈವರೆಗೂ ಪ್ರತಿಪಾದಿಸಿದೆವು. ಆದರೆ ಜನಗಣತಿಯಲ್ಲಿ ಭಾರತ ಸರ್ಕಾರವು ಹಿಂದು ಒಂದು ಧರ್ಮ ಎಂದೇ ಘೋಷಿಸಿದೆ. ಹಿಂದು ಒಂದು ಧರ್ಮವಾದರೆ ಅದರ ಸಮಾಜ ಶಾಸ್ತ್ರವು ಚತುರ್ವರ್ಣಗಳನ್ನು ಪ್ರತಿಪಾದಿಸುವುದರಿಂದ ಜನ್ನಿವಾರವನ್ನು ಧರಿಸದ ಲಿಂಗಾಯತರು ಶೂದ್ರವರ್ಣಕ್ಕೆ ಸೇರಬೇಕಾಗುತ್ತದೆ. ನಮ್ಮೆಲ್ಲರನ್ನು ಶೂದ್ರತ್ವದ ಸಂಕೋಲೆಯಿಂದ ಎಂದೋ ಬಿಡಿಸಿ ಧರ್ಮಗುರು ಬಸವಣ್ಣನವರು ಶರಣತ್ವಕ್ಕೆ, ಜಂಗಮತ್ವಕ್ಕೆ ಏರಿಸಿರುವಾಗ ಪುನಃ ಶೂದ್ರತ್ವದ ಸಂಕೋಲೆಗೆ ನಾವೇಕೆ ಸಿಗಬೇಕು ? " ಎಂದು ಪ್ರಶ್ನಿಸಿದರು.

ಆದ್ದರಿಂದ ಸಾಂಸ್ಕೃತಿಕವಾಗಿ ಹಿಂದೂ ಆಚರಣೆಗಳನ್ನು ವೇಷಭೂಷಣ ಇತ್ಯಾದಿಗಳಲ್ಲಿ ಅಳವಡಿಸಿಕೊಂಡಿದ್ದರೂ ಲಿಂಗಾಯತರು ಧಾರ್ಮಿಕವಾಗಿ ಹಿಂದುಗಳಲ್ಲ. ಯಾವ ತತ್ತ್ವದ ತಳಹದಿಯ ಮೇಲೆ ಭಾರತ ದೇಶದಲ್ಲೇ ಹುಟ್ಟಿದ್ದರೂ ಜೈನ, ಬೌದ್ಧ, ಸಿಖ್ ಧರ್ಮಗಳನ್ನು ಅಹಿಂದು ಧರ್ಮಗಳನ್ನಾಗಿ ಪ್ರತ್ಯೇಕವಾಗಿ ಗುರುತಿಸಿ, ಮಾನ್ಯತೆ ನೀಡಿ, ಜನಗಣತಿ ಮಾಡಲಾಗುತ್ತಿದೆಯೋ ಅದೇ ರೀತಿ ಅದೇ ಆಧಾರದ ಮೇಲೆ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡಿ, ಲಿಂಗಾಯತರ ಜನಗಣತಿಯನ್ನು ಮಾಡಬೇಕಾದುದು ಕೇಂದ್ರ ಸರಕಾರದ ಕರ್ತವ್ಯ. ಲಿಂಗಾಯತರು ಜನಗಣತಿಯಲ್ಲಿ ಸರಿಯಾಗಿ ದಾಖಲೆ ಮಾಡಲು ಜನಜಾಗೃತಿಯನ್ನು ಹಮ್ಮಿಕೊಳ್ಳಲಾಗಿದೆ. " ಎಂದು ಜಗದ್ಗುರು ಮಾತೆ ಮಹಾದೇವಿಯವರು ನುಡಿದರು. ಪತ್ರಿಕಾಗೋಷ್ಠಿಯಲ್ಲಿ ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕ್ಷ ಎನ್.ಪುಟ್ಟರುದ್ರ, ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ಪೂಜ್ಯ ಮಾತೆ ಗಂಗಾದೇವಿ, ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ವೀರಣ್ಣ ಕೊರ್ಲಹಳ್ಳಿ ಭಾಗವಹಿಸಿದ್ದರು. ★

## ಬಸವ ಜಯಂತಿ

# ದಯೆ-ಮಾನವೀಯತೆಗಳೇ ಧರ್ಮದ ಸ್ತಂಭಗಳು

-ಜಗದ್ಗುರು ಮಾತೆ ಮಹಾದೇವಿ

"ದಯೆ-ಮಾನವೀಯತೆಗಳೇ ಧರ್ಮದ ಆಧಾರ ಸ್ತಂಭಗಳು. ಆಚಾರ-ವಿಧಿ-ವಿಧಾನಗಳಿಗಿಂತಲೂ ದಯೆಯೇ ಧರ್ಮದ ಮೂಲ' ಎಂದು ಹೇಳುವ ಮೂಲಕ ವಿಶ್ವಗುರು ಬಸವಣ್ಣನವರು ಮಾನವೀಯತೆಯನ್ನು ಎತ್ತಿಹಿಡಿದಿದ್ದಾರೆ. ಸೃಷ್ಟಿಕರ್ತ ಪರಮಾತ್ಮನು ಜಗತ್ತಿನ ಮೇಲೆ ಅಪಾರ ಕರುಣೆಯುಳ್ಳವನಾಗಿದ್ದಾನೆ ಎಂದೇ ಇದರ ಉದ್ಧಾರಕ್ಕಾಗಿ ಬಸವಣ್ಣನವರಂಥ ಮಹಾಪುರುಷರನ್ನು ಸೃಷ್ಟಿಸಿದ್ದಾನೆ. ಬುದ್ಧ, ಏಸು, ಮಹಾವೀರ, ಮೊಹಮ್ಮದ್, ಬಸವಣ್ಣನವರು ಜಗತ್ತಿನ ಮಾನವ-ಕುಲಕೋಟಿಯ ಮೇಲೆ ದಯೆ ಇರಿಸಿಯೇ ಧರ್ಮ-ದರ್ಶನಶಾಸ್ತ್ರಗಳನ್ನು ಕೊಟ್ಟರು. ಹೀಗಾಗಿಯೇ ಬಸವಣ್ಣನವರು ಅಮರಾತ್ಮರು, ಪೂಜಾರ್ಹರು ಆಗಿದ್ದಾರೆ." ಎಂದು ಜಗಜ್ಯೋತಿ ಬಸವಣ್ಣನವರ ೮೬೭ನೆಯ ಜಯಂತಿ ಉತ್ಸವದಂದು ಶ್ರೀಗುರು ಬಸವಣ್ಣನವರ ಸುಂದರ ಅಮೃತಶಿಲಾ ಪುತ್ಥಳಿಯನ್ನು ಪ್ರತಿಷ್ಠಾಪಿಸಿದ ಬಸವ ಧರ್ಮಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ರಾಜಾಜಿನಗರದ ಎರಡನೆ ಬ್ಲಾಕಿನಲ್ಲಿರುವ ಬಸವ ಮಂಟಪದಲ್ಲಿ ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯನ್ನು ಪ್ರತಿಷ್ಠಾಪಿಸಿ, ಚಿತ್ಕಳಾಧಾರಣ ಮಾಡಿದ ಬಳಿಕ ಮಾತನಾಡಿದ ಪೂಜ್ಯ ಮಾತೆ ಮಹಾದೇವಿಯವರು, "ಪರಮಾತ್ಮನೆಂದರೆ ತಂದೆ ಇದ್ದಂತೆ, ಮಹಾತ್ಮರೆಂದರೆ ತಾಯಿ ಇದ್ದಂತೆ. ಮಕ್ಕಳು ತಾಯಿಯ ಮೂಲಕ ತಂದೆಯಲ್ಲಿ ಬೇಡಿಕೆ ಸಲ್ಲಿಸುವಂತೆ ಮುಮುಕ್ಷುಗಳು ಗುರುವಿನ ಮೂಲಕ ದೇವನ ಕರುಣೆಯನ್ನು ಹೊಂದುತ್ತಾರೆ. ದೇವರು ನಿರಾಕಾರ ; ಅವನು ನೇರವಾಗಿ ಮಾತನಾಡಲಾರ. ಅವನ ಪ್ರತಿನಿಧಿಗಳಾಗಿ ಮಹಾಪುರುಷರು ಮಾತನಾಡುವುದರಿಂದ ಮಹಾತ್ಮಾ ಬಸವಣ್ಣನವರಂಥವರು ಮಾತನಾಡುವ ದೇವರು ಎನ್ನಿಸಿಕೊಳ್ಳುತ್ತಾರೆ. ಅದಕ್ಕಾಗಿಯೇ ನಡೆಯ ಕಲಿಸಿದ ಬಸವ, ನುಡಿಯ ಕಲಿಸಿದ ಬಸವ ಎಂದು ಶರಣರು ಮನದುಂಬಿ ಕೊಂಡಾಡಿದರು" ಎಂದು ಪೂಜ್ಯ ಮಾತೆ ಮಹಾದೇವಿಯವರು ನುಡಿದರು.

"ಜಗತ್ತಿನ ಮೊಟ್ಟ ಮೊದಲ ಲೋಕಸಭೆ ಎಂಬ ಅಗ್ಗಳಿಕೆಗೆ ಪಾತ್ರವಾದ ಅನುಭವ ಮಂಟಪ ಎಂಬ ಸಂಸ್ಥೆಯನ್ನು ಕಟ್ಟಿದ ಬಸವಣ್ಣನವರು ಜಾತಿವರ್ಣವರ್ಗರಹಿತ ಧರ್ಮ ಸಹಿತ ಸಮತಾವಾದಿ ಸಮಾಜವನ್ನು ಕಟ್ಟಲು ಬೇಕಾದ ಮೌಲ್ಯಗಳನ್ನು ವಚನ ಸಾಹಿತ್ಯದ ಮೂಲಕ ಅಂದೇ ಪ್ರತಿಪಾದಿಸಿದ್ದಾರೆ. ಭೌತಿಕವಾದ ತಳಹದಿಯ ಮೇಲೆ ಕೊಡಲ್ಪಟ್ಟ ಬಸವಣ್ಣನವರ ಸಮತಾವಾದ ಇದೀಗ ಜಗತ್ತಿನ ಗಮನವನ್ನು ಹೆಚ್ಚುಹೆಚ್ಚಾಗಿ ಸೆಳೆಯುತ್ತ ಬಸವಣ್ಣನವರು ಹೆಚ್ಚು ಪ್ರಸ್ತುತರಾಗುತ್ತಿದ್ದಾರೆ" ಎಂದು ನುಡಿದರು.

ಶೂನ್ಯ ಪೀಠಾಧೀಶರಾದ ಅಲ್ಲಮ ಪ್ರಭುದೇವರ ವಚನ, "ಕಲ್ಯಾಣವೆಂಬ ಪ್ರಣತೆಯಲ್ಲಿ" ಎಂಬುದನ್ನು ಉದಾಹರಿಸಿದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೈನ ವೃತ್ತಿಪರ ಸಂಸ್ಥೆಯ ನಿರ್ದೇಶಕ ಡಿ.ಪಿ.ಪ್ರಕಾಶ ಅವರು ನುಡಿದರು," ಹಳೆಯ ಮೃತ ಸಮಾಜವನ್ನು ತಿರಸ್ಕರಿಸಿ ಚೈತನ್ಯಶೀಲ ಹೊಸ ಸಮಾಜವನ್ನು ಕಟ್ಟಿದ ಬಸವಣ್ಣನವರು ಅಸಂಖ್ಯಾತ ಗಣಗಳನ್ನು ಅಂದರೆ ಚಿಂತನಶೀಲ ಶರಣರನ್ನು ರೂಪಿಸಿದರು. ಇದಕ್ಕೆ ಅವರು ಬಳಸಿದ್ದು ಭಕ್ತಿ-ಜ್ಞಾನ-ಆಚಾರ ಎಂಬ ಸಾಧನಗಳನ್ನು. ಹೀಗಾಗಿ ಪ್ರಭುದೇವರು "ನಾನು ಬದುಕಿದೆ" ಎಂದು ಹೇಳುವಲ್ಲಿ ಇಡೀ ಸಮಾಜವೇ ಜೀವಂತಗೊಂಡಿತು


-೩೪ ನೇ ಪುಟಕ್ಕೆ ಮುಂದುವರೆದಿದೆ


# " ಬಸವ ವಚನ ದೀಪ್ತಿ " ಕೃತಿಯ ಮೇಲಿನ ಮುಟ್ಟುಗೋಲು ವಾಪಸ್ಸಿಗೆ ಮುಖ್ಯಮಂತ್ರಿಗಳಿಗೆ ಮನವಿ

ಬಸವಾತ್ಮಜೆ ಎಂಬ ಕಾವ್ಯನಾಮದಿಂದ ಕೂಡಲಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಂಪಾದಿಸಿ, ಬಸವಣ್ಣನವರ ೮೦೦ ವರ್ಷಗಳ ಲಿಂಗೈಕ್ಯ ದಿನಾಚರಣೆಯ ಅಂಗವಾಗಿ ಪ್ರಕಟಿಸಿದ ವಚನಗ್ರಂಥ "**ಬಸವ ವಚನ ದೀಪ್ತಿ**"ಯು ಅನೇಕ ಬಸವ ತತ್ವಾನುಯಾಯಿಗಳ ಪವಿತ್ರ ಮತ್ತು ಪಾರಾಯಣ ಗ್ರಂಥವಾಗಿದ್ದು ಅದರ ಮೇಲೆ ಹಿಂದಿನ ಸರ್ಕಾರವು ವಿಧಿಸಿರುವ ಮುಟ್ಟುಗೋಲು ಆದೇಶವು ರಾಜಕೀಯ ಪ್ರೇರೇಪಿತವಾದುದರಿಂದ ಪ್ರಸ್ತುತ ಮುಟ್ಟುಗೋಲು ಆಜ್ಞೆಯನ್ನು ವಾಪಸ್ಸು ಪಡೆಯಬೇಕೆಂದು ಲಿಂಗಾಯತ ಧರ್ಮ ಮಹಾಸಭಾ ಮತ್ತು ರಾಷ್ಟ್ರೀಯ ಬಸವ ದಳಗಳ ನಿಯೋಗವೊಂದು ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣ ಮತ್ತು ರಾಜ್ಯಪಾಲರಾದ ಶ್ರೀಮತಿ ರಮಾದೇವಿ ಅವರಿಗೆ ಮನವಿಯನ್ನು ಅರ್ಪಿಸಿ, ಆಗ್ರಹಿಸಿದವು.

ಹೊಸ ಧರ್ಮವಾದ ಲಿಂಗಾಯತದ ಸಮಗ್ರ ಸಿದ್ಧಾಂತದ ಅಡಿಪಾಯವಾದುದು ದೇವರ ಕಲ್ಪನೆ. ಒಬ್ಬನೇ ದೇವನೆಂದು ಸಾರಿ, ಅಂಥ ಸೃಷ್ಟಿಕರ್ತನಿಗೆ ಲಿಂಗದೇವನೆಂದು ಕರೆದು, ಆ ಲಿಂಗದೇವನನ್ನು ಪೂಜಿಸಲು ಇಷ್ಟಲಿಂಗ ಎಂಬ ಲಾಂಛನವನ್ನು ನೀಡಿ ನವಧರ್ಮ ದೃಷ್ಟಾರರಾದ ಬಸವಣ್ಣನವರು ಏಕದೇವೋಪಾಸನೆಯನ್ನು ಪ್ರತಿಪಾದಿಸಿದರು. ಹೀಗಾಗಿ ಲಿಂಗದೇವ ಎಂಬ ಪದವು ಬಸವಣ್ಣನವರೇ ದೇವರಿಗಿಟ್ಟ ಹೆಸರು. ಇದನ್ನು ಮನವರಿಕೆ ಮಾಡಿಕೊಂಡ ಬಸವ ತತ್ವಾನುಯಾಯಿಗಳು ಈಗ ಪೂಜೆ-ಪ್ರಾರ್ಥನೆ-ಪಾರಾಯಣ-ಪಠಣಗಳಲ್ಲಿ ಲಿಂಗದೇವ ಪದವನ್ನೆ ಅಳವಡಿಸಿಕೊಂಡು, ಶುದ್ಧೀಕರಣಗೊಂಡ ಬಸವ ವಚನ ದೀಪ್ತಿಯನ್ನು ನಿತ್ಯವೂ ಪಾರಾಯಣ ಮಾಡುತ್ತಿರುವ ಕಾರಣ, ಹಿಂದಿನ ಸರ್ಕಾರವು ಕೆಲವು ಮಠಾಧೀಶರ ಮಾತ್ಸರ್ಯ-ದ್ವೇಷಪೂರಿತ ಒತ್ತಡಕ್ಕೆ ಬಲಿಯಾಗಿ ರಾಜಕೀಯ ಪ್ರೇರಿತರಾಗಿ ಮುಟ್ಟುಗೋಲು ಹಾಕಿಕೊಂಡ ಬಸವ ವಚನ ದೀಪ್ತಿಯ ಮೇಲಿನ ಮುಟ್ಟುಗೋಲು ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಿಯೋಗವು ಮನವಿ ಸಲ್ಲಿಸಿತು. ಸರ್ಕಾರದ ಆದೇಶದ ವಿರುದ್ಧ ಉನ್ನತ ನ್ಯಾಯಾಲಯದಲ್ಲಿ ದಾವೆ ಹೂಡಿರುವುದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿತು. "ವಿಷಯ ನ್ಯಾಯಾಲಯದಲ್ಲಿರುವುದರಿಂದ ಕಾಯೋಣ" ಎಂದು ಶ್ರೀ ಎಸ್.ಎಂ.ಕೃಷ್ಣ ಅವರು ನುಡಿದಾಗ, "ವಿಷಯ ನ್ಯಾಯಾಲಯದಲ್ಲಿ ಇದ್ದರೂ ಕೆಲವು ಮಠಾಧೀಶರು ಧರ್ಮ ಪ್ರಚಾರ ಕಾರ್ಯಕ್ಕೆ, ಬಸವ ವಚನ ದೀಪ್ತಿ ಪುಸ್ತಕ ಇರಿಸಿಕೊಂಡು ಪಾರಾಯಣ, ಪಠಣ ಮಾಡಲು ವಿಪರೀತ ಕಿರುಕುಳ ಕೊಡುತ್ತಿರುವುದರಿಂದ ಈ ಮುಟ್ಟುಗೋಲು ಆಜ್ಞೆ ವಾಪಸ್ಸು ಪಡೆಯಬೇಕೆಂದು ವಿನಂತಿಸಿತು.

### ಲಿಂಗಾಯತ ಧರ್ಮ ಮಹಾಸಭಾ ಸದಸ್ಯರಿಗೆ

## ಕಲ್ಯಾಣ ಕಿರಣ ವಿಶೇಷ ಪ್ರತಿ

ರೂ. ಹತ್ತು (೧೦) ಕೊಟ್ಟು ಕೆಲವು ಜನರು ಸಾಮಾನ್ಯ ಸದಸ್ಯರಾಗಿದ್ದರು. ಅವರಿಗೆಲ್ಲ ಜನಗಣತಿಯ ಮಾಹಿತಿ ಹೊತ್ತ ಜೂನ್ ಕಲ್ಯಾಣ ಕಿರಣವನ್ನು ಕಳಿಸಿಕೊಡಲಾಗಿದೆ. ಇದರಿಂದ ಅವರ ಸದಸ್ಯತ್ವ ಮುಗಿದುಹೋಗುತ್ತದೆ. ಕಲ್ಯಾಣ ಕಿರಣ ಬೇಕಾದವರು ಆಜೀವ ಸದಸ್ಯತ್ವ ರೂ.೫೦೦/- (ಐದು ನೂರು), ವಾರ್ಷಿಕ ಚಂದಾ ರೂ. ೫೦/- (ಐವತ್ತು)ಕಳಿಸಬಹುದು.

# ಭಾರತದ ಜನಗಣತಿ-೨೦೦೧


॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

೮೬೬೬೬

## ೨೦೦೧ನೆಯ ಇಸವಿಯಲ್ಲಿ ನಡೆಯುವ ಜನಗಣತಿಯಲ್ಲಿ "ಲಿಂಗಾಯತ" ಎಂದು ಬರೆಸಲು ಕಳಕಳಿಯ ಕರೆ

ಲಿಂಗಾಯತವು ವಿಶ್ವಗುರು ಬಸವಣ್ಣ (ಕ್ರಿ.ಶ.೧೧೩೪-೧೧೯೬)ನವರಿಂದ ಸ್ಥಾಪಿತವಾದ ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮ. ಭಾರತದ ದೇಶದ ಜನಸಂಖ್ಯೆಯ ದೃಷ್ಟಿಯಿಂದ ಜೈನ, ಬೌದ್ಧ, ಸಿಖ್ ಧರ್ಮಗಳ ಅನುಯಾಯಿಗಳಂತೆ ಲಿಂಗಾಯತರು ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯಗಳನ್ನು ಪಡೆಯಲು ಅರ್ಹರು. ಭಾರತೀಯ ಪರಂಪರೆಯಲ್ಲಿ ಜನಿಸಿಯೂ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳು ಎಂದು ಮಾನ್ಯತೆ ಪಡೆದಿದ್ದರೆ, ಇವುಗಳ ಅನುಯಾಯಿಗಳು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಮಾನ್ಯತೆ ಪಡೆದಿದ್ದಾರೆ. ಅದೇ ರೀತಿ ಲಿಂಗಾಯತ ಧರ್ಮವು ಮಾನ್ಯತೆ ಪಡೆಯಲು ಅರ್ಹವಾಗಿದೆ. ಏಕೆಂದರೆ ಇದು ಹಿಂದು ಧರ್ಮದ ಒಂದು ಅಂಗವಾಗದೆ ಒಂದು ಸ್ವತಂತ್ರ ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದೆ.

| | | | |
|---|---|---|---|
| ೧. | ಧರ್ಮ ಸ್ಥಾಪಕರು | - | ವಿಶ್ವಗುರು ಬಸವಣ್ಣನವರು |
| ೨. | ಧರ್ಮ ಸಂಹಿತೆ | - | ಸಮಾನತೆ ಸಾರುವ ವಚನ ಸಾಹಿತ್ಯ |
| ೩. | ಧರ್ಮದ ದೇವರ ಹೆಸರು | - | ಲಿಂಗದೇವ |
| ೪. | ಧರ್ಮ ಲಾಂಛನ | - | ನಿರಾಕಾರ ಲಿಂಗದೇವನ ಕುರುಹಾದ ಇಷ್ಟಲಿಂಗ |
| ೫. | ಧರ್ಮ ಕ್ಷೇತ್ರ | - | ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ |
| ೬. | ಧಾರ್ಮಿಕ ವಾರ್ಷಿಕ ಸಮಾವೇಶ | - | ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ |
| ೭. | ಧಾರ್ಮಿಕ ವ್ರತ | - | ಶರಣ ವ್ರತ |
| ೮. | ಧರ್ಮ ಧ್ವಜ | - | ಷಟ್ಕೋನ-ಇಷ್ಟಲಿಂಗ ಸಹಿತ ಬಸವ ಧ್ವಜ |
| ೯. | ಧರ್ಮ ಸಂಸ್ಕಾರ | - | ಇಷ್ಟಲಿಂಗ ದೀಕ್ಷೆ |
| ೧೦. | ಧರ್ಮ ಮಂದಿರ | - | ಬಸವ (ಅನುಭವ)ಮಂಟಪ |
| ೧೧. | ಧಾರ್ಮಿಕ ವಿಧಿ-ವಿಧಾನ | - | ಗುರು-ಬಸವಣ್ಣ, ಲಿಂಗ-ಗೋಳಾಕಾರದ ಇಷ್ಟಲಿಂಗ, ಜಂಗಮ-ಪವಿತ್ರಾತ್ಮರ ಪೂಜೆ |
| ೧೨. | ಧಾರ್ಮಿಕ ಕೂಟ | - | ಶರಣ ಸಂಗಮ-ವಾರದ ಪ್ರಾರ್ಥನೆ |
| ೧೩. | ಧಾರ್ಮಿಕ ಮಾಸ | - | ಶ್ರಾವಣ |
| ೧೪. | ಧರ್ಮ ಭಾಷೆ | - | ಕನ್ನಡ |
| ೧೫. | ಧರ್ಮ ಪರಂಪರೆ | - | ಶರಣ ಪರಂಪರೆ |
| ೧೬. | ಧಾರ್ಮಿಕ ಸೋದರತ್ವ | - | ಜಾತಿ ವರ್ಗ ವರ್ಣಾತೀತ ಸಮಾನತೆ |
| ೧೭. | ಧರ್ಮದ ಧ್ಯೇಯ | - | ಜಾತಿ ವರ್ಣ ವರ್ಗರಹಿತ ಧರ್ಮಸಹಿತ ಶರಣ ಸಮಾಜ (ಕಲ್ಯಾಣ ರಾಜ್ಯ )ನಿರ್ಮಾಣ |




ಆದ್ದರಿಂದ ಜನಗಣತಿಯ ೮ನೆಯ ಕಾಲಂ ಧರ್ಮ (Religion)ದಲ್ಲಿ ಲಿಂಗಾಯತ (Lingayat-L) ಎಂದು ಬರೆಸಿರಿ. ಗಣತಿಕಾರರು ಸರಿಯಾಗಿ ಬರೆದಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಗಣತಿಕಾರರು ನೀವು ತಿಳಿಸಿದರೂ ಅದರಂತೆ ಬರೆದುಕೊಳ್ಳದಿದ್ದರೆ ತಕ್ಷಣವೇ ಪ್ರತಿಭಟಿಸಿ, ನಾಗರಿಕ ಅಧಿಕಾರಗಳಾದ ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿರಿ. ಇನ್ನೇನಾದರೂ ವಿವರಗಳು ಬೇಕಾಗಿದ್ದಲ್ಲಿ ಹಿಂದಿನ ಪುಟದಲ್ಲಿ ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಿರಿ.

**ವಿಶೇಷ ಎಚ್ಚರಿಕೆ:** ವೀರಶೈವ ಪದವು ಲಿಂಗಾಯತದ ಸಮಾನಾರ್ಥ ಕೊಡುವ ಪದ ಎಂದು ಭಾವಿಸಿ ಅದನ್ನು ಬಳಸಿ ಲಿಂಗಾಯತ ಧರ್ಮಕ್ಕೆ ಸಿಗುವ ಮಾನ್ಯತೆಯನ್ನು ತಪ್ಪಿಸುವ ಪ್ರಮಾದ ಮಾಡಬೇಡಿರಿ.

ಮಾನ್ಯ ನಿರ್ದೇಶಕರು
ಜನಗಣತಿಯ ನಿರ್ದೇಶನಾಲಯ, ಕರ್ನಾಟಕ
೨ನೆಯ ಮಹಡಿ, ಕೇಂದ್ರೀಯ ಸದನ, ಕೋರಮಂಗಲ
ಬೆಂಗಳೂರು-೫೬೦೦೩೪

ಇವರಲ್ಲಿ ವಿಜ್ಞಾಪನೆಗಳು.

ಮಾನ್ಯರೇ,

ವಿಷಯ : ೧. ೨೦೦೧ನೆಯ ಇಸವಿಯಲ್ಲಿ ನಡೆಸುವ ಜನಗಣತಿಯಲ್ಲಿ ಲಿಂಗಾಯತ ಧರ್ಮವನ್ನು ಅನುಸರಿಸುವ ಲಿಂಗಾಯತ ಸಮುದಾಯವನ್ನು ಪ್ರತ್ಯೇಕ ಧಾರ್ಮಿಕ ಗುಂಪೆಂದು ಪರಿಗಣಿಸುವ ಬಗ್ಗೆ

೨. ಜನಗಣತಿ ಮಾಡುವ ಗಣತಿಕಾರರಿಗೆ ಸಂಬಂಧಿಸಿದ ಅಧಿಕಾರಿಗಳಿಂದ ಸೂಕ್ತ ತರಬೇತಿ ನೀಡುವ ಬಗ್ಗೆ.

ಅ. ಲಿಂಗಾಯತರನ್ನು ವೀರಶೈವರೊಡನೆ ಸೇರಿಸದೆ ಲಿಂಗಾಯತರ ಜನಗಣತಿಯನ್ನು ಪ್ರತ್ಯೇಕವಾಗಿ ತೆಗೆಯುವಿಕೆ.

ಆ. ಹಿಂದಿನ ಜನಗಣತಿಯಲ್ಲಿ ಆದ ತಪ್ಪು ಪುನರಾವರ್ತನೆಯಾಗದೆ ಲಿಂಗಾಯತರ ಸೂಕ್ತ ಸಂಖ್ಯೆಯನ್ನು ಸಂಗ್ರಹಿಸುವ ಮತ್ತು ದಾಖಲಿಸುವ ವಿಷಯದಲ್ಲಿ ವಿಶೇಷ ಎಚ್ಚರಿಕೆ ಕುರಿತು.

---

ನಮ್ಮ ಮಾತೃಭೂಮಿ ಭಾರತ ದೇಶವು ಅನೇಕ ಧರ್ಮಗಳಿಗೆ ತಾಯಿಯ ಗರ್ಭ, ಭಾರತದ ಹೊರಗೆ ಹುಟ್ಟಿದ ಧರ್ಮಗಳಿಗೆ ತೊಟ್ಟಿಲು. ಭಾರತ ದೇಶದಲ್ಲಿ ಹುಟ್ಟಿರುವ ಅನೇಕ ಧರ್ಮಗಳಲ್ಲಿ ೧೨ನೆಯ ಶತಮಾನದಲ್ಲಿ ಗುರು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ಪ್ರಗತಿಪರವಾದ, ವೈಚಾರಿಕ ಧರ್ಮವಾಗಿದೆ. ಮಾನವ ಸಮಾಜದ ಸರ್ವಾಂಗೀಣ ಉದ್ಧಾರವನ್ನೇ ಗಮನದಲ್ಲಿಟ್ಟುಕೊಂಡ ಲಿಂಗಾಯತ ಧರ್ಮದ ಗುರಿಯು ಕಲ್ಯಾಣರಾಜ್ಯ (welfare state) ನಿರ್ಮಾಣವೇ ಆಗಿತ್ತು. ಈ ಧರ್ಮವು ಹುಟ್ಟಿದ್ದೇ ಜಾತೀಯತೆ, ಮೂಢನಂಬಿಕೆ, ಅಸಮಾನತೆ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ತಪ್ಪಿಸಲು. ಲಿಂಗಾಯತ ಧರ್ಮವು ದೇವನ ಪಿತೃತ್ವ ಮಾನವರ ಸಹೋದರತ್ವವನ್ನು ಪ್ರತಿಪಾದಿಸಿ ಕೆಳಗೆ ಬಿದ್ದವರನ್ನು ಮೇಲೆತ್ತಿ ಸ್ತ್ರೀಯರ ಸಮಾನತೆ, ಸಹೋದರತ್ವ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿತು.

## ಲಿಂಗಾಯತವು ಜಾತಿಯಲ್ಲ, ಸ್ವತಂತ್ರ ಧರ್ಮ

ಕೆಲವರು ಹಿಂದುವು ಧರ್ಮವೆಂದು, ಅದರೊಳಗಿನ ಒಂದು ಜಾತಿ ಲಿಂಗಾಯತ ಎಂದು ತಪ್ಪಾಗಿ ತಿಳಿದು ವರ್ತಿಸುತ್ತಾರೆ. ಯಾವುದೇ ಒಂದು ಜಾತಿಗೆ ತನ್ನದೇ ಆದ ಸಿದ್ಧಾಂತವಾಗಲೀ, ಯೋಗವಾಗಲಿ, ದೀಕ್ಷಾ ಸಂಸ್ಕಾರವಾಗಲಿ ಇರುವುದಿಲ್ಲ. ಆದರೆ ಲಿಂಗಾಯತ ಧರ್ಮವು ತನ್ನದೇ ಆದ ಸಿದ್ಧಾಂತ, ಸಾಧನೆ, ದರ್ಶನಶಾಸ್ತ್ರ, ನೀತಿಶಾಸ್ತ್ರ, ಸಮಾಜಶಾಸ್ತ್ರವನ್ನು ಹೊಂದಿ ಬ್ರಾಹ್ಮಣನಿಂದ ಭಂಗಿಯವರೆಗೆ ಎಲ್ಲ ಜಾತಿ ಮತ ಪಂಗಡಗಳವರನ್ನು ಇಷ್ಟಲಿಂಗ ದೀಕ್ಷೆಯ ಮೂಲಕ ಸ್ವೀಕರಿಸಿತು.

ಲಿಂಗಾಯತ ಧರ್ಮವು ಜಾತಿ ಪದ್ಧತಿಯನ್ನು ಒಪ್ಪುವುದಿಲ್ಲ. ಇದು ಒಂದು ಸ್ವತಂತ್ರ ಮತ್ತು ಪರಿಪೂರ್ಣ ಧರ್ಮವಾಗಿ ೧೨ನೆಯ ಶತಮಾನದಲ್ಲಿ ಶ್ರೀ ಗುರು ಬಸವಣ್ಣನವರಿಂದ ಕೊಡಲ್ಪಟ್ಟಿದೆ.

## ಲಿಂಗಾಯತವು ಸ್ವತಂತ್ರವಾದ, ಅವೈದಿಕ ಧರ್ಮವಾಗಿ ಕೆಳಗಿನ ಲಕ್ಷಣಗಳನ್ನು ಹೊಂದಿದೆ.

| | | |
|---|---|---|
| ೧. ಸಂಸ್ಥಾಪಕ ಧರ್ಮಗುರು | - | ವಿಶ್ವಗುರು ಬಸವಣ್ಣ (1134-1196) |
| ೨. ಧರ್ಮ ಸಾಹಿತ್ಯ | - | ವಚನ ಸಾಹಿತ್ಯ |
| ೩. ಧರ್ಮ ಭಾಷೆ | - | ಕನ್ನಡ |
| ೪. ಧರ್ಮದ ದೇವರ ಹೆಸರು | - | ಲಿಂಗದೇವ |
| ೫. ಧರ್ಮಲಾಂಛನ | - | ವಿಶ್ವದಾಕಾರದಲ್ಲಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗ |
| ೬. ಧರ್ಮಕ್ಷೇತ್ರ | - | ಬಸವಣ್ಣನವರ ಐಕ್ಯಕ್ಷೇತ್ರವಾದ ಕೂಡಲಸಂಗಮ |
| ೭. ಧಾರ್ಮಿಕ ವಾರ್ಷಿಕ ಸಮಾವೇಶ | - | ಕೂಡಲಸಂಗಮದಲ್ಲಿ ನಡೆಯುವ ಸಮಾವೇಶ (ಮುಸ್ಲೀಮರ ಹಜ್ ಹೋಲುವ) ಶರಣ ಮೇಳ |
| ೮. ಧಾರ್ಮಿಕ ವ್ರತ | - | ಶರಣ ವ್ರತ |
| ೯. ಧರ್ಮ ಸಂಸ್ಕಾರ | - | ಇಷ್ಟಲಿಂಗ ದೀಕ್ಷೆ |
| ೧೦. ಧರ್ಮ ಮಂದಿರ | - | ಬಸವ (ಅನುಭವ) ಮಂಟಪ |
| ೧೧. ಧಾರ್ಮಿಕ ಕೂಟ | - | ಶರಣ ಸಂಗಮ (ವಾರದ ಪ್ರಾರ್ಥನೆ) |
| ೧೨. ಧಾರ್ಮಿಕ ವಿಧಿ-ವಿಧಾನ | - | ಗುರು-ಬಸವಣ್ಣ, ಲಿಂಗ- ಇಷ್ಟಲಿಂಗ, ಜಂಗಮ-ಪವಿತ್ರಾತ್ಮರ ಪೂಜೆ |
| ೧೩. ಪವಿತ್ರ ಮಾಸ | - | ಶ್ರಾವಣ |
| ೧೪. ಧರ್ಮ ಧ್ವಜ | - | ಷಟ್‌ಕೋನ ಇಷ್ಟಲಿಂಗ ಸಹಿತ ಕಾವಿ ಬಣ್ಣದ ಬಸವ ಧ್ವಜ |
| ೧೫. ಧಾರ್ಮಿಕ ಪರಂಪರೆ | - | ಗುರು ಬಸವಣ್ಣನವರೇ ಆದಿ ಗುರುವಾಗಿ ಲಿಂಗಾಯತ ಶರಣರನ್ನು ಒಳಗೊಂಡ ಶರಣ ಪರಂಪರೆ |
| ೧೬. ಧಾರ್ಮಿಕ ಭ್ರಾತೃತ್ವ | - | ಜಾತಿ ವರ್ಣ ವರ್ಗ ಲಿಂಗಭೇದ ರಹಿತ ಸಮಾನತೆ |
| ೧೭. ಧರ್ಮದ ಧ್ಯೇಯ | - | ಜಾತಿ ವರ್ಣ ವರ್ಗ ರಹಿತ ಧರ್ಮ ಸಹಿತ ಶರಣ ಸಮಾಜ (ಕಲ್ಯಾಣ ರಾಜ್ಯ) ನಿರ್ಮಾಣ. |

## ಲಿಂಗಾಯತವು ಅಹಿಂದು, ಅವೈದಿಕ ಧರ್ಮ

ವಿಶ್ವಗುರು ಬಸವಣ್ಣನವರಿಂದ ಸಂಸ್ಥಾಪಿತವಾದ, ಅವರ ಜೀವಿತ ಕಾಲದಲ್ಲಿಯೇ ಒಂದು ಲಕ್ಷ ತೊಂಬತ್ತಾರು ಸಾವಿರ ಶರಣರನ್ನು ಅನುಯಾಯಿಗಳನ್ನಾಗಿ ಹೊಂದಿದ ಲಿಂಗಾಯತ ಧರ್ಮವು ಕೆಳಕಂಡ ಕಾರಣಗಳಿಂದಾಗಿ ಅಹಿಂದು, ಅವೈದಿಕ ಧರ್ಮವಾಗಿದೆ.

೧. ಹಿಂದು ಧರ್ಮವು ಒಬ್ಬ ನಿರ್ದಿಷ್ಟ ಸಂಸ್ಥಾಪಕನನ್ನು ಹೊಂದಿಲ್ಲ; ಆದರೆ ಲಿಂಗಾಯತ ಧರ್ಮವು ಗುರು ಬಸವಣ್ಣನವರನ್ನು ತನ್ನ ಸಂಸ್ಥಾಪಕ ಗುರುವನ್ನಾಗಿ ಹೊಂದಿದೆ.

೨. ಹಿಂದು ಧರ್ಮವು ವೇದ, ಆಗಮ, ಭಗವದ್ಗೀತೆ, ಮಹಾಭಾರತ, ರಾಮಾಯಣ, ಭಾಗವತ, ಪುರಾಣಗಳನ್ನು ತನ್ನ ಧಾರ್ಮಿಕ ಗ್ರಂಥಗಳನ್ನಾಗಿ ಹೊಂದಿದೆ. ಆದರೆ ಬಸವಣ್ಣನವರು ಈ ಎಲ್ಲ ಹಿಂದು ಶಾಸ್ತ್ರಗಳನ್ನು ಪ್ರಶ್ನಿಸಿ, ಪರೀಕ್ಷಿಸಿ, ಇವುಗಳ ಎಷ್ಟೋ ತತ್ವಗಳನ್ನು ತಿರಸ್ಕರಿಸಿದ್ದಾರೆ.



ಚತುರ್ವರ್ಣಗಳ ಸಾಮಾಜಿಕ ವ್ಯವಸ್ಥೆಯನ್ನು, ಅಸ್ಪೃಶ್ಯತೆ, ಬಹುದೇವತೋಪಾಸನೆ, ಅಸಮಾನತೆಯನ್ನು ತಿರಸ್ಕರಿಸಿ ಸಮಾನತೆ, ಏಕದೇವೋಪಾಸನೆಯನ್ನು ಪ್ರತಿಪಾದಿಸುವ ವಚನ ಸಾಹಿತ್ಯವು ಲಿಂಗಾಯತ ಧರ್ಮದ ಆಧಾರ ಶಾಸ್ತ್ರವಾಗಿದೆ.

೩. ವೈದಿಕ ಹಿಂದು ಧರ್ಮದ ಮುಖ್ಯ ವಿಧಿಯು ಹೋಮ, ಹವನ, ಯಜ್ಞ ಮತ್ತು ಬಲಿಗಳಿಂದ ಕೂಡಿದೆ. ಲಿಂಗಾಯತ ಧರ್ಮವು ಈ ಎಲ್ಲ ವಿಧಿಗಳನ್ನು ತಿರಸ್ಕರಿಸಿ, ವಿರೋಧಿಸುತ್ತದೆ.

೪. ಹಿಂದು ಧರ್ಮವು ತನ್ನ ನಂಬಿಕೆ ಮತ್ತು ಆಚರಣೆಯಲ್ಲಿ ಬಹುದೇವತೋಪಾಸಕ ಧರ್ಮವಾಗಿದೆ. ಅನೇಕ ದೇವ-ದೇವತೆಗಳ ಅಸ್ತಿತ್ವದಲ್ಲಿ ನಂಬಿಕೆ ಇರಿಸಿ, ಅನೇಕ ದೇವತೆಗಳನ್ನು, ಪಂಚಭೂತಗಳನ್ನು, ಪ್ರಾಣಿಗಳನ್ನು ಉಪಾಸಿಸುತ್ತದೆ. ಲಿಂಗಾಯತ ಧರ್ಮವು ಕಟ್ಟುನಿಟ್ಟಾದ ಏಕದೇವೋಪಾಸನೆಯನ್ನು ಪ್ರತಿಪಾದಿಸುತ್ತದೆ. ಧರ್ಮಗುರು ಬಸವಣ್ಣನವರು ಕಡ್ಡಾಯವಾದ ಏಕದೇವೋಪಾಸನೆಯನ್ನು ಬೋಧಿಸಿ, ಇರುವ ಒಬ್ಬನೇ ಸರ್ವವ್ಯಾಪಿಯಾದ, ಸರ್ವಜ್ಞನಾದ, ಸರ್ವಶಕ್ತನಾದ ದೇವನನ್ನು ನಂಬಲು ಹೇಳಿ, ಅಂಥ ಒಬ್ಬನೇ ದೇವನನ್ನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ಪೂಜಿಸಲು, ಬೇರೆ ಏನನ್ನೂ ಪೂಜಿಸದಿರಲು ಒತ್ತಾಯಿಸುತ್ತಾರೆ. ಹಿಂದು ಧರ್ಮವು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಪರಿಕಲ್ಪನೆಯನ್ನು ನಂಬುತ್ತದೆ. ಆದರೆ ಲಿಂಗಾಯತ ಧರ್ಮವು ತ್ರಿಮೂರ್ತಿಗಳ ಪರಿಕಲ್ಪನೆಯನ್ನು ನಂಬದೆ, ಇದು ಕೇವಲ ಪೌರಾಣಿಕ ಕಲ್ಪನೆ ಎಂದು ತಿರಸ್ಕರಿಸುತ್ತದೆ.

೫. ಹಿಂದು ಧರ್ಮವು ಕಾಶಿ, ರಾಮೇಶ್ವರ, ತಿರುಪತಿ ಮುಂತಾದ ಸ್ಥಳಗಳನ್ನು ಪವಿತ್ರವೆಂದು, ಗಂಗಾ, ಯಮುನಾ ಮುಂತಾದ ನದಿಗಳನ್ನು ಪಾವನವೆಂದು ನಂಬಿ, ಆ ಸ್ಥಳಗಳ ಸಂದರ್ಶನದಿಂದ, ಆ ನದಿಗಳಲ್ಲಿ ಮುಳುಗಿ ಏಳುವುದರಿಂದ ಪಾಪವು ಪರಿಹಾರವಾಗುವುದೆಂದು ಪ್ರತಿಪಾದಿಸುತ್ತದೆ. ಲಿಂಗಾಯತ ಧರ್ಮವು ಯಾವುದೇ ಸ್ಥಳವನ್ನು ಪವಿತ್ರವೆಂದು, ಯಾವುದೇ ನದಿಯನ್ನು ಪಾವನವೆಂದು ನಂಬುವುದಿಲ್ಲ, ಅಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಪಾಪವು ಪರಿಹಾರವಾಗುವುದೆಂದು ಒಪ್ಪುವುದಿಲ್ಲ.

೬. ಗೀತಾ, ಗಾಯತ್ರಿ, ಗಂಗಾ ಮತ್ತು ಗೋವು ಹಿಂದುಗಳಿಗೆ ಬಹಳ ಪವಿತ್ರ ಮತ್ತು ಪೂಜನೀಯ. ಆದರೆ ಲಿಂಗಾಯತರು ಗೀತೆ ಮತ್ತು ಗಾಯತ್ರಿಯನ್ನು ಪಠಿಸುವುದಿಲ್ಲ, ಗಂಗಾ ಮತ್ತು ಗೋವುಗಳನ್ನು ಪೂಜಿಸುವುದಿಲ್ಲ.

೭. ಹಿಂದು ಧರ್ಮವು ಪಂಚ ಸೂತಕಗಳಾದ ಜನನ, ಮರಣ, ಜಾತಿ, ರಜಸ್ ಹಾಗೂ ಉಚ್ಛಿಷ್ಟ ಸೂತಕಗಳನ್ನು ನಂಬುತ್ತದೆ. ಲಿಂಗಾಯತ ಧರ್ಮವು ಇವನ್ನು ತಿರಸ್ಕರಿಸುತ್ತದೆ.

೮. ಹಿಂದು ಧರ್ಮವು ಜ್ಯೋತಿಷ್ಯ, ವಾಸ್ತುಶಿಲ್ಪ, ಜಾತಕ ಮುಂತಾದವುಗಳನ್ನು ನಂಬುತ್ತದೆ. ಲಿಂಗಾಯತವು ಇವೆಲ್ಲವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ.

ಸಾಂಪ್ರದಾಯಿಕ ಹಿಂದು ಸಮಾಜ ವ್ಯವಸ್ಥೆಯು ನಾಲ್ಕು ವರ್ಣಗಳನ್ನು (ಅವುಗಳಲ್ಲಿ ನೂರಾರು ಜಾತಿಗಳನ್ನು) ಮತ್ತು ೫ನೆಯ ವರ್ಣವಾದ ಅಸ್ಪೃಶ್ಯರನ್ನು ಹೊಂದಿದೆ. ಅವುಗಳೆಂದರೆ ೧. ಬ್ರಾಹ್ಮಣ ೨. ಕ್ಷತ್ರಿಯ, ೩ ವೈಶ್ಯ ೪. ಶೂದ್ರ ೫. ಅಸ್ಪೃಶ್ಯ.

ಭಾರತದ ಜನಗಣತಿಯಲ್ಲಿ ಐದನೆಯ ಗುಂಪಿಗೆ ಪ್ರತ್ಯೇಕ ಕಾಲಮ್ ಅನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ (SC/ST) ಎಂದು ಕೊಡಲಾಗಿದೆ. ಸಾಂಪ್ರದಾಯಕ ಹಿಂದು ಧರ್ಮವು ದ್ವಿಜ ಸಂಸ್ಕಾರವನ್ನು ಕೆಳಕಂಡಂತೆ ಕೊಡುತ್ತದೆ.

೧. ಜನ್ಮತಃ ಬ್ರಾಹ್ಮಣರಾದವರಿಗೆ ಮೊದಲ ದರ್ಜೆಯ ದ್ವಿಜ ಸಂಸ್ಕಾರ

೨. ಜನ್ಮತಃ ಕ್ಷತ್ರಿಯರಾದವರಿಗೆ ಎರಡನೆ ದರ್ಜೆಯ ದ್ವಿಜ ಸಂಸ್ಕಾರ

೩. ಜನ್ಮತಃ ವೈಶ್ಯರಾದವರಿಗೆ ಮೂರನೆಯ ದರ್ಜೆಯ ದ್ವಿಜ ಸಂಸ್ಕಾರ

ಹಿಂದು ಸಮಾಜದಲ್ಲಿ ೪ನೆಯ ದರ್ಜೆಯವರಾದ ಶೂದ್ರ (ಸಾಂಪ್ರದಾಯಿಕ ಶ್ರಮಜೀವಿಗಳು)ರಿಗೆ ಯಾವುದೇ ರೀತಿಯ ಧರ್ಮಸಂಸ್ಕಾರವನ್ನು ನೀಡದೆ ವಂಚಿಸಲಾಗಿದೆ. ದ್ವಿಜ (ಬ್ರಾಹ್ಮಣ)ತ್ವವು ಉಪನಯನ ಸಂಸ್ಕಾರದ ಮೂಲಕ, ಪವಿತ್ರ ದಾರವಾದ ಜನಿವಾರವನ್ನು ಧರಿಸುವ ಮೂಲಕ ಪ್ರಾಪ್ತವಾಗುತ್ತದೆ ಎಂದು ನಂಬಲಾಗುತ್ತದೆ. ಶೂದ್ರರಿಗೆ ಜನಿವಾರವನ್ನು ಕೊಡಲಾಗುವುದಿಲ್ಲವಾದ್ದರಿಂದ ಅವರನ್ನು ಇತರ ೩ ವರ್ಣದವರಿಗಿಂತಲೂ ಕೀಳೆಂದು ಪರಿಗಣಿಸಲಾಗುವುದು. ಆದ್ದರಿಂದ ಒಂದು ವೇಳೆ ಲಿಂಗಾಯತರು ಹಿಂದುಗಳೆಂದು ಒಪ್ಪಿಕೊಂಡರೆ ಅವರು ಅನಿವಾರ್ಯವಾಗಿ ಶೂದ್ರವರ್ಣದಲ್ಲಿ ಸೇರಬೇಕಾಗುತ್ತದೆ.

ಹಿಂದು ಧರ್ಮವು ಶ್ರೇಣೀಕೃತವಾದ ನಿಚ್ಚಣಿಕೆಯೋಪಾದಿಯಲ್ಲಿರುವ ಸಮಾಜ ವ್ಯವಸ್ಥೆ (ladder type)ಯನ್ನು ಒಪ್ಪಿಕೊಂಡ ಕಾರಣ ಅಸ್ಪೃಶ್ಯತೆಯು ಅದರ ಕಹಿ ಫಲವಾಗಿದೆ. ಈ ವರ್ಣ, ಜಾತಿ ವ್ಯವಸ್ಥೆಯು ದೇವ ನಿರ್ಮಿತವೆಂದು ಹಿಂದು ಧರ್ಮವು ನಂಬುತ್ತದೆ. ಲಿಂಗಾಯತ ಧರ್ಮವು ಶ್ರೇಣೀಕೃತವಾದ ಸಮಾಜ ವ್ಯವಸ್ಥೆಯನ್ನು ಒಪ್ಪದೆ ಎಲ್ಲರನ್ನು ಸಮಾನರೆಂದು ಒಪ್ಪುವ ಮತ್ತು ಜಾತಿ-ವರ್ಣ ವ್ಯವಸ್ಥೆ ದೇವನಿರ್ಮಿತವಾಗದೇ ಮಾನವ ಕಲ್ಪಿತ ಎಂದು ಹೇಳಿ ಸಮಪಾತಳಿಯ (horizontal)ಸಮಾನತೆಯಿಂದ ಕೂಡಿದ ಸಮಾಜ ವ್ಯವಸ್ಥೆಯನ್ನು ಮನ್ನಿಸುತ್ತದೆ.

೧೦. ಲಿಂಗಾಯತರಿಗೆ ತಮ್ಮದೇ ಆದ, ಕೆಳಕಂಡಂತೆ ಕೆಲವು ತತ್ವಗಳಿವೆ

ಅ. ಸಿದ್ಧಾಂತ - ಶೂನ್ಯ ಸಿದ್ಧಾಂತ

ಆ. ಯೋಗ - ಬಸವಣ್ಣನವರಿಂದ ಕೊಡಲ್ಪಟ್ಟ ಇಷ್ಟಲಿಂಗ ಯೋಗ (ಬಸವನ ಯೋಗ)

ಇ. ದರ್ಶನ ಶಾಸ್ತ್ರ - ಷಟಸ್ಥಲ

ಈ. ದೀಕ್ಷಾ ಸಂಸ್ಕಾರ - ಯಾರನ್ನು ಬೇಕಾದರೂ ಧರ್ಮವಂತರನ್ನಾಗಿ ಮಾಡುವ ಇಷ್ಟಲಿಂಗ ದೀಕ್ಷಾ ಸಂಸ್ಕಾರ

ಉ. ಧಾರ್ಮಿಕ ಭ್ರಾತೃತ್ವ - ಜಾತಿ ಮತ ವರ್ಣ ವರ್ಗ ಲಿಂಗ ಭೇದವಿಲ್ಲದೆ ದೀಕ್ಷೆ ಪಡೆದವರನ್ನೆಲ್ಲ ಸಮಾನವಾಗಿ ಕಾಣುವ ಧಾರ್ಮಿಕ ಸಹೋದರತ್ವ

ಊ. ಲಿಂಗಾಯತರಿಗೆ ಪ್ರತ್ಯೇಕ ಸ್ಮಶಾನಗಳು ಇವೆ.

ಲಿಂಗಾಯತ ಸಮಾಜದಲ್ಲಿ ಸಾಗಿ ಬಂದಿರುವ ಶವಸಂಸ್ಕಾರದ ಸಾಂಪ್ರದಾಯಿಕ ಆಚರಣೆಯು ಲಿಂಗಾಯತ ಧರ್ಮವನ್ನು ಸ್ವತಂತ್ರವಾದ ಮತ್ತು ಅಹಿಂದು ಧರ್ಮ ಎಂಬುದನ್ನು ದೃಢ ಪಡಿಸುತ್ತದೆ. ಸಾಂಪ್ರದಾಯಿಕ ಹಿಂದು ಸಮಾಜದಲ್ಲಿ ಶೂದ್ರರ ಹೊರತಾಗಿ ದ್ವಿಜ ವರ್ಣದ ಸತ್ತವರ ಶವಗಳನ್ನು ಸುಡಲಾಗುವುದು. ಲಿಂಗಾಯತ ಧರ್ಮದಲ್ಲಿ ಶವಗಳನ್ನು ಹುಗಿಯುವ ಪದ್ಧತಿ ಇದೆ ಮತ್ತು ಲಿಂಗಾಯತರ ಸ್ಮಶಾನಗಳು ಸಾಂಪ್ರದಾಯಿಕ ಹಿಂದು ಸ್ಮಶಾನದಿಂದ ಬೇರೆಯೇ ಇರುತ್ತವೆ ಎಂಬುದು ಗಮನಾರ್ಹ ಸಂಗತಿ. ೧೨ನೆಯ ಶತಮಾನದಿಂದಲೂ ಲಿಂಗಾಯತ ಧರ್ಮೀಯರ ಶವಗಳನ್ನು ಹುಗಿಯುವ ಆಚರಣೆ ಸಾಗಿ ಬಂದಿದೆ.

೧೦. ಹಿಂದುಗಳು ದೇವಾಲಯಗಳನ್ನು, ಮಂದಿರಗಳನ್ನು ಕಟ್ಟುವರು. ಆ ದೇವಾಲಯಗಳಲ್ಲಿ



ಮಧ್ಯವರ್ತಿಯಾಗಿ ಪೂಜಾರಿಯು ಇರುವನು. ಲಿಂಗಾಯತ ಧರ್ಮವು ದೇವಾಲಯ ನಿರ್ಮಾಣ ಮತ್ತು ಪುರೋಹಿತ ವೃತ್ತಿಯನ್ನು ವಿರೋಧಿಸುತ್ತದೆ. ದೇವ-ಭಕ್ತರ ನಡುವೆ ಪೂಜಾರಿಯ ಮಧ್ಯಸ್ಥಿಕೆಯನ್ನು ತಪ್ಪಿಸುತ್ತದೆ. ದೇವಾಲಯಗಳು ಜಾತಿ ಪದ್ಧತಿ, ಅಸ್ಪೃಶ್ಯತೆ, ಮೂಢ ನಂಬಿಕೆ ಮುಂತಾದುವುಗಳನ್ನು ಪ್ರೋತ್ಸಾಹಿಸುವ ಕಾರಣ ಕ್ರಾಂತಿಪುರುಷ ಬಸವಣ್ಣನವರು ದೇವಾಲಯ ನಿರ್ಮಾಣವನ್ನು ವಿರೋಧಿಸಿ, ಅನುಭವ ಮಂಟಪ ಎಂಬ ಮಾದರಿ ಸಂಸ್ಥೆಯೊಂದನ್ನು ಕಟ್ಟಿ ತೋರಿಸಿದರು. ಅನುಭವ ಮಂಟಪವು ದೇವನ ಪಿತೃತ್ವ, ಮಾನವ ಭ್ರಾತೃತ್ವವನ್ನು ಸಾರಿ ಎಲ್ಲರನ್ನೂ ಸಮಾನ ಮನೋಭಾವದಿಂದ ಸ್ವೀಕರಿಸಿತು.

೧೧. ಎಲ್ಲ ಹಿಂದುಗಳು ಶುದ್ಧ ಸಸ್ಯಾಹಾರಿಗಳಲ್ಲ. ಲಿಂಗಾಯತ ಧರ್ಮವು ಕಡ್ಡಾಯವಾದ ಸಸ್ಯಾಹಾರವನ್ನು ಬೋಧಿಸುವುದಲ್ಲದೆ, ಮನುಷ್ಯನು ತನ್ನ ಹೊಟ್ಟೆಯ ಪಾಡಿಗಾಗಿ ಪ್ರಾಣಿಗಳನ್ನು ಕೊಲ್ಲುವುದನ್ನು ನಿಷೇಧಿಸುತ್ತದೆ.

ಹೀಗೆ ಲಿಂಗಾಯತ ಧರ್ಮಾನುಯಾಯಿಗಳಾದ ಲಿಂಗಾಯತರು ಎಲ್ಲ ರೀತಿಯಿಂದಲೂ ಸಾಂಪ್ರದಾಯಿಕ ಹಿಂದು ಧರ್ಮದಿಂದ ಬೇರೆಯೇ ಆದ ಆಚರಣೆ ಹೊಂದಿದ್ದು, ತಮ್ಮ ನಂಬಿಕೆ, ಆಚರಣೆ, ವಿಧಿ-ವಿಧಾನ, ಸಂಪ್ರದಾಯ, ಸಂಸ್ಕೃತಿ ಇವುಗಳಲ್ಲಿ ಪ್ರತ್ಯೇಕತೆಯನ್ನು ಪ್ರದರ್ಶಿಸುತ್ತಾರೆ. ಈ ಹಿನ್ನೆಲೆಯಲ್ಲಿ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮಎಂದು ಮಾನ್ಯತೆ ಪಡೆಯಲು ಪೂರ್ಣವಾಗಿ ಅರ್ಹವಾಗಿದೆ. ನಾವು ಬಹಳ ಹೆಮ್ಮೆಯಿಂದ ಹೇಳಬಹುದು. "ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮವು ನಮ್ಮ ಮಾತೃಭೂಮಿ ಭಾರತ ದೇಶಕ್ಕೆ ಮತ್ತು ಮಾನವ ಕುಲಕ್ಕೆ ಒಂದು ಶ್ರೇಷ್ಠ ಕೊಡುಗೆಯಾಗಿದೆ ಎಂದು."

ಭಾರತದ ಸಂವಿಧಾನವು ಭಾರತೀಯ ಧರ್ಮಗಳ ಅನುಯಾಯಿಗಳಾದ ಹಿಂದುಗಳು, ಬೌದ್ಧರು, ಜೈನರು, ಸಿಖ್ಖರನ್ನು ಮತ್ತು ಅಭಾರತೀಯ ಧರ್ಮಗಳಾದ ಕ್ರೈಸ್ತ, ಇಸ್ಲಾಂ, ಧರ್ಮಗಳ ಅನುಯಾಯಿಗಳಾದ ಕ್ರೈಸ್ತ, ಮುಸ್ಲೀಮ್, ಮುಂತಾದವರನ್ನು ಪ್ರತ್ಯೇಕವಾದ ಧಾರ್ಮಿಕ ಗುಂಪೆಂದು ಮಾನ್ಯ ಮಾಡಿದೆ. ಅದೇ ಆಧಾರದ ಮೇಲೆ ಲಿಂಗಾಯತ ಧರ್ಮಾನುಯಾಯಿಗಳಾದ ಲಿಂಗಾಯತರನ್ನು ಗುರುತಿಸುವುದು ಅಗತ್ಯವಿದೆ. ಆದ್ದರಿಂದ ಲಿಂಗಾಯತ ಧರ್ಮದ ವೈಶಿಷ್ಟ್ಯವನ್ನು ಗುರುತಿಸಿ, ಮುಂಬರುವ ೨೦೦೧ರ ಜನಗಣತಿಯಲ್ಲಿ ಲಿಂಗಾಯತರನ್ನು ಪ್ರತ್ಯೇಕ ಧಾರ್ಮಿಕ ಗುಂಪೆಂದು ದಾಖಲಿಸಿ, ಲಿಂಗಾಯತರ ಗಣತಿಯನ್ನು ಸರಿಯಾಗಿ ಮಾಡಲು ತಾವು ಜನಗಣತಿ ಅಧಿಕಾರಿಗಳಿಗೆ, ಗಣತಿದಾರರಿಗೆ ಸ್ಪಷ್ಟವಾದ ಸೂಚನೆ, ತರಬೇತಿ, ನೀಡಬೇಕೆಂದು, ಹಿಂದೂ ಧರ್ಮದ ಒಂದು ಜಾತಿ ಅಥವಾ ಪಂಥವೆಂದು ಸೇರಿಸಬಾರದೆಂದು ಕೋರುತ್ತೇವೆ. ಒಂದು ವೇಳೆ ನೀವು ನಿಮ್ಮ ಸುತ್ತೋಲೆ, ಸೂಚನಾಪತ್ರಗಳಲ್ಲಿ ಲಿಂಗಾಯತ ಧರ್ಮಾನುಯಾಯಿಗಳಾದ ಲಿಂಗಾಯತರು ಪ್ರತ್ಯೇಕ ಧಾರ್ಮಿಕ ಗುಂಪೆಂದು ಸೂಚನೆ ನೀಡದಿದ್ದಲ್ಲಿ ಜನಗಣತಿಕಾರರು ಹಿಂದು ಧರ್ಮದೊಳಗಣ ಒಂದು ಜಾತಿಯನ್ನಾಗಿ ಲಿಂಗಾಯತರನ್ನು ಪರಿಗಣಿಸಿ ಅರ್ಥರಹಿತ, ಅತಾರ್ಕಿಕ ತಪ್ಪನ್ನು ಮಾಡುವರು.

ಜನಗಣತಿಯ ಪರಿಪತ್ರದಲ್ಲಿ (ಮಾದರಿ ೯೯೧ನೆಯ ಇಸವಿಯದು) ಯಾವುದೇ ಧರ್ಮದ ಹೆಸರು ಇಲ್ಲ. ಎಸ್.ಸಿ/ ಎಸ್.ಟಿ (SC/ST) ಎಂಬ ವರ್ಗಕ್ಕೆ ಪ್ರತ್ಯೇಕವಾದ ಕಾಲಮ್ ಇದೆ. ನಮ್ಮ ಸಂವಿಧಾನವು ತಮ್ಮ ತಮ್ಮ ಧರ್ಮದ ಬಗ್ಗೆ ಬರೆಯಲು ವ್ಯಕ್ತಿಗಳಿಗೆ ಸ್ವಾತಂತ್ರ್ಯ ಮತ್ತು ಸದವಕಾಶವನ್ನು ನೀಡಿದೆ. ಪ್ರಚಲಿತವಿರುವ, ಪ್ರಚಾರದಲ್ಲಿರುವ ಮಾನ್ಯತೆಯನ್ನು ಪಡೆದ ಧರ್ಮಗಳನ್ನಷ್ಟೇ ಅಲ್ಲ ಭಾರತ ಸರಕಾರದ ಜನಗಣತಿಯ ಸೂಚನಾ ಪತ್ರದಲ್ಲಿ ಹೆಸರಿಸದೆ ಇರುವ ಧರ್ಮಗಳ ಹೆಸರನ್ನು ಬರೆಸಲು

ಅನುಯಾಯಿಗಳಿಗೆ ಅವಕಾಶವಿದ್ದರೂ, ಸರಿಯಾದ ತಿಳುವಳಿಕೆ ತರಬೇತಿ ಇಲ್ಲದೆ ಜನಗಣತಿದಾರರು ವ್ಯಕ್ತಿಗಳು ಕೊಡುವ ಮಾಹಿತಿಯನ್ನು ದಾಖಲೆ ಮಾಡಲು ನಿರಾಕರಿಸಿ ಹಿಂದು ಮಾತ್ರ ಒಂದು ಧರ್ಮ, ಅದರಲ್ಲಿ ಲಿಂಗಾಯತವು ಒಂದು ಜಾತಿ ಮಾತ್ರ ಎಂದು ವಾದಿಸಿ, ಹಿಂದು ಎಂದು ಅಥವಾ ಹಿಂದು ಲಿಂಗಾಯತ ಎಂದು ಲಿಂಗಾಯತರನ್ನು ದಾಖಲು ಮಾಡುವುದುಂಟು. ಹಿಂದಿನ ಅಂದರೆ ೧೯೯೧ರ ಜನಗಣತಿಯಲ್ಲಿ ಈ ತಪ್ಪುಗಳು ನುಸುಳಿ ಲಿಂಗಾಯತ ಧರ್ಮೀಯರ ನಿಖರವಾದ ಸಂಖ್ಯೆ ಈ ವರೆಗೂ ಸರಿಯಾಗಿ ದೊರೆತೇ ಇಲ್ಲ.

## ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ.

ಒಂದು ದುರಾದೃಷ್ಟದ ಸಂಗತಿ ಏನೆಂದರೆ ಕೆಲವು ಸಂಘ-ಸಂಸ್ಥೆಗಳು, ಅಖಿಲ ಭಾರತ ವೀರಶೈವ ಮಹಾಸಭಾ ಮತ್ತು ವೀರಶೈವ ಸಮಿತಿ ಮುಂತಾದುವು ಜನಗಣತಿಯಲ್ಲಿ ಪ್ರತ್ಯೇಕ ಅಸ್ತಿತ್ವವನ್ನು ಕೇಳುತ್ತಿದ್ದು, ವೀರಶೈವ-ಲಿಂಗಾಯತಗಳನ್ನು ಸಮೀಕರಿಸಿ ಮಾತನಾಡುತ್ತಿದ್ದಾರೆ. ಇದು ಬಹಳ ಗೊಂದಲಕಾರಿಯಾಗಿದೆ. ವೀರಶೈವ ಮತ್ತು ಲಿಂಗಾಯತಗಳನ್ನು ಈ ರೀತಿ ಕಲಬೆರಕೆ ಮಾಡಿ ಮಾತನಾಡುವುದು ಜನರನ್ನು ದಿಕ್ಕು ತಪ್ಪಿಸುವಂಥದಾಗಿದೆ. ಕೆಳಕಂಡ ಕಾರಣಗಳಿಂದಾಗಿ ವೀರಶೈವ ಮತ್ತು ಲಿಂಗಾಯತ ಬೇರೆ ಬೇರೆಯಾಗಿವೆ.

೧. ವೀರಶೈವವು ಶೈವಮತದ ಸಪ್ತ ಶಾಖೆಗಳಲ್ಲಿ ಒಂದು, ಹಿಂದು ಧರ್ಮದಲ್ಲಿ ಎರಡು ಮುಖ್ಯ ವಾಹಿನಿಗಳಿವೆ. ಅವೆಂದರೆ ಆಗಮಗಳ ಆಧಾರದ ಮೇಲೆ ರೂಪುಗೊಂಡ ಶೈವ ಮತ್ತು ವೇದಗಳ ಆಧಾರದ ಮೇಲೆ ರೂಪುಗೊಂಡ ವೈದಿಕ ಧರ್ಮ. ಆದ್ದರಿಂದ ಆಗಮಗಳ ಆಧಾರದ ಮೇಲೆ ಆಚರಿಸಲ್ಪಡುವ ವೀರಶೈವವು ಅಹಿಂದು ಧರ್ಮ ಎನ್ನಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ವೇದ, ಆಗಮಗಳ ಮಾನ್ಯತೆಯನ್ನು ಪ್ರಶ್ನಿಸಿದ ಲಿಂಗಾಯತ ಧರ್ಮವು ನಿಶ್ಚಿತವಾಗಿಯೂ ಅಹಿಂದು ಧರ್ಮ. ಗಿಡದ ಒಂದು ಕೊಂಬೆಯು ಇಡೀ ಗಿಡವಾಗಲು ಸಾಧ್ಯವಿಲ್ಲ. ಒಂದು ಗಿಡವು ಮತ್ತೊಂದು ಗಿಡದ ಟೊಂಗೆಯಾಗಲು ಸಾಧ್ಯವಿಲ್ಲ. ಅದೇ ರೀತಿ ವೀರಶೈವವು ಶೈವ ಧರ್ಮದ ಒಂದು ಶಾಖೆಯಾಗಿದ್ದು ಅದು ಹಿಂದು ಧರ್ಮದ ಹೊರಗೆ ಇರಲು ಸಾಧ್ಯವಿಲ್ಲ. ಸ್ವತಂತ್ರ ಮತ್ತು ಸಂಪೂರ್ಣವಾದ ಧರ್ಮವಾದ ಲಿಂಗಾಯತವು ಹಿಂದು ಧರ್ಮದ ಒಂದು ಶಾಖೆಯಾಗಲು ಸಾಧ್ಯವಿಲ್ಲ.

೨. ವೀರಶೈವವು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನಲ್ಲಿ ವೀರತಮವಾದ ಭಕ್ತಿಯನ್ನು ಬೋಧಿಸುತ್ತದೆ. ಲಿಂಗಾಯತವು ತ್ರಿಮೂರ್ತಿಗಳಲ್ಲಿರುವ ಶಿವನನ್ನಾಗಲೀ, ವಿಷ್ಣುವನ್ನಾಗಲೀ ಪೂಜಿಸದೆ ಪರಾತ್ಪರ ವಸ್ತು ಪರಮಾತ್ಮ ಲಿಂಗದೇವನನ್ನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ಪೂಜಿಸಲು ಬೋಧಿಸುತ್ತದೆ. ೩. ಯಾವಾಗ ಬಸವಣ್ಣನವರು ಲಿಂಗಾಯತ ಎಂಬ ಹೊಸ ಧರ್ಮವನ್ನು ಕೊಟ್ಟರೋ ಆಗ ಅನೇಕ ಜಾತಿಯವರು, ಅನೇಕ ಧಾರ್ಮಿಕ ಮತ ಪಂಥಗಳವರು ಇದನ್ನು ಪ್ರವೇಶಿಸಿದರು. ಕರ್ನಾಟಕದಲ್ಲಿ ಬಸವಣ್ಣನವರ ಕಾಲದಲ್ಲಿ ಶೈವ ಮತದ ಶಾಖೆಗಳಾದ ಪಾಶುಪತ, ಶೈವ, ಕಾಳಾಮುಖ ಮುಂತಾದವು ಅಸ್ತಿತ್ವದಲ್ಲಿದ್ದರೂ ಆಗ ವೀರಶೈವವು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿ ಇರಲೇ ಇಲ್ಲ. ಆಗ ವೀರಶೈವವು ತಮಿಳುನಾಡು ಕೇರಳ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಇತ್ತು. ಆ ಮತಗಳವರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮವನ್ನು ಸ್ವೀಕರಿಸಿದರು. ಇವರುಗಳು ಧರ್ಮ ಸ್ವೀಕಾರದ ನಂತರ ಲಿಂಗಾಯತ ಸಮಾಜದಲ್ಲಿ ವೀರಶೈವ-ಲಿಂಗಾಯತರೆಂದು ತಮ್ಮನ್ನು ತಾವು ಗುರುತಿಸಿಕೊಳ್ಳತೊಡಗಿದರು. ಆದರೆ ಇಂದಿನ



ಲಿಂಗಾಯತ ಸಮಾಜದಲ್ಲಿ ಎಲ್ಲ ಜಾತಿ ಮತ ಪಂಥ ಉದ್ಯೋಗಗಳ ಜನರೂ ಇದ್ದು, ಬ್ರಾಹ್ಮಣ ಲಿಂಗಾಯತರು (ಆರಾಧ್ಯರು) ವೈಶ್ಯ ಲಿಂಗಾಯತರು (ನಗರ್ತರು), ರೆಡ್ಡಿಲಿಂಗಾಯತರು, ಮಡಿವಾಳ ಲಿಂಗಾಯತರು, ಸಮಗಾರ ಲಿಂಗಾಯತರು, ಡೋಹರ ಲಿಂಗಾಯತರು, ನೇಕಾರ ಲಿಂಗಾಯತರು ಇತ್ಯಾದಿ ಇತ್ಯಾದಿ ಇದ್ದಾರೆ. ಇವರೆಲ್ಲರೂ ಧಾರ್ಮಿಕವಾಗಿ ಲಿಂಗಾಯತರೆಂದು ಗುರುತಿಸಲ್ಪಡುತ್ತಾರೆಯೇ ವಿನಾ ಅವರ ದೀಕ್ಷಾ ಪೂರ್ವದ ಜಾತಿಮತಪಂಥಗಳನ್ನು ಹಿಡಿದು ಗುರುತಿಸಲ್ಪಡರು. ಮಾತ್ರವಲ್ಲ ಪರಸ್ಪರರಲ್ಲಿ ಊಟೋಪಚಾರ ವಿವಾಹ ನಡೆಯುತ್ತವೆ. ಆದ್ದರಿಂದ ವೀರಶೈವ ಲಿಂಗಾಯತ ಎಂದು ಬರೆದಾಗ ಇದು ಲಿಂಗಾಯತ ಸಮಾಜದೊಳಗಣ ಒಂದು ಪಂಥವನ್ನು ಗುರುತಿಸುವುದರಿಂದ ಲಿಂಗಾಯತ ಸಮಾಜದ ಒಡಕಿಗೆ ಇದು ಕಾರಣವಾಗುವುದು.

೪. ಇಂದಿಗೂ ಸಹ ಬಸವ ಪೂರ್ವದಲ್ಲಿದ್ದ ವೀರಶೈವರ ಗುಂಪುಗಳು ತಮಿಳುನಾಡು, ಆಂಧ್ರ ಮತ್ತು ಕೇರಳ ರಾಜ್ಯಗಳಲ್ಲಿ ಪ್ರತ್ಯೇಕ ಅಸ್ತಿತ್ವ ಹೊಂದಿರುವುದನ್ನು ಕಾಣಬಹುದು. ಇವರು ಚತುರ್ವರ್ಣ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ್ದಾರೆ. ಶೂದ್ರ ವೀರಶೈವರು ಮಾಂಸಾಹಾರಿಗಳಾಗಿದ್ದಾರೆ. ಕೆಲವು ವೀರಶೈವ ಮಠಗಳಿದ್ದು ಅವುಗಳ ನಂಬಿಕೆ, ಆಚರಣೆ, ವಿಧಿ-ವಿಧಾನ ಮತ್ತು ಸಂಪ್ರದಾಯಗಳು ಲಿಂಗಾಯತರಿಗಿಂತಲೂ ಪೂರ್ತಿ ಬೇರೆಯೇ ಆಗಿವೆ.

ಲಿಂಗಾಯತರು ಧರಿಸುವ ಧಾರ್ಮಿಕ ಲಾಂಛನ ಇಷ್ಟಲಿಂಗವು ವೀರಶೈವರು ಧರಿಸುವ ಲಾಂಛನಕ್ಕಿಂತಲೂ ಬೇರೆಯೇ ಆಗಿದೆ ಮತ್ತು ವೀರಶೈವರಲ್ಲಿ ವಿವಿಧ ವರ್ಣಗಳವರು ಧರಿಸುವ ಲಿಂಗಗಳಲ್ಲಿ ಸಹ ವ್ಯತ್ಯಾಸವಿದೆ. ಬ್ರಾಹ್ಮಣ ವೀರಶೈವರು ರಸಲಿಂಗವನ್ನು, ಕ್ಷತ್ರಿಯ ವೀರಶೈವರು ಬಾಣಲಿಂಗವನ್ನು, ವೈಶ್ಯ ವೀರಶೈವರು ಸುವರ್ಣ ಲಿಂಗವನ್ನು, ಶೂದ್ರ ವೀರಶೈವರು ಶಿಲಾಲಿಂಗವನ್ನು ಹೊಂದುವರು. ಅಸ್ಪೃಶ್ಯರಿಗೆ ಯಾವುದೇ ಬಗೆಯ ಲಿಂಗಪೂಜೆ, ಧಾರಣೆ ನಿಷೇಧಿಸಲ್ಪಟ್ಟಿದೆ.

ಲಿಂಗಾಯತ ಧರ್ಮದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಲಿಂಗಾಯತ ಧರ್ಮೀಯರಲ್ಲಿ ಯಾವುದೇ ವ್ಯತ್ಯಾಸ ಭೇದವಿಲ್ಲದೆ ಒಂದೇ ರೀತಿಯ ಧಾರ್ಮಿಕ ಲಾಂಛನ ಕೊಡಲ್ಪಡುತ್ತದೆ. ಎಲ್ಲರಿಗೂ ದೀಕ್ಷಾ ಸಂಸ್ಕಾರವುಂಟು, ಒಂದೇ ಬಗೆಯ ಲಿಂಗವು ಕೊಡಲ್ಪಡುತ್ತದೆ.

೫. ಬಸವ ಪೂರ್ವದ ವೀರಶೈವವು ನಾಲ್ಕು ವರ್ಣಗಳವರಿಗೆ ಮಾತ್ರ ವೀರಶೈವ ದೀಕ್ಷೆಯನ್ನು ನೀಡಿತು. ಐದನೆಯ ವರ್ಣವಾದ ಪಂಚಮರಿಗೆ ಅರ್ಥಾತ್ ಅಸ್ಪೃಶ್ಯರಿಗೆ ದೀಕ್ಷಾ ಸಂಸ್ಕಾರ ನೀಡಲಿಲ್ಲ. ಆದರೆ ಬಸವಣ್ಣನವರ ಲಿಂಗಾಯತ ಧರ್ಮವು ಎಲ್ಲ ಮಾನವರನ್ನು ಯಾವುದೇ ಭೇದವಿಲ್ಲದೆ ಸಂಸ್ಕಾರವನ್ನು ನೀಡಿ ಸ್ವಾಗತಿಸಿ, ಆದರಿಸುತ್ತದೆ.

ಆದ್ದರಿಂದ ಈ ಹಿನ್ನೆಲೆಯಲ್ಲಿ ವೀರಶೈವ ಪದವನ್ನು ಲಿಂಗಾಯತದೊಡನೆ ಸೇರಿಸಿ ಬಳಸಬಾರದು. ಲಿಂಗಾಯತಕ್ಕೆ ಸಮಾನಾರ್ಥ ಕೊಡುವ ಪದವೆಂದು ವೀರಶೈವವನ್ನು ಬಳಕೆ ಮಾಡಲೇಬಾರದು. ಏಕೆಂದರೆ ಇವೆರಡು ಭಿನ್ನವಾದ, ಕೆಲವು ವಿಷಯಗಳಲ್ಲಿ ತದ್ವಿರುದ್ಧವಾದ ವಿಚಾರ ಸರಣಿಯನ್ನು ಹೊಂದಿವೆ.

ನಾವು ತಮ್ಮಲ್ಲಿ ಮನವಿ ಸಲ್ಲಿಸುವುದೇನೆಂದರೆ, ಮುಂಬರುವ ೨೦೦೧ರ ಜನಗಣತಿಯಲ್ಲಿ ಲಿಂಗಾಯತ ಸಮುದಾಯವು ಪ್ರತ್ಯೇಕವಾದ ಗಣತಿಯನ್ನು ಹೊಂದುವಂತೆ ತಾವು ವ್ಯವಸ್ಥೆ ಮಾಡಬೇಕು. ಆದ್ದರಿಂದ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಸರಿಯಾದ ಮಾಹಿತಿ ನೀಡಿ ಗಣತಿಕಾರರನ್ನು ತರಬೇತಿ ನೀಡುವಲ್ಲಿ ಲಿಂಗಾಯತ ಸಮಾಜದ ಬಗ್ಗೆ ಪೂರ್ಣ ತಿಳುವಳಿಕೆ ಮತ್ತು ತರಬೇತಿ ಕೊಡಬೇಕು ಎಂಬುದೇ

ಆಗಿದೆ ಮತ್ತು ನಮ್ಮ ವಿಶೇಷ ಮನವಿ ಏನೆಂದರೆ ಸ್ವತಂತ್ರವಾದ ಪ್ರಗತಿಪರ ಲಿಂಗಾಯತ ಧರ್ಮದ ಅನುಯಾಯಿಗಳನ್ನು ಹಿಂದೂ ಶೈವಮತದ ಒಂದು ಶಾಖೆಯಾಗಿರುವ ವೀರಶೈವದ ಅನುಯಾಯಿಗಳ ಜೊತೆ ಸೇರಿಸಿ ಇತಿಹಾಸಕ್ಕೆ ಅಪಚಾರವನ್ನು ಮಾಡಬಾರದು ಎಂಬುದು. ಈ ದಿಶೆಯಲ್ಲಿ ನೀವು ಸ್ಪಷ್ಟ ಮತ್ತು ದೃಢವಾದ ಹೆಜ್ಜೆಗಳನ್ನಿಟ್ಟು ಸೂಕ್ತ ಕ್ರಮ ಕೈಗೊಳ್ಳುವಿರಾಗಿ ಆಶಿಸುತ್ತೇವೆ.

ಈ ಮನವಿಯನ್ನು ಸ್ವೀಕರಿಸಿ, ನಿಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿ ನಾವು ಮುಂದೆ ಕೈಗೊಳ್ಳಬೇಕಾದ ಕ್ರಮವನ್ನು ಸೂಚಿಸಬೇಕೆಂದು ಕೋರುತ್ತೇವೆ.

ವಂದನೆಗಳೊಡನೆ,

ನಿಮ್ಮ ವಿಶ್ವಾಸಿಗಳಾದ

ಬೆಂಗಳೂರು
೨೨-೫-೨೦೦೦

ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ-೫೮೭೧೧೫

## ೨೦೦೧ ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸಲು ಸೂಚನೆ

ಶರಣ ಬಂಧುಗಳೇ,

೧. ಜನಗಣತಿಯ ನಿರ್ದೇಶಕರಿಗೆ ನಿಮ್ಮ ಸಂಸ್ಥೆಯ ಲೆಟರ್ ಹೆಡ್‌ದಲ್ಲಿ ಅಥವಾ ನಿಮ್ಮ ವೈಯಕ್ತಿಕ ಲೆಟರ್ ಹೆಡ್‌ದಲ್ಲಿ ಈ ಪತ್ರವನ್ನು ಡಿ.ಟಿ.ಪಿ. ಮಾಡಿಸಿ ಅಥವಾ ಟೈಪ್ ಮಾಡಿಸಿ ಅಂಚೆಯಲ್ಲಿ ಕಳಿಸಿಕೊಡಿರಿ. ಹೆಚ್ಚಿನ ಜನರ ಸಹಿ ಸಂಗ್ರಹಿಸಿಯೂ ಕಳಿಸಬಹುದು. ಅದೇ ರೀತಿ ಇಂಗ್ಲೀಷ್ ಪ್ರತಿಯನ್ನು ದೆಹಲಿಯ ವಿಳಾಸಕ್ಕೆ ಕಳಿಸಿರಿ.

೨. ಇದೇ ವಿಷಯವನ್ನು ಮಾನ್ಯ ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮೀಷನರ್, ತಹಶೀಲ್ದಾರ್ ಅವರುಗಳ ಮೂಲಕವೂ ಜನಗಣತಿ ನಿರ್ದೇಶಕರನ್ನು ಉದ್ದೇಶಿಸಿ ಬರೆದು, ಸ್ಥಳೀಯವಾಗಿ ಕಂಡು ಮನವಿ ಸಲ್ಲಿಸಿರಿ.

೩. ಸಮಾಜ ಬಾಂಧವರನ್ನು ಒಟ್ಟುಗೂಡಿಸಿ ಮೆರವಣಿಗೆಯಲ್ಲಿ ತೆರಳಿ ಮನವಿಯನ್ನು ಸಮರ್ಪಿಸಿರಿ.

೪. ೨೦೦೧ನೆಯ ಇಸವಿಯ ಜನಗಣತಿಯ ಧರ್ಮ Religion ಕಾಲಮ್‌ದಲ್ಲಿ ಲಿಂಗಾಯತ ಎಂದೇ ಬರೆಸಲು ತೀವ್ರಗತಿಯಲ್ಲಿ ಪ್ರಚಾರ ಮಾಡಿರಿ.

### ಕಲ್ಯಾಣ ಕಿರಣದ ಮುಂದಿನ ಸಂಚಿಕೆಯಲ್ಲಿ

ಡಾ|| ಚಿದಾನಂದ ಮೂರ್ತಿಯವರು ದಿ. ೨೪-೫-೨೦೦೦ ಮತ್ತು ೨೫-೫-೨೦೦೦ ರ 'ಕನ್ನಡ ಪ್ರಭಾ'ದಲ್ಲಿ ಹಿಂದು ವೀರಶೈವ - ಒಂದು ವಿಶ್ಲೇಷಣೆ ಎಂಬ ಲೇಖನ ಬರೆದಿದ್ದಾರೆ. ಅವರು ಕೊಟ್ಟ ಎಲ್ಲ ವಿವರಗಳು ಲಿಂಗಾಯತವು ವೀರಶೈವದಿಂದ ಹೇಗೆ ಸ್ಪಷ್ಟವಾಗಿ ಬೇರೆ ಎಂಬುದನ್ನು ದೃಢಪಡಿಸುತ್ತದೆ. ಜುಲೈ ಸಂಚಿಕೆಯಲ್ಲಿ ಚಿದಾನಂದಮೂರ್ತಿಯವರ ಲೇಖನ ಅದರ ವಿಶ್ಲೇಷಣೆ ಪ್ರಕಟಿಸಲಾಗುವುದು.



To
The Registrar General
and Census Commissioner, India
2 A, Mansingh Road, Opp. Taj Hotel
New Delhi

Dear Sir,

Sub :

1. Recognising Lingayat community following Lingayat religion as an independent one in the ensuing census (2001) of India
2. Issuing instructions to the concerned officers and through them to the enumerators
   a) Not to mix up Lingayats with Veerashaivas
   b) To collect and record census details of Lingayats accurately unlike during the previous years.

Our Mother Land India is a great womb for many religions born in India and as well a great cradle for many religions born outside India. Among many religions born in India, Lingayatism founded by Lord Basaveswara in 12th century is a very progressive, rational religion. Lingayat religion has struggled hard to establish an ideal **Welfare state** (Kalyana Rajya) launching a crusade against casteism, superstitions, inequality, untouchability and exploitation which were going on in the name of religion. Lingayat religion preached Fatherhood of God and Brotherhood of Humanity uplifting the down trodden, upholding the principles of equal rights for women, fraternity and social justice.

**Lingayatism - an independent religion but not a caste.**

Some are under the wrong impression that Lingayatism is a caste in Hindu Society which is not correct. It is to be noted that a caste does not have specific philosophy, yoga, initiation etc. as such. Lingayat religion embraced people from all castes and all occupations from Brahmin to Bhangi through religious consecration- Istalinga Diksha. Lingayatism does not believe in caste system. It is an independent and perfect religion established by Lord Basavanna during 12th century. Lingayatism is a very progressive and non-Vedic, a non-Hindu religion with its own special characteristics as detailed below.

**1. Prophet founder** - Lord Basavanna (1134-1196)
**2. Religious scriptures** - Vachana Literature

3. **Language of the religion** - Kannada
4. **Name of God, the Creator** - Lingadeva
5. **Religious symbol** - A globular shaped emblem called Istalinga that is worn on body
6. **Holy religious place** - Kudala Sangama in Bagalakot district of Karnataka, where founder-prophet Basavanna merged with God (Lingaikya)
7. **Religious annual congregation** - Sharana Mela -the annual mamoth congregation (Just like Huz of Muslims) at Kudala Sangama.
8. **Religious custom** - Sharana Vrata
9. **Religious consecration** - Istalinga Diksha
10. **Religious centre** - Basava (Anubhava) Mantapa
11. **Rites and rituals** - Worship of Guru-Basavanna, Istalinga-globular Emblem, Jangama- holy person.
12. **Religious weekly congregation** - Sharana Sangama-weekly prayer
13. **Holy month** - Shravana
14. **Flag symbol** - Hexagonal star with Istalinga on Saffron coloured cloth.
15. **Heritage** - Sharana heritage started from Lord Basavanna with so many Sharanas and Shivayogis of Lingayat Religion.
16. **Religious fraternity** - Equality without any distinction of caste, creed, class or sex.
17. **Aim of Lingayat religion** - To build up a **welfare state** free from caste, creed, class and based on religious values.

**Lingayat religion is a non-Hindu, non-Vedic Faith**

Lingayat religion founded by Lord Basavanna and followed by **one lakh ninety six thousand** Sharanas at His life time is a non-Hindu, non-Vedic Faith for the following reasons.

1. Hinduism has no one single founder where as Lingayatism has Lord Basavanna as its founder-prophet.
2. Hinduism is based on the preachings of Vedas, Agamas, Bhagawadgita, Mahabharata, Ramayana, Bhagawata, Puranas etc. where as Basavanna questioned the authority of all these Hindu Scriptures and rejected many of the tenets contained therein.

   Vachana literature which opposed four-fold caste system, untouchability, polytheism, inequality and preached equality, monotheism etc. is the authoritative source of knowledge for Lingayats.
3. Main ritual of Hinduism is Homa, Yajna and Sacrifice. Lingayat religion totally rejects and opposes such rituals.
4. Hinduism is polytheistic in belief and practice. It believes in the existence of many gods and goddesses and worships many deities along with five elements and animals as well. Lingayatism is strictly monotheistic. Basavanna preached consistent monotheism which preaches belief in one only God who is all pervading, omnipotent, omniscient etc. He insisted to worship the only God in the form of globular Istalinga and nothing else. Hinduism believes in Trinity i.e. the concept of Brahma, Vishnu and Maheswara, where as Lingayat disbelieves in this mythological concept of Trinity as a myth.
5. Hinduism considers places like Kashi, Rameswara, Tirupathi etc as holy and rivers like Ganga, Yamuna etc as sacred. It believes visiting of such places and taking dip in holy rivers will absolve all sins committed. Lingayatism does not consider any such places on earth as holy and any river or pond as sacred and mere dip in water will absolve all sins. Concept of sin and merit in Hinduism and Lingayatism is completely different.
6. Geeta, Gayatri, Ganges and Govu (Cow) are most holy and worshipful for Hindus. But Lingayats do not chant either Geeta or Gayatri, do not worship either Ganga or Govu.
7. Hinduism believes in 5 pollutions- pollution of birth, death, caste, menstruation and orts. Lingayatism rejects these 5 pollutions.
8. Hinduism believes in astrology, Vastushilpa, horoscope etc where as Lingayatism totally rejects (denies) them.
9. Traditional Hindu social structure consists of four Varnas (hundreds of castes) and fifth Varna-untouchables. They are

**1. Brahmin 2. Kshatriya 3. Vaisya 4. Shudra 5. Untouchable (Asprushya)**

In the prescribed form pertaining to census form of India the fifth group is provided with seperate column as of S.C/S.T. The traditional Hinduism gives Dwija Samskar (Brahmin-consecration) as follows :

1. 1st grade - to Brahmins by birth

2. 2nd grade - Kshatriyas by birth
3. 3rd grade - Vaisyas by birth

In Hindu society 4th grade is given to Shudras (traditional manual workers) and they are denied of any kind of religious consecration. It is believed that Brahminhood (Dwijatwa) comes by upanayana i.e. through wearing of sacred thread. Because sacred thread is not given to Shudra he is considered as inferior to the other 3 groups. So if Lingayats accept that they are Hindus, they are to be inevitably grouped under Shudra column in the four fold social structure as they do not wear sacred thread. Thus Lingayats who have independent religious status do not like to be classified under Shudra class.

Hinduism believes in four fold caste system i.e. ladder type of society and in its product-untouchability as God-made where as Lingayatism disbelieves all these and considers this classification as man-made and advocates for horizontal type of society based on religions and social equality.

10. Lingayats have their own
    a) **Metaphysics** - Shunya Siddhanta
    b) **Yoga** - Istalinga Yoga given by Basavanna
    c) **Mystic philosophy** -Shatasthala
    d) **Religious consecration** - Istalinga Diksha through which any body can be taken into Lingayat fold.
    e) **Religious fraternity** - Equal treatment without any differentiation of caste, creed, class, sex etc when once consecration is over.
    f) **Burial grounds**

**Lingayat burial yards**

The important traditional custom that establishes unique and independent. identification of Lingayatism is its burial custom. In traditional Hinduism, mostly the dead bodies of dwijas are usually burnt where as in Lingayat religion dead bodies are buried. Burial yards of Lingayats are seperate from traditional Hindu burial yards. Since 12th century burrying of dead bodies in seperate burial yard is in vogue in Lingayat community.

10. Temples are religious places to Hindus. Deities installed therein are objects of worship for Hindus and there is a middle person called the priest . Lingayatism opposes both temple-craft and priest-craft which encourage casteism. untouchability, superstition etc. Lord Basavanna built an institution called Anubhava Mantapa as a model which embraced all



people alike and preached Fatherhood of God and Brotherhood of Humanity beings.

11. All Hindus are not vegetarians where as Lingayatism preaches and practises strict vegetarianism and avoids killing of animals for the sake of food.

Thus, Lingayats, followers of Lingayat religion differ totally from traditional Hindus in every aspect-in beliefs, practices, rites-rituals, customs, culture etc. In view of the above, Lingayat religion is eligible to be recognised as an independent religion. We are very proud to say that Lingayatism founded by Lord Basavanna contributes a lot to the rich heritage of our Motherland, India and to human kind as well in general.

Our Constitution has recognised the independent existence of Indian-religious groups like Hindus, Buddhists, Jains, Sikhs who are respectively the followers of Hinduism, Buddhism, Jainism, Sikhism and non-Indian religious groups like Christians, Muslims, Jews, Parsees following Christianity & Islam, Jewish, Parsee religions respectively and you have given instructions that the following abbreviations can be used to record following religions :

| | |
|---|---|
| **H** for Hindus | **M** for Muslims |
| **C** for Christians | **S** for Sikhs |
| **B** for Buddhists | **J** for Jains |

*(Introductory Note, page XI, Census of India 1991, Series 1, Part IV-B (ii) Religion (Table c-9)*

**Publisher : Dr. M. Vijayanunni**, of the Indian Administrative service Registrar General and Census Commissioner, India)

You have instructed, *" For others, record the actual religion as returned fully..........and not to mistake religion for caste which will not be recorded there."*

On similar basis, Lingayats are also to be recognised and identified. So we request you to observe and realise the uniqueness of Lingayat Religion and issue clear instructions to the concerned officers to inform and train up enumerators to record Lingayats as a seperate religious group and not to consider them as a caste or a sect in Hinduism. If you do not mention in your circulars about Lingayats following Lingayat religion-a non-Hindu religion, enumerators will not record Lingayats seperately but will include under Hindu fold, which is really meaningless and illogical.

We clearly know that name of any religion or community is not

mentioned in Census form except S.C/S.T and our constitution has provided full freedom to record ones own religion ; No doubt necessary provision has been made to record even the names of such of the religious sects not indicated in the circular but unless the word Lingayat is clearly mentioned enumerators for want of adequate knowledge may either refuse to record the statement given by the individuals or write it as Hindu-Lingayat thinking that Hinduism is a religion and Lingayatism is a caste, which is completely wrong. Such mistakes have crept in during the previous census of 1991 thereby resulting in abnormal variations in census figures. We sincerely request you to instruct emumerators to record in column No.8, Religion, either fully as Lingayat or by abbreviation L, when an individual says himself as Lingayat i.e. follower of Lingayat Religion.

**Lingayat and Veerashaiva are different**

It is very unfortunate thing that a few organisations like All India Veerasaiva Mahasabha and Veerasaiva samithi are demanding seperate identification in census and are creating confusion by mixing up the word Virasaiva with Lingayat, It is very wrong and misleading to mix up both of them. For the following reasons

1. Virasaivism is one of the seven sects of Saivism. Saivism is one among two streams of Hinduism. Saivism based on Agamas and Vedism based on Vedas are part and parcel of traditional Hinduism. So Veerasaivism cannot be a non-Hindu faith. where as Lingayatism which is not based on either Agamas or Vedas is clearly a non-Hindu Religion.

   A branch cannot be a whole tree ; an independent tree cannot be a small branch of other tree. Likewise Veerasaivism, a sect of Saivism cannot be an independent religon from Hinduism and Lingayatism an independent religion cannot be a sect (or caste) of Hinduism.
2. Veerasaivism preaches staunch devotion towards deity Lord Shiva. Lingayatism preaches neither to worship Shiva nor Vishnu but insists on to worship God, the Absolute Reality, Lingadeva in the form of globular shaped emblem-Istalinga.
3. When Lord Basavanna started a new religion-Lingayatism, many people from different castes, different religious sects joined this new faith. In Karnataka though a few Saiva cults like Pashupata Saiva, Kalamukha Saiva existed at the time of Lord Basavanna, Veerasaiva Cult (sect) had no existence at all. It existed at that time in some parts of Andhra Pradesh and Tamil Nadu. Those people came and accepted Basavanna's religion. It is those people who identified themselves among Lingayats as Veerasaiva Lingayats. But today in Lingayat community exist converts from all castes and all occupations. There are Brahmin Lingayats (Aradhyas) Vaisya Lingayats (Nagartas) Reddy Lingayats, Washermen-Lingayats, Cobbler Lingayats, Tanner Lingayats, Weaver Lingayats etc. etc. All these are identified as only Lingayats and not differentiated on the basis of their previous castes they belonged to prior to conversion. Even mutual dining and marriages do happen among all these groups. So to identify one group among Lingayats as Veerasaiva Lingayats will cause disintegration of Lingayats.
4. Even to this day pre-Basavanna period Veerasaivas are existing as seperate groups in some parts of Tamil Nadu, Andhra and Kerala states. They follow four fold caste system. Shudra Veerasaivas are non-vegetarians. There are a few Veerasaiva maths whose beliefs, practices, rites-rituals and customs are entirely different from those of Lingayats.

   The emblem Lingayats wear is completely different from that worn by Veerasaivas. There is once again difference in wearing the symbol among Veerasaivas themselves. Brahmin Veerasaivas wear Rasalinga (Emblem made of mercury), Kshatriya Veerasaivas wear arrow-like emblem made of iron, Vaisya Veerasaivas wear golden emblem and Shudra Veerasaivas stone-emblem, untouchable is not allowed either to wear or worship. Contrary to this there is no any kind of differentiation amongst Lingayats in wearing the religious symbol. All are given initiation and chance to wear and worhip religous emblem-Ista Linga.
5. Pre-Basava Virasaivism gave consecration only to people of four varnas and refused to give initiation to untouchables, where as Basavanna's Lingayatism embraced all human beings alike without any kind of discrimination.

In this context one should not use the term Veerasaiva as equivalent to Lingayat since they are fundamentally different and quite opposite to each other as explained above.

So, we request earnestly your kindself to please arrange to make provision for Lingayats to register their religious group as Lingayat (L) by recognising Lingayat community as seperate religious group. We request you to instruct your officers to train up enumerators with adequate knowledge and information so that Lingayat community will get accurate census figures. We request as well not to mix up Lingayats, followers of Lingayat religion with Veerasaivas, followers of Veerashaiva

Sect. We sincerely hope that you will take needful action in this matter very early.

This may please be acknowledged and the action taken intimated very early for further needful action.

Thanking you,

Your's faithfully,

---

ಶ್ರೀಯುತ ಎಸ್.ಎಂ. ಕೃಷ್ಣ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ
ವಿಧಾನ ಸೌಧ, ಬೆಂಗಳೂರು-೫೬೦೦೦೧

ಇವರಲ್ಲಿ ವಿಜ್ಞಾಪನೆಗಳು

ಮಾನ್ಯರೇ,

**ವಿಷಯ : ಜನಗಣತಿಯ ಧರ್ಮಕಾಲಮ್‌ದಲ್ಲಿ 'ಲಿಂಗಾಯತ' ಪದಕ್ಕೆ ಅವಕಾಶ ನೀಡಲು ಶಿಫಾರಸು.**

೧೨ನೆಯ ಶತಮಾನದಲ್ಲಿ ಆಗಿ ಹೋಗಿರುವ ಕ್ರಾಂತಿ ಪುರುಷ ಬಸವಣ್ಣನವರು ಉತ್ತಮ ಕುಲದಲ್ಲಿ ಹುಟ್ಟಿದರೂ ವೈದಿಕ ಧರ್ಮವು ಸೃಷ್ಟಿಸಿದ್ದ ಚತುರ್ವರ್ಣ ವ್ಯವಸ್ಥೆ, ಜಾತಿ ಪದ್ಧತಿ, ಅಸ್ಪೃಶ್ಯತೆ, ಅಸಮಾನತೆ, ಮೂಢನಂಬಿಕೆ, ಬಹುದೇವತೋಪಾಸನೆ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ ಇವುಗಳನ್ನು ಕಂಡು ತಾವು ಹುಟ್ಟಿದ ಮನೆತನ, ಧರ್ಮವನ್ನು ತೊರೆದು ಪ್ರಗತಿಪರ ದೃಷ್ಟಿಕೋನದ ಸಮಾನತೆಯ ತಳಹದಿಯ ಮೇಲೆ ನಿಂತ ಹೊಸ ಧರ್ಮ ಲಿಂಗಾಯತವನ್ನು ಸ್ಥಾಪಿಸಿದರು. ಅನುಭವ ಮಂಟಪವೆಂಬ ಅದ್ವಿತೀಯವಾದ ಸಂಸ್ಥೆಯೊಂದನ್ನು ಕಟ್ಟಿ, ಕಾಶ್ಮೀರದಿಂದ ಕನ್ಯಾಕುಮಾರಿಯ ಭೂಭಾಗದಿಂದೆಲ್ಲ ಸಾಧಕರು, ಸಿದ್ಧಪುರುಷರನ್ನು ಆಕರ್ಷಿಸಿದರು. ಅನುಭವ ಮಂಟಪದ ವಿಶೇಷ ಕೊಡುಗೆಯಾದ ವಚನ ಸಾಹಿತ್ಯವು ಇಂದು ಕನ್ನಡದ ಹೆಮ್ಮೆಯ ಆಸ್ತಿ.

**ಯಾವ ರೀತಿ ಭಾರತದಲ್ಲಿ ಹುಟ್ಟಿದ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳೆಂದು ಮಾನ್ಯತೆ ಪಡೆದಿವೆಯೋ ಅದೇ ರೀತಿ ಲಿಂಗಾಯತ ಧರ್ಮವೂ ಸ್ವತಂತ್ರ ಧರ್ಮ.**

ಈ ಹಿನ್ನೆಲೆಯಲ್ಲಿ ೨೦೦೧ನೆಯ ಇಸವಿಯಲ್ಲಿ ಭಾರತ ಸರ್ಕಾರವು ನಡೆಸುವ ಜನಗಣತಿಯಲ್ಲಿ ಲಿಂಗಾಯತ ಧರ್ಮೀಯರು ಲಿಂಗಾಯತ ಎಂದು ಬರೆಸಲು ಉತ್ಸುಕರಾಗಿದ್ದಾರೆ. ಈ ಬಗ್ಗೆ ಭಾರತ ಸರಕಾರದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿಯ ಮಹಾನಿರ್ದೇಶಕರು ದೆಹಲಿ ಮತ್ತು ಕರ್ನಾಟಕ ರಾಜ್ಯ ಇವರಿಗೆ ವಿವರವಾದ ಮನವಿ ಕೊಡಲಾಗಿದೆ. ಅದರ ಪ್ರತಿಯನ್ನು ತಮ್ಮ ಗಮನಕ್ಕೆ ತರಲಾಗಿದೆ. ತಾವು ಕರ್ನಾಟಕದ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಬಲ್ಲವರಾಗಿದ್ದೀರಿ. ಆದ್ದರಿಂದ ಸಂಬಂಧ ಪಟ್ಟ ದೆಹಲಿ ಮತ್ತು ಕರ್ನಾಟಕ ರಾಜ್ಯದ ಜನಗಣತಿ ಅಧಿಕಾರಿಗಳಿಗೆ ಲಿಂಗಾಯತ ಧರ್ಮದ ಮಾನ್ಯತೆ ಕುರಿತು ವಿಶೇಷ ಶಿಫಾರಸು ಮಾಡಬೇಕೆಂದು ಕೋರುತ್ತೇವೆ.

ವಂದನೆಗಳೊಂದಿಗೆ,

**ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ**
ಜಗನ್ಮಾತಾ ಅಕ್ಕಮಹಾದೇವಿ ಪೀಠ, ಧಾರವಾಡ

**ಎನ್. ಪುಟ್ಟರುದ್ರ, ವೀರಣ್ಣ ಕೊರ್ಲಹಳ್ಳಿ, ಸುಭಾಷ ಪಾಟೀಲ, ಮಾಲೂತಾಯಿ ಚಂದ್ರಕಾಂತ ಸ್ವಾಮಿ**



ಶ್ರೀಯುತ ಎಸ್.ಎಂ. ಕೃಷ್ಣ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ
ವಿಧಾನ ಸೌಧ, ಬೆಂಗಳೂರು-೫೬೦೦೦೧

ಇವರಲ್ಲಿ ವಿಜ್ಞಾಪನೆಗಳು

ಮಾನ್ಯರೇ,

**ವಿಷಯ : ಬಸವ ವಚನ ದೀಪ್ತಿಯ ಮೇಲೆ ಹಾಕಿರುವ ಮುಟ್ಟುಗೋಲು ಆಜ್ಞೆ ವಾಪಸ್ಸು ಪಡೆಯಲು ಆಗ್ರಹಿಸಿ ಮನವಿ.**

ವಿಶ್ವಗುರು ಬಸವಣ್ಣನವರು ಭಾರತೀಯ ಸಮಾಜದ ಎಲ್ಲ ಅವ್ಯವಸ್ಥೆಗೆ ಬಹುದೇವತೋಪಾಸನೆ, ಮೂಢನಂಬಿಕೆ, ಜಾತೀಯತೆಗಳೇ ಕಾರಣ ಎಂದು. ಇವೆಲ್ಲಕ್ಕೂ ಪರಿಹಾರವು ಏಕದೇವೋಪಾಸನೆಯಲ್ಲಿದೆ ಎಂದು ನಂಬಿ ದೇವನೊಬ್ಬ , ಮಾನವ ಕುಲವೆಲ್ಲ ಒಂದು ಎಂಬ ವಿಶ್ವಕುಟುಂಬತ್ವ ಸಾರಿದರು. ಆ ಒಬ್ಬ ದೇವನನ್ನು ಸರ್ವಕಾರಣ ಎಂಬ ಭಾವದಿಂದ 'ಲಿಂಗದೇವ' ಎಂದು ಹೆಸರಿಸಿ ಆ ಒಬ್ಬ ಸೃಷ್ಟಿಕರ್ತನನ್ನು ಪೂಜಿಸಲು ಇಷ್ಟಲಿಂಗ ಎಂಬ ಲಾಂಛನವನ್ನು ನೀಡಿದರು. ಈ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠದ ಅಧ್ಯಕ್ಷೆಯಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಬಸವಣ್ಣನವರ ವಚನಗಳಲ್ಲಿದ್ದ ಕೂಡಲ ಸಂಗಮದೇವಾ ಎಂಬ ಸ್ಥಾವರಲಿಂಗವಾಚಕ ವಚನಾಂಕಿತದ ಬದಲಿಗೆ ಬಸವಣ್ಣನವರೇ ತಮ್ಮ ವಚನಗಳಲ್ಲಿ ಬಳಸಿರುವ ಸೃಷ್ಟಿಕರ್ತ ಸೂಚಕವಾದ ಲಿಂಗದೇವ ಎಂಬ ಪರಮ ಪವಿತ್ರ ಪದವನ್ನು ವಚನಾಂಕಿತವಾಗಿ ಇಟ್ಟು ಬಸವ ವಚನ ದೀಪ್ತಿ ಎಂಬ ಬಸವಣ್ಣನವರ ವಚನಗಳ ಸಂಗ್ರಹವನ್ನು ಪ್ರಕಟಿಸಿದರು. ಆ ಗ್ರಂಥದ ಮಹತ್ವವನ್ನು ಲಕ್ಷಾಂತರ ಬಸವ ತತ್ವಾನುಯಾಯಿಗಳು ಮನಗಂಡು ಆ ಪವಿತ್ರ ಕೃತಿಯನ್ನು ದಿನ ನಿತ್ಯ ಅಧ್ಯಯನ, ಪಾರಾಯಣ, ಪಠಣ ಮಾಡುತ್ತಿದ್ದಾರೆ. **"ಲಿಂಗಾಯತ ಧರ್ಮದಲ್ಲಿ ಸೃಷ್ಟಿಕರ್ತನ ಹೆಸರು ಲಿಂಗದೇವ ಎಂಬುದೇ ಸರಿ. ಇದುವೇ ಧರ್ಮಗುರು ಬಸವಣ್ಣನವರ ಆಶಯವಾಗಿತ್ತು"** ಎಂದು ಮನವರಿಕೆ ಮಾಡಿಕೊಂಡ ನಾವೆಲ್ಲರೂ ನಮ್ಮ ಪೂಜೆ-ಪ್ರಾರ್ಥನೆ-ಗಾಯನ-ವಚನ ಪಾರಾಯಣದಲ್ಲಿ ಬಸವಣ್ಣನವರ ವಚನಗಳಲ್ಲಿ ಲಿಂಗದೇವ ಪದವನ್ನೇ ಬಳಸುತ್ತಲಿದ್ದೇವೆ.

ಹಿಂದಿನ ಕರ್ನಾಟಕ ಸರಕಾರವು ಕೆಲವು ಮಠಾಧೀಶರ ಮಾತ್ಸರ್ಯಪೂರ್ಣ ಒತ್ತಡಕ್ಕೆ ಬಲಿಯಾಗಿ ಬಸವ ವಚನ ದೀಪ್ತಿಯಂಥ ಪವಿತ್ರ ಗ್ರಂಥವನ್ನು ಮುಟ್ಟುಗೋಲು ಹಾಕಿದೆ.

ಬಸವ ವಚನ ದೀಪ್ತಿ ಎಂಬ ಶುದ್ಧೀಕರಣಗೊಂಡ ಬಸವ ವಚನ ಸಂಗ್ರಹವು ವಿಶ್ವಗುರು ಬಸವಣ್ಣನವರ ೮೦೦ನೆಯ ಲಿಂಗೈಕ್ಯ ಬಸವ ಪಂಚಮಿಯಂದು ೧೯-೮-೧೯೯೬ರಂದು ಬೆಂಗಳೂರಿನ ಕುವೆಂಪು ಕಲಾಕ್ಷೇತ್ರದಲ್ಲಿ ಬಿಡುಗಡೆ ಹೊಂದಿತು. ಕರ್ನಾಟಕ ಸರಕಾರವು ರಾಜಕೀಯ ಪ್ರಚೋದನೆಗೆ ಬಲಿಯಾಗಿ ಮೊದಲ ಬಾರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ದಿ.೨೫-೪-೧೯೯೭ರಂದು ಮುಟ್ಟುಗೋಲು ಹಾಕಿತು. ಸಂವಿಧಾನವು ಕೊಡಮಾಡಿರುವ ಹಕ್ಕಿನಂತೆ ನಾವು ಉನ್ನತ ನ್ಯಾಯಾಲಯಕ್ಕೆ ದಾವೆ ಹೂಡಿದೆವು. ದಿ. ೯-೮-೧೯೯೭ರಂದು ಸರಕಾರವು ಮುಟ್ಟುಗೋಲು ಆಜ್ಞೆಯನ್ನು ವಾಪಸ್ಸು ಪಡೆಯಿತು. ಪುನಃ ದಿ.೧೦-೭-೧೯೯೭ರಂದು ನಂ. ಹೆಚ್‌ಡಿ ೨೨೧ ಎಸ್‌ಎಸ್‌ಟಿ ೯೭ ಪ್ರಕಾರ ಮುಟ್ಟುಗೋಲು ಹಾಕಿತು. ನಾವು ಪುನಃ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆವು. ೧೫೩ (A) ಕಲಂ ಪ್ರಕಾರ ಹಾಕಿದ ಮುಟ್ಟುಗೋಲು ಆಜ್ಞೆಯನ್ನು ವಾಪಸ್ಸು ಪಡೆದು, ಪುನಃ ದಿ.೨೩-೭-೧೯೯೮ರಂದು ೨೯೫ (A)

ಕಲಂ ಪ್ರಕಾರ ಮುಟ್ಟುಗೋಲು ಹಾಕಲಾಯಿತು.

**ಅದರ ವಿರುದ್ಧ ನಾವು ದಾವೆಯನ್ನು ಉನ್ನತ ನ್ಯಾಯಾಲಯದಲ್ಲಿ ಹೂಡಿದ್ದೇವೆ. ದಾವೆಯು ನ್ಯಾಯಾಲಯದಲ್ಲಿ ಸ್ವೀಕೃತವಾಗಿದೆ.**

ಬಸವ ವಚನ ದೀಪ್ತಿ ನಮಗೆ ಅತ್ಯಗತ್ಯವಾದ ಪಾರಾಯಣ ಗ್ರಂಥವಾಗಿ ನಮ್ಮ ಪವಿತ್ರ ಧಾರ್ಮಿಕ ವಿಧಿಗೆ ಪ್ರಸ್ತುತ ಕೃತಿ ಬೇಕಾಗಿದೆ ಮತ್ತು ಲಿಂಗಾಯತ ಧರ್ಮದ ಪ್ರಾರ್ಥನೆ ಧಾರ್ಮಿಕ ವಿಧಿ ವಿಧಾನಗಳಲ್ಲಿ 'ಲಿಂಗದೇವ' ಎಂಬ ಸೃಷ್ಟಿಕರ್ತ ಸೂಚಕ ಪದವನ್ನೇ ನಾವೆಲ್ಲ ಬಳಸುತ್ತಲಿರುವುದು. ಆದ್ದರಿಂದ ವೈಯಕ್ತಿಕ ದ್ವೇಷ, ಮಾತ್ಸರ್ಯ ಪೀಡಿತರಾದ ಕೆಲವು ಮಠಾಧೀಶರ ಒತ್ತಡಕ್ಕೆ ಈಡಾಗಿ ರಾಜಕೀಯ ಪ್ರೇರಿತವಾಗಿ ಹಿಂದಿನ ಸರಕಾರವು ಹಾಕಿರುವ ಮುಟ್ಟುಗೋಲು ಆಜ್ಞೆಯನ್ನು ವಾಪಸ್ಸು ಪಡೆದು, ಪ್ರಜಾಪ್ರಭುತ್ವದಲ್ಲಿ ನಮ್ಮ ಸಂವಿಧಾನವು ಪ್ರತಿಯೊಬ್ಬ ನಾಗರಿಕನು ತನಗೆ ಸರಿ ಎನಿಸಿದಂತೆ ಪೂಜೆ-ಪ್ರಾರ್ಥನೆ-ಪಾರಾಯಣ-ಪಠಣ ಮುಂತಾದ ಧರ್ಮಾಚರಣೆ ಮಾಡಲು ನೀಡಿರುವ ಅವಕಾಶವನ್ನು ನಮಗೆ ಒದಗಿಸಿಕೊಡಬೇಕೆಂದು ಕೋರುತ್ತೇವೆ. ತಾವು ಆದಷ್ಟು ಬೇಗನೆ ನಮ್ಮ ಬೇಡಿಕೆಯನ್ನು ಈಡೇರಿಸುವಿರಾಗಿ ನಂಬಿ ಮನವಿ ಪತ್ರ ಸಲ್ಲಿಸುತ್ತಲಿದ್ದೇವೆ.

**ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ**
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ, ಧಾರವಾಡ

---

**-೧೪ ನೇ ಪುಟಕ್ಕೆ ಮುಂದುವರೆದಿದೆ**

ಎಂದು ಉದ್ಗರಿಸಿದ್ದಾರೆ. ಇಷ್ಟೇ ಅಲ್ಲದೆ ಜಾಗತಿಕ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಹೇಳುವ ಎಷ್ಟೋ ವಿಚಾರಗಳು ಬಸವಣ್ಣನವರ ಪ್ರಸಾದ ತತ್ತ್ವದಲ್ಲಿ ಅಡಗಿವೆ'' ಎಂದು ಮಾತನಾಡಿದರು.

ಖ್ಯಾತ ನ್ಯಾಯವಾದಿ ಜೈರಾಜ್ ಅವರು ಮಾತನಾಡಿ, ''ಭಾರತ ದೇಶದ ಸಮಸ್ಯೆಗೆ ಮುಖ್ಯ ಕಾರಣ ಮೂಢನಂಬಿಕೆ, ಇದಕ್ಕೆ ಕಾರಣ ಬಹುದೇವತಾ ಉಪಾಸನೆ. ಈ ಕಾರಣ ಗುರುತಿಸಿ ಬಸವಣ್ಣನವರು ಕೊಟ್ಟ ಏಕದೇವೋಪಾಸನೆ ಮತ್ತು ವ್ಯಕ್ತಿಗತಗೊಂಡ ಇಷ್ಟಲಿಂಗಪೂಜೆ. ಧಾರ್ಮಿಕ ಸ್ವಾತಂತ್ರ್ಯ-ಸಮಾನತೆ ಕಹಳೆ ಊದಿದವು'' ಎಂದರು. ಅಧ್ಯಕ್ಷತೆ ವಹಿಸಿದ್ದ ಬಸವ ಮಂಟಪದ ಅಧ್ಯಕ್ಷರಾದ ಪೂಜ್ಯಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು ಮಾತನಾಡಿ, ''ಬಸವಣ್ಣನವರ ಕಲ್ಯಾಣರಾಜ್ಯದ ಕಲ್ಪನೆಯೇ ವಿನೂತನ. ಸರಳತೆ, ಸಮೃದ್ಧಿ, ಸಂತೃಪ್ತಿ ಮುಂತಾದ ಆದರ್ಶಗಳನ್ನು ಮೈಗೂಡಿಸಿಕೊಂಡ ಕಲ್ಯಾಣರಾಜ್ಯದಲ್ಲಿ ನೀಡುವವರೇ ವಿಪುಲವಾಗಿ ಬೇಡುವವರೇ ಇಲ್ಲವಾಗಿದ್ದರು. ಇಂಥ ಪವಾಡ ಸಾಧ್ಯವಾದುದು ಹೇಗೆ ? ''ಕಾಯಕವೇ ಕೈಲಾಸ'' ಎಂಬ ದುಡಿಮೆಯ ಸೂತ್ರದಿಂದ, ದಾಸೋಹವೇ ದೇವಧಾಮ ಎಂಬ ವಿತರಣಾ ಸೂತ್ರದಿಂದ '' ಎಂದರು.

ಬೆಂಗಳೂರು ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಎನ್. ಪುಟ್ಟರುದ್ರಪ್ಪನವರು ಸ್ವಾಗತವನ್ನು ಮಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀಮತಿ ದೇವಿಕಾ ಶರಣಪ್ಪ ಸಭಾ ನಿರ್ವಹಣೆ ಮಾಡಿದರು. ಶ್ರೀ ಸಿದ್ಧರಾಮಪ್ಪ ಪಾಟೀಲ ಮತ್ತು ಪುಷ್ಪಾ ಪಾಟೀಲ್ ಬಸವ ಧ್ವಜವನ್ನು ಆರೋಹಣ ಮಾಡಿದರು.

**-ವರದಿ. ರಮೇಶ್ ವೀರಭದ್ರಪ್ಪ ತಳ್ಳಿ**

---





॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

## ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರಿಗೊಂದು ಪತ್ರ

ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರಿಗೆ ಶರಣಪ್ಪನು ಮಾಡುವ ಶರಣು ಶರಣಾರ್ಥಿಗಳು. ತಮ್ಮ ಕ್ಷೇಮ ಬಯಸುತ್ತೇನೆ. ಎರಡು ಮೂರು ವಿಷಯಗಳ ಬಗ್ಗೆ ತಮ್ಮೊಡನೆ ಚರ್ಚಿಸ ಬಯಸುತ್ತೇನೆ.

**೧. ವೀರಶೈವರು ಹಿಂದುಗಳಲ್ಲ ? :** ಇತ್ತೀಚೆಗೆ ಮಂಡ್ಯದ ಒಂದು ಕಾರ್ಯಕ್ರಮದಲ್ಲಿ ವೀರಶೈವರು ಹಿಂದುಗಳಲ್ಲ ಎಂಬ ವಾದವನ್ನು ನೋಡಿ ಮನಸ್ಸಿಗೆ ಖೇದವೇ ಆಯಿತು. ಲಿಂಗಾಯತರು ಹಿಂದುಗಳಲ್ಲ ಎಂದು ಹೇಳಿದ್ದರೆ ಬಹಳ ಸಮಂಜಸವಾಗುತ್ತಿತ್ತು. ಇದು ನನ್ನ ಅನಿಸಿಕೆ ಮಾತ್ರವಲ್ಲ ಕಟು ಸತ್ಯವೂ ಅಹುದು. ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ಈ ಪತ್ರದ ಜೊತೆ ಲಗತ್ತಿಸಿರುತ್ತೇನೆ. ಭೌಗೋಲಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಲಿಂಗಾಯತರು ಹಿಂದುಗಳು. ಆದರೆ ಧಾರ್ಮಿಕವಾಗಿ ಲಿಂಗಾಯತರು ಹಿಂದುಗಳಲ್ಲ. ಇದು ಸತ್ಯಸಂಗತಿ. ಇದನ್ನು ಒಪ್ಪುವುದು ಬಿಡುವುದು ತಮಗೆ ಬಿಟ್ಟಿದ್ದು. ಲಿಂಗವನ್ನು ಆಯತ ಮಾಡಿಕೊಂಡವನು ''ಲಿಂಗಾಯತ'' ಎಷ್ಟು ಸರಳ, ಸುಲಭ ಮತ್ತು ಸ್ಪಷ್ಟ! ಆದರೆ ಈ ವೀರಶೈವ ಪದವು ಎಲ್ಲಿಂದ ಬಂತೋ ನನಗಂತೂ ಅರ್ಥವಾಗುತ್ತಿಲ್ಲ. ಬಹಳ ವೇಗವಾಗಿ ಈಗ ೮-೧೦ ವರ್ಷಗಳಿಂದ ವೇದಿಕೆಗಳಲ್ಲಿ ಈ ಪದ ಬಳಸುವ ಕುತಂತ್ರ ಹೆಚ್ಚಾಗಿದೆ ಅಷ್ಟೆ. ಸಾಮಾನ್ಯರಿಗಂತೂ ಈ ಪದ ಗೊತ್ತೂ ಇರಲಿಲ್ಲ. ಈ ಪದ ಪಂಚಪೀಠದ ಮಠಾಧಿಕಾರಿಗಳಲ್ಲಿ ಮಾತ್ರ ಹೊರಹೊಮ್ಮುತ್ತಿತ್ತು. ವಿರಕ್ತ ಮಠದವರಿಗೆ ಈ ಆಗಂತುಕ ಪದದ ಮೋಹ ಹೇಗೆ ಬಂತೋ ನಾನರಿಯೆ ? ಇರಲಿ ಈಗಾಗಲೇ ಸತ್ಯವನ್ನು ಜನತೆ ಅರಿತಿದ್ದಾರೆ. ಸಾಹಿತಿ ಶ್ರೀ ರಂಜಾನ್ ದರ್ಗಾ ಅವರ ಅಭಿಪ್ರಾಯವನ್ನು ಪತ್ರಿಕಗಳಲ್ಲಿ ಓದಿರಬಹುದು. ವೀರಶೈವ ವಾದಿಗಳು ವೀರಶೈವರೇ ಆಗಿರಲಿ ! ಬಸವಣ್ಣನವರನ್ನು ಧರ್ಮಗುರು ಎಂದು ನಂಬಿ ''ಲಿಂಗಾಯತ ಧರ್ಮ''ವನ್ನು ನಮ್ಮ ಧರ್ಮವೆಂದು ನಂಬಿ ನಡೆಯುವವರು ಹಾಗೆಯೇ ಸಾಗೋಣ. ಕಾಲಗರ್ಭದಲ್ಲಿ ಸತ್ಯ ಹೊರ ಹೊಮ್ಮುತ್ತದೆ. ವೀರಶೈವ ಪದ ಬಳಸುವುದು ಬಸವಣ್ಣನವರಿಗೆ ದ್ರೋಹ ಮಾಡುವ ಸಂಚು ಎಂದು ನನ್ನ ದೃಢ ನಿಲುವು.

**೨. ವಚನಾಂಕಿತ ಬದಲಾವಣೆ :** ಇತ್ತೀಚೆಗೆ ನನಗೊಬ್ಬರು ಕನ್ನಡ ಪ್ರಭ ದಿ.೧೧-೪-೨೦೦೦ ತಮ್ಮ ಹೇಳಿಕೆ ''ವಚನಾಂಕಿತ ಬದಲಾವಣೆ ಅಸಹನೀಯ'' ಎಂದು ವರದಿಯಾಗಿರುವುದನ್ನು ತಂದುಕೊಟ್ಟರು. ಓದಿದೆನು. ಇದರ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಸೃಷ್ಟಿಕರ್ತ ಪರಮಾತ್ಮನ ಅರ್ಥಾತ್ ''ಲಿಂಗದೇವನ'' ಸ್ವರೂಪ ಹೇಗಿದೆ ಎಂಬುದನ್ನು ಬಸವಣ್ಣನವರ ಈ ವಚನದಲ್ಲಿ ಕಾಣಬಹುದು.

### ಲಿಂಗದೇವನ ಸ್ವರೂಪ

ಅಮೂಲ್ಯನು ಅಪ್ರಮಾಣನು ಅಗೋಚರಲಿಂಗ ;
ಆದಿ ಮಧ್ಯಾವಸಾನಗಳಿಲ್ಲದ ಲಿಂಗ :
ನಿತ್ಯ ನಿರ್ಮಳ ಲಿಂಗ ;
ಅಯೋನಿ ಸಂಭವನಯ್ಯಾ ನಮ್ಮ ಲಿಂಗದೇವರು !

**''ಲಿಂಗದೇವ''** ಎಂಬುದು ಯಾವುದೇ ಭೌಗೋಳಿಕ ಸ್ಥಾನದಲ್ಲಿ ಇರುವ ಭೌತಿಕ ವಸ್ತುವನ್ನು ಪ್ರತಿನಿಧಿಸದೆ ನಿರಾಕಾರನು ನಿರ್ಗುಣನು ಆದ ದೇವನನ್ನು ಪ್ರತಿನಿಧಿಸುತ್ತದೆ. ಈ ಪದವು ಶ್ರೀ ಗುರು ಬಸವಣ್ಣನವರಿಗೆ ಬಹುಪ್ರಿಯ ಎಂಬುವುದು ಅವರ ಅನೇಕ ವಚನಗಳಲ್ಲಿ ಅಭಿವ್ಯಕ್ತವಾಗುತ್ತದೆ.

೧. ಲಿಂಗದೇವನಿಲ್ಲದ ಠಾವು ನರವಿಂಧ್ಯ ಹೋಗಲಾಗದು
೨. ಲಿಂಗದೇವನ ಪೂಜಿಸಿ ಕುಲವನರಸುವರೇ?
೩. ಲಿಂಗದೇವನ ಮುಟ್ಟಿ ಮಜ್ಜನಕ್ಕೆರೆವ ಕೈಯಲು....
೪. ನುಡಿಯಲು ಬಾರದು, ನಡೆಯಲು ಬಾರದು, ಲಿಂಗದೇವನೇ ದಿಬ್ಬವೋ ಅಯ್ಯಾ
೫. ಲಿಂಗದೇವನ ಧ್ಯಾನವೆಂದಡೆ ಕರಗಿ ಕೊರಗದೆನ್ನ ಮನ.

''ಲಿಂಗ'' ಎಂಬ ಪದವು ಶ್ರೀ ಗುರು ಬಸವಣ್ಣನವರಿಗೆ ಬಹಳ ಇಷ್ಟವಾದುದು ಎಂದು ಅವರು ಬಳಸಿರುವ ಪದಗಳಲ್ಲಿ ಗೋಚರವಾಗುತ್ತದೆ.

ಉದಾ : ಲಿಂಗಭಕ್ತ, ಲಿಂಗ ಆಯತ, ಲಿಂಗ ಪಥ
ಲಿಂಗ ಗಣ, ಲಿಂಗವಂತ, ಲಿಂಗ ತಂದೆ
ಲಿಂಗ ಸಾಹಿತ್ಯ , ಲಿಂಗಸ್ಥಲ ಇತ್ಯಾದಿ

ನಾನು ಮಾಡುವ ಪೂಜೆ, ಪ್ರಾರ್ಥನೆಗಳಲ್ಲಿ 'ಕೂಡಲಸಂಗಮದೇವ' ಪದದ ಬದಲು ''ಲಿಂಗದೇವ'' ಪದ ಬಳಸಲು ಪ್ರಾರಂಭಮಾಡಿ ವರ್ಷಗಳೇ ಕಳೆದುವು. ನನಗೆ 'ಕೂಡಲಸಂಗಮದೇವ' ಪದ ಮರೆತೇ ಹೋಗಿದೆ. ಲಕ್ಷಾಂತರ ಬಸವ ಭಕ್ತರು ಈ ಪದ ಬಳಕೆ ಮಾಡುತ್ತಿದ್ದಾರೆ. ಇದರಲ್ಲಿ ಯಾವ ಅತಿಶಯೋಕ್ತಿ ಇಲ್ಲ. ''ಲಿಂಗ'' ಪದ ಬಳಸಿ ಮಾಡುವ ಪೂಜೆ ಪ್ರಾರ್ಥನೆಯಲ್ಲಿ ಹೊರ ಹೊಮ್ಮುವ ಭಕ್ತಿ, ಶ್ರದ್ಧೆ ''ಕೂಡಲ ಸಂಗಮ'' ಪದದಲ್ಲಿ ಹೊರ ಹೊಮ್ಮಲಾರದು ಎಂದು ನಮಗೆಲ್ಲ ಮನವರಿಕೆಯಾಗಿದೆ. (ಕೂಡಲ ಸಂಗಮ ದೇವ ಪದ ಏಕದೇವೋಪಾಸನೆಗೆ ಚ್ಯುತಿ ತರುತ್ತದೆ.) ಬಹಳ ಜನರಿಗೆ ಈ ಬದಲಾವಣೆಯ ಹಿನ್ನೆಲೆ ಅರ್ಥವಾಗಿದೆ. ಆದರೆ ಸಿರಿಗೆರೆ ಮತ್ತು ಚಿತ್ರದುರ್ಗದ ಮಠಾಧಿಪತಿಗಳಿಗೆ ಇನ್ನೂ ಅರ್ಥವಾಗಿಲ್ಲ. ಅರ್ಥವಾದರೂ ಒಪ್ಪುವ ಸೌಜನ್ಯತೆ ಇಲ್ಲ ''ಕೂಡಲಸಂಗಮ''ದ ಬದಲು ''ಲಿಂಗ'' ಮಾತ್ರ ಬದಲಾವಣೆ. ನೀವೇ ಅರ್ಥೈಸಿರಿ ''ಕೂಡಲ ಸಂಗಮ'' ಎಂದರೇನು ? ''ಲಿಂಗ'' ಎಂದರೇನು ? ಹೆಚ್ಚಿಗೆ ಹೇಳಲು ಬಯಸಲಾರೆ. ತತ್ತ್ವಭೇದವನ್ನರಿಯಿರಿ ಎಂದು ಹೇಳುತ್ತಾ, ಸರ್ವಜ್ಞನ ಒಂದು ವಚನದಿಂದ ಉದಾಹರಿಸುತ್ತೇನೆ.

ಅತ್ತಿಯ ಮರವು ಕಾಯ ಹೊತ್ತಿರ್ದ ತೆರನಂತೆ
ತತ್ತ್ವಭೇದವನ್ನು ಅರಿಯದೆಯೇ ರುದ್ರಾಕ್ಷಿ
ಹೊತ್ತು ಫಲವೇನು ಸರ್ವಜ್ಞ ?

ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರಿಗೆ ಒಂದು ಕಿವಿಮಾತು. ಕವಿ ರವೀಂದ್ರನಾಥ ಟಾಗೋರ್‌ರವರು ಹೀಗೆ ಹೇಳಿದ್ದಾರೆ: ಮಹಾತ್ಮರು/ ಜ್ಞಾನಿಗಳು ಸತ್ಯವನ್ನು ನಿರ್ಮಿಸುತ್ತಾರೆ ಮತ್ತು ಸತ್ಯ ಪ್ರತಿಷ್ಠಾಪನೆಗೆ ಶ್ರಮಿಸುತ್ತಾರೆ. ಸತ್ಯ ಪ್ರತಿಷ್ಠಾಪನೆಗೆ ತಮ್ಮ ಪ್ರಾಣವನ್ನು ಬಲಿ ಕೊಡಲು ಸಿದ್ಧರಿರುತ್ತಾರೆ. ಬುದ್ಧಿವಂತರು, ಜಾಣರು ಎಂದು ಬೀಗುವವರು ಸತ್ಯವನ್ನು ಹೇಳಿದ ಜ್ಞಾನಿಗಳ ಬಗ್ಗೆ ಚರ್ಚಿಸುವುದರಲ್ಲಿ, ಅವರಿಗೆ ಕೀಟಲೆ ಮಾಡುವುದರಲ್ಲಿ ಕಾಲಕಳೆದು ತಮ್ಮ ಜೀವನವನ್ನು ಅನ್ಯಥಾ ಹಾಳುಮಾಡಿಕೊಳ್ಳುತ್ತಾರೆ. ಸತ್ಯವನ್ನು ಸೃಷ್ಟಿಸಿದ ಮಹಾತ್ಮರ ಹೆಸರು ಮುಂದಿನ ಪೀಳಿಗೆಯಲ್ಲಿ ಅಮರವಾಗುತ್ತದೆ. ಕೀಟಲೆ ಮಾಡಿದವರು ಹೇಳ ಹೆಸರಿಲ್ಲದೇ ಕಾಲಗರ್ಭದಲ್ಲಿ ಮುಳುಗಿ ಹೋಗುತ್ತಾರೆ. ಜಗತ್ತಿನ ಯಾವ ಮಹಾತ್ಮರ ಜೀವನವೂ ಇದೇ ತೆರನಾಗಿದೆ. ೧೨ನೇ ಶತಮಾನದ ಶರಣರಿಗೂ ಇದೇ ಆದದ್ದು. ನಾನು ಚಿಕ್ಕವನಾಗಿ ಸ್ಕೂಲಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಓದಿದ ಒಂದು ಸುಭಾಷಿತ ಜ್ಞಾಪಕಕ್ಕೆ ಬರುತ್ತದೆ. ಇದನ್ನು ಇಲ್ಲಿ ಉಲ್ಲೇಖಿಸುವುದು ಪ್ರಸ್ತುತ.

ಕಷ್ಟದಿಂದಾಗುವ ಕ್ಷೋಭೆಯನ್ನು ಉತ್ತಮನು



ಸಹಿಸಿಕೊಳ್ಳಬಲ್ಲನು ; ಅಲ್ಪನು ಸಹಿಸಲಾರ
ಸಾಣೇ ಕಲ್ಲಿನ ಘರ್ಷಣೆಯನ್ನು ರತ್ನವು ಸಹಿಸಿಕೊಳ್ಳಬಲ್ಲುದೇ ಹೊರತು
ಮಣ್ಣಿನ ಕಣ ಸಹಿಸಿಕೊಳ್ಳಲಾರದು.

ಪೂಜ್ಯ ಶ್ರೀ ಮಾತೆ ಮಹಾದೇವಿಯವರು ಸಾಮಾನ್ಯರಲ್ಲ. ನಾನು ಅವರನ್ನು ಸುಮಾರು ೩೦-೩೫ ವರ್ಷಗಳಿಂದ ಬಹಳ ಹತ್ತಿರದಿಂದ ಬಲ್ಲೆನು. ಅವರನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಅವರ ಪ್ರತಿಭೆ ಅರ್ಥವಾಗುತ್ತದೆ. ಅವರಿಗೆ ದೈವೀಕೃಪೆ ಇದೆ. ಶ್ರೀ ಗುರುಬಸವಣ್ಣನವರ ಕರುಣೆ ಇದೆ. ಅವರ ಆಶೀರ್ವಾದವಿದೆ. ಎಲ್ಲಾ ಗುರುಪೀಠಗಳು ಮತ್ತು ವಿರಕ್ತಪೀಠಗಳು ಒಂದಾಗಿ ಕೀಟಲೆ ಮಾಡುತ್ತಲೇ ಬಂದಿದ್ದಾರೆ. ಸತ್ಯದ ಅರಿವಾದಾಗ ತೆಪ್ಪಗಾಗಿದ್ದಾರೆ. ಯಾರೇ ಕೀಟಲೆ ಮಾಡಲಿ, ಕಷ್ಟ ಕೊಡಲಿ ಮೇಲೆ ಹೇಳಿದಂತೆ ಅವುಗಳನ್ನು ಸೈರಿಸಿಕೊಂಡು ಮುನ್ನಡೆಯುವ ಸಾಮರ್ಥ್ಯ ಅವರಿಗಿದೆ. ಈ ಕೆಳಗಿನ ಶರಣರ ವಚನವನ್ನು ಅವಲೋಕಿಸಿರಿ. ಈ ವಚನದಲ್ಲಿ ಲಿಂಗದೇವ ಪದ ಬಳಕೆ ಮತ್ತು ಮಹಾಪುರುಷರ ಬಗ್ಗೆ ಹೇಳಿರುವ ಮಾತು ಅರ್ಥಗರ್ಭಿತ.

''ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು, ನೋಡಯ್ಯಾ
ಉರಿಲಿಂಗದೇವ ನಿಮ್ಮ ಶರಣರು''

**೩. ಮೂರ್ತಿಪೂಜೆಗೆ ಬಸವಣ್ಣ ಎಂದೂ ಅವಕಾಶ ನೀಡಲಿಲ್ಲ :** ಇದು ಶ್ರೀ ಪಂಡಿತಾರಾಧ್ಯ ಸ್ವಾಮಿಗಳವರ ಆಪಾದನೆ. ಶ್ರೀ ಗುರುಬಸವಣ್ಣನವರ ಸಮಕಾಲೀನ ಶರಣರು ಬಸವಣ್ಣನವರನ್ನು ಧರ್ಮ ಗುರುವೆಂದೂ. ಲಿಂಗಾಯತ ಧರ್ಮದ ಆದ್ಯರೆಂದೂ ಸಾರಿ ಹೇಳಿದ್ದರೂ ಸಿರಿಗೆರೆಯ ಮಠದವರು ಅದನ್ನು ಎಲ್ಲೆಲ್ಲಿಯೂ ಬರೆಯುವುದಿಲ್ಲ. ಓಂ ಶ್ರೀ ಗುರು ಬಸವ ಲಿಂಗಾಯನಮಃ ಮಂತ್ರವೇಕಾಯಿತು ? ಪಾಪ ; ಇವರು ಈ ಮಂತ್ರ ಜಪಿಸುವುದನ್ನೇ ನಾನು ಕಾಣಲಿಲ್ಲ.

೧. ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲ ಸಿದ್ಧಮಲ್ಲಿಕಾರ್ಜುನ. -ಶ್ರೀ ಸಿದ್ಧರಾಮೇಶ್ವರರು

೨. ನೆನೆವೆನಯ್ಯಾ ಬಸವಣ್ಣ
ನಿಮ್ಮ ಚರಣವೆನ್ನ ಮನದಲ್ಲಿ ಸಾಹಿತ್ಯವನ್ನಕ್ಕ
ನೋಡುವೆನಯ್ಯಾ ಬಸವಣ್ಣ
ನಿಮ್ಮ ಮೂರ್ತಿ ಎನ್ನನಂಗವಿಸುವನ್ನಕ್ಕ
ಪೂಜಿಸುವೆನಯ್ಯಾ ಬಸವಣ್ಣ
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ
ನಿಮ್ಮ ಧ್ಯಾನಿಸುವೆನಯ್ಯಾ ಬಸವಣ್ಣ
ಜ್ಞಾನಾ ಜ್ಞಾನವಿಲ್ಲವೆನಿಸುವನ್ನಕ್ಕ
ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣ
ಅಹಂ ಸೋಹಂ ಎಂಬ ಶಬ್ದವುಳ್ಳನ್ನಕ್ಕ
ಬಸವಣ್ಣಾ ಬಸವಣ್ಣಾ ಬಸವಣ್ಣಾ ಎನುತಿರ್ದೆನಯ್ಯಾ
ಕಲಿದೇವರ ದೇವನೆಂಬ ಶಬ್ದವುಳ್ಳನ್ನಕ್ಕ -ಮಡಿವಾಳ ಮಾಚಿದೇವ

ಬಸವ ಧರ್ಮ ಪೀಠದಿಂದ **'ಬಸವ ದರ್ಶನ'** ಎಂಬ ಒಂದು ಪುಸ್ತಕ ಬಿಡುಗಡೆಯಾಗಿದೆ.

ತಾವು ಅದನ್ನು ಓದಿರಿ. ಶರಣರು ಶ್ರೀ ಗುರುಬಸವಣ್ಣನವರ ಬಗ್ಗೆ ಏನೇನು ಹೇಳಿದ್ದಾರೆ ಎಂಬುದು ಅರ್ಥವಾಗುತ್ತದೆ. ಮಠಾಧಿಪತಿಗಳಿಗೆ ವಚನ ಸಾಹಿತ್ಯದ ಬಗ್ಗೆ ಆಳವಾದ ಅಧ್ಯಯನವಿಲ್ಲ. ತಾವೂ ಮಾಡುವುದಿಲ್ಲ ಬೇರೆಯವರು ಮಾಡುವ ತತ್ತ್ವ ಪ್ರಚಾರದ ಬಗ್ಗೆ ಸೈರಣೆ ಇಲ್ಲ. ಬರೀ ಅಸೂಯೆ ತುಂಬಿ ತುಳುಕುತ್ತದೆ. ಸಾಧು ಲಿಂಗಾಯತರ ಯಾರ ಮನೆಗೇ ಹೋಗಿ ನೋಡಿದರೂ, ಲಿಂ|| ಶ್ರೀ ಶಿವಕುಮಾರ ಸ್ವಾಮಿಗಳ, ಶ್ರೀ ಶಿವಮೂರ್ತಿ ಸ್ವಾಮಿಗಳ ಮತ್ತು ಶ್ರೀ ಪಂಡಿತಾರಾಧ್ಯರ ಭಾವಚಿತ್ರಗಳ ಪ್ರದರ್ಶನ ಮತ್ತು ಭಾವಚಿತ್ರಗಳ ಪೂಜೆ ಸಾಂಗೋಪಾಂಗವಾಗಿ ನಡೆಯುತ್ತದೆ. ಶ್ರೀ ಗುರು ಬಸವಣ್ಣನವರ ಭಾವಚಿತ್ರಕ್ಕೆ ಗಡಿ ಪಾರು ಮಾಡಲಾಗಿದೆ. ಸಾಧುಲಿಂಗಾಯತರ ಯಾವುದೇ ಆಮಂತ್ರಣ ಪತ್ರಿಕೆ ನೋಡಿದರೂ (ಗೃಹಪ್ರವೇಶವಿರಲಿ, ಮದುವೆ ಕಾರ್ಯವಿರಲಿ, ಲಿಂಗೈಕ್ಯರ ದಿನಾಚರಣೆ ಇರಲಿ) ಲಿಂ: ಶ್ರೀ ಶಿವಕುಮಾರಸ್ವಾಮಿಗಳ, ಶ್ರೀ ಶಿವಮೂರ್ತಿ ಸ್ವಾಮಿಗಳ ಭಾವಚಿತ್ರಗಳು ಮುದ್ರಣಗೊಂಡಿರುತ್ತವೆ. ಒಂದು ತರಹ ಶ್ರೀ ಗುರು ಬಸವಣ್ಣನವರನ್ನು ಮರೆಸುವ ಸಂಚು ನಡೆಯುತ್ತಿದೆ ಎಂದು ಎಂತಹವರಿಗೂ ಭಾಸವಾಗುತ್ತದೆ. ಈಗ್ಗೆ ಸುಮಾರು ಒಂದು ವರ್ಷದ ಹಿಂದೆ ನಮ್ಮ ನೆಂಟರೊಬ್ಬರ ಮದುವೆ ಜಗಳೂರು ತಾಲ್ಲೋಕಿನ ತೂಲಳ್ಳಿಯಲ್ಲಿ ನಡೆಯಿತು. ನಾನು ಹೋಗಿದ್ದೆ ಗುರು ಕಳಸದ ಮುಂದೆ ಮದುವೆಯ ಸಮಾರಂಭ (ತಾಳೀ ಕಟ್ಟುವ ಸಮಾರಂಭ) ನಡೆದಿತ್ತು. ಶ್ರೀ ಡಾ|| ಶಿವಮೂರ್ತಿ ಸ್ವಾಮಿಗಳ ಭಾವಚಿತ್ರದ ಪೂಜೆಯ ನಂತರ ಮದುವೆ ಸಮಾರಂಭ. ಮದುವೆಯ ನಂತರ ಶರಣ ಸಮಾಗಮ ಸಭೆ ನಡೆದಿತ್ತು. ಪೂಜ್ಯ ಶ್ರೀ ಡಾ|| ಶಿವಮೂರ್ತಿ ಸ್ವಾಮಿಗಳ ಆಶೀರ್ವಚನ ನಡೆದಿತ್ತು. ಅದೇ ದುರುಗಪ್ಪನ ಹೆಂಡ ಕುಡಿಯುವ ಕತೆ ಬಿಟ್ಟರೆ ಬೇರೇನೂ ಇಲ್ಲ.

ಇದನ್ನೆಲ್ಲಾ ನಾನು ಬಹಳ ಸೂಕ್ಷ್ಮವಾಗಿ ವೀಕ್ಷಿಸಿದೆನು. ಸಭಾಮಂಟಪದ ದೂರದಲ್ಲಿ ಕೆಲವು ಫೋಟೋಗಳ ಮಾರಾಟವಾಗುತ್ತಿತ್ತು. ಅಲ್ಲಿಗೆ ಹೋಗಿ ನೋಡಲಾಗಿ ಬರೀ ಲಿಂ|| ಶಿವಕುಮಾರಸ್ವಾಮಿಗಳ, ಪೂಜ್ಯ ಶ್ರೀ ಶಿವಮೂರ್ತಿಸ್ವಾಮಿಗಳ ಮತ್ತು ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮಿಗಳ ಫೋಟೋಗಳು ಮಾತ್ರ ಮಾರಾಟಕ್ಕಿದ್ದವು. ಮಾರುವವನನ್ನು ಬಸವಣ್ಣನವರ ಫೋಟೋ ಇದೆ ಏನಪ್ಪಾ ಎಂದು ಕೇಳಿದೆ ! ಆತ ಇಲ್ಲ ಎಂದನು. ಏಕಿಲ್ಲ ಎಂದು ಕೇಳಿದೆನು. ಯಾರೂ ತೆಗೆದುಕೊಳ್ಳುವುದಿಲ್ಲ ಸಾರ್ ಅದಕ್ಕೋಸ್ಕರ ಎಂದುತ್ತರ. ಇದು ಸಿರಿಗೆರೆ ಮಠದವರು ಅವರ ಭಕ್ತರಿಗೆ ಕಲಿಸಿಕೊಟ್ಟ ಸಂಸ್ಕಾರ.

**ನಾಯಿಯ ಬಾಲ ಡೊಂಕು :** ಈ ಮೇಲಿನ ಪ್ಯಾರಾಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ನಾನು ಡಾ|| ಶ್ರೀ ಶಿವಮೂರ್ತಿಸ್ವಾಮಿಗಳು ಮತ್ತು ತಮಗೂ ಸಾಕಷ್ಟು ಪತ್ರ ಬರೆದದ್ದು ನನಗೆ ಜ್ಞಾಪಕವಿದೆ. ಇದರ ಪರಿಣಾಮವೋ ಏನೋ ೧೯೮೭ ಮತ್ತು ೧೯೮೮ನೇ ಇಸವಿಯಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದ ಆಮಂತ್ರಣ ಪತ್ರಿಕೆಯ ಒಳ ಪೇಜಿನಲ್ಲಿ ಒಂದಡೆ ಬೇಕೋ ಬೇಡವೋ ಎನ್ನುವ ರೀತಿ ಶ್ರೀ ಗುರು ಬಸವಣ್ಣನವರ ಭಾವಚಿತ್ರ ಮುದ್ರಿತವಾಗಿತ್ತು. ಅದನ್ನು ನೋಡಿ ಸ್ವಲ್ಪ ಸಮಾಧಾನಪಟ್ಟುಕೊಂಡೆವು. ಆದರೆ ನಾಯಿಯ ಬಾಲ ಡೊಂಕು ಎನ್ನುವಂತೆ ೨೦೦೦ನೇ ಇಸವಿಯಲ್ಲಿ ಶಿವಮೊಗ್ಗದಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದ ಆಮಂತ್ರಣ ಪತ್ರಿಕೆಯನ್ನು ವೀಕ್ಷಿಸಲಾಗಿ ಶ್ರೀ ಗುರು ಬಸವಣ್ಣನವರ ಭಾವ ಚಿತ್ರಕ್ಕೆ ಒಳ ಪುಟದಲ್ಲೂ ಗಡಿಪಾರು ಶಿಕ್ಷೆ ಕಾದಿತ್ತು ! ಇದು ತರಳಬಾಳು ಮಠದ ಸಂಸ್ಕೃತಿ ! ಶಿವಮೊಗ್ಗದಲ್ಲಿ ನಡೆದ ತರಳಬಾಳು ಸಭಾಮಂಟಪದ ಎಲ್ಲಿಯೂ ಬಸವಣ್ಣನವರ ಭಾವಿಚಿತ್ರಕ್ಕೆ ಸ್ಥಾನವಿಲ್ಲ. ಶ್ರೀ ಗುರು ಬಸವಣ್ಣನವರು ಶಿವಮೊಗ್ಗದಲ್ಲಿಯೂ ಗಡೀಪಾರು ಆಗಿದ್ದರು. ಇಡೀ ಶಿವಮೊಗ್ಗ ಪಟ್ಟಣದ ಎಲ್ಲೆಡೆ ನೋಡಿದರೂ (cut-outs) ಲಿಂ|| ಶ್ರೀ ಶಿವಕುಮಾರ ಸ್ವಾಮಿಗಳು



ಮತ್ತು ಡಾ|| ಶಿವಮೂರ್ತಿ ಸ್ವಾಮಿಗಳು ರಾರಾಜಿಸುತ್ತಿದ್ದರು. ಇದು ನಾ ಕಂಡ ಸಿರಿಗೆರೆ ಬೃಹನ್ಮಠದ
"ಶರಣ ವೈಭವ" ಮತ್ತು ಆ ಸಭಾಮಂಟಪದಲ್ಲಿ ನಡೆದದ್ದೇನು ?

ಅದೊಂದು ರಾಜಕೀಯ ಸಮ್ಮೇಳನವೇ ವಿನಾ ಧಾರ್ಮಿಕ ಸಮ್ಮೇಳನದ ಕಲ್ಪನೆಯೂ ಬರಲು
ಸಾಧ್ಯವಿಲ್ಲವೆಂದು ಕೆಲವರ ಉದ್ಗಾರ. ರಾಜಕೀಯ ಧುರೀಣರಿಗೆ ಸಾಧು ಲಿಂಗಾಯತರ ಬೆಂಬಲ ಸಿರಿಗೆರೆ
ಮಠಕ್ಕೆ ಹೇಗಿದೆ ಎಂದು ತೋರಿಸಲು ಮಾಡಿದ ರಾಜಕೀಯೇ ಸಮ್ಮೇಳನ ಎಂದು ಇನ್ನು ಕೆಲವರ
ಉದ್ಗಾರ. ಬರೆಯುತ್ತಾ ಹೋದರೆ ಕಾದಂಬರಿಯೇ ಆದೀತು !

**೪. ಮಾತಾಜಿಯವರು ಶ್ರೀ ಗುರುಬಸವಣ್ಣನವರನ್ನು ಮೂರ್ತೀಕರಿಸಿ ಪೂಜಿಸ ಹೊರಟಿದ್ದಾರೆ**

ಎನ್ನುವ ಅಪವಾದ : ಸಾಧು ಲಿಂಗಾಯತರ ಯಾರ ಮನೆಯ ಪೂಜಾಕೋಣೆಯನ್ನು ನೋಡಿದರೂ
ಅರ್ಥವಾಗುತ್ತದೆ. ಸಿರಿಗೆರೆ ಮಠದ ಶಿಷ್ಯರ ಪೂಜಾಕೋಣೆಗಳಲ್ಲಿ ಶ್ರೀ ಮಠದ ಸ್ವಾಮಿಗಳ ಮೂರ್ತಿ
ಪೂಜೆ ಸಾಂಗೋಪಾಂಗವಾಗಿ ನಡೆಯುತ್ತಿದೆ. ಅಂದರೆ ಮಠದ ಸ್ವಾಮಿಗಳನ್ನು ಪೂಜಿಸಲಿ. ಆದರೆ ಶ್ರೀ
ಗುರುಬಸವಣ್ಣನವರ ಪೂಜೆ ಸಲ್ಲದು, ಧರ್ಮ ಕೊಟ್ಟ ಧರ್ಮಗುರುವಿಗೆ ದ್ರೋಹ ! ಶಭಾಶ್.

ಶ್ರೀ ಮಠದ ಸ್ವಾಮಿಗಳು ಗುಡಿಗಳ ಶಂಕುಸ್ಥಾಪನೆ, ಗುಡಿಗಳ ಕಳಸೋದ್ಘಾಟನೆ, ನವಗ್ರಹ
ಗುಡಿಗಳ ಪ್ರಾರಂಭೋತ್ಸವ, ಆಂಜನೆಯ ಗುಡಿಯ ಪ್ರಾರಂಭೋತ್ಸವ, ಗಣಪತಿ ಗುಡಿಗಳ ಉದ್ಘಾಟನೆ
ಇತ್ಯಾದಿ ಸಮಾರಂಭಗಳಿಗೆ ಹೋಗುವುದು ಬಸವಾದಿ ಶರಣರು ಕೊಟ್ಟ ತತ್ತ್ವವೇ ? ಸಾಧು
ಲಿಂಗಾಯತರಲ್ಲಿ ಒಬ್ಬರನ್ನಾದರೂ ದೇವಸ್ಥಾನಗಳಿಗೆ ಹೋಗುವುದನ್ನು ಮತ್ತು ಹೋಗಿ ಸ್ಥಾವರ
ದೇವತೆಗಳ ಪೂಜಿಸುವುದನ್ನು ನಿಲ್ಲಿಸಿದ್ದೀರಾ ಸ್ವಾಮಿಗಳೇ ? ಒಂದೇ ಒಂದು
ಉದಾಹರಣೆಗಾಗಿಯಾದರೂ ಹೇಳಿರಿ. ಉಳವಿಯಲ್ಲಿ ಎತ್ತಿನ ಪೂಜೆ, ಆನಗೋಡಿನ ಗುಡಿಯಲ್ಲಿ ಶ್ರೀ
ಸಿದ್ಧಪ್ಪನವರ ಪೂಜೆ, ಕಲ್ಲೇದೇವರ ಪುರದಲ್ಲಿ ಶ್ರೀ ಕಲ್ಲೇಶ್ವರರ ಪೂಜೆ ಎಂದಾದರೂ ಖಂಡಿಸಿದ್ದೀರಾ !
ಇದರ ಬಗ್ಗೆ ಹೋರಾಟ ಮಾಡಿದ್ದೀರಾ ತಿಳಿಯಬಹುದೇ ಸ್ವಾಮಿಗಳೇ ?

ಪೂಜ್ಯ ಮಾತೆಯವರು ಏಕ ಗುರೂಪಾಸನೆ (ಶ್ರೀ ಗುರು ಬಸವಣ್ಣನವರ ಪೂಜೆ) ಮತ್ತು
ಏಕದೇವೋಪಾಸನೆ ಬಗ್ಗೆ ಬಸವ ಭಕ್ತರಲ್ಲಿ ಆತ್ಮ ವಿಶ್ವಾಸ ಮೂಡಿಸಿದ್ದಾರೆ. ಎದೆ ಸೀಳಿದರೂ
ಮೂರಕ್ಷರವಿಲ್ಲದ ಕಾವಿಧಾರಿಗಳು ಪಾದ ಪೂಜೆ ಮಾಡಿಸಿಕೊಳ್ಳುವುದು, ಆಯಾಯ ಮಠದ
ಸ್ವಾಮಿಗಳನ್ನು ಮೂರ್ತಿಕರಿಸಿ ಪೂಜಿಸುವುದು, ಇದು ಮಠಗಳ ಸಂಸ್ಕೃತಿ ! ಲಿಂಗಾಯತ ಧರ್ಮವನ್ನು
ಕೊಟ್ಟ ವಿಶ್ವ ವಿಭೂತಿಪುರುಷ, ಮಂತ್ರ ಪುರುಷ ಬಸವಣ್ಣನವರ ಪೂಜೆಗೆ ತಿಲಾಂಜಲಿ ಹೇಳುವುದು, ಇದು
ಶ್ರೀ ಗುರು ಬಸವಣ್ಣನವರನ್ನುಮರೆಸುವ ತಂತ್ರವಲ್ಲದೇ ಬೇರೇನೂ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.
ಯಾವುದೇ ಸಭೆ ಸಮಾರಂಭಗಳಲ್ಲಿ ಶ್ರೀ ಗುರು ಬಸವಣ್ಣನ ನೆನೆಯದೆ, ಪೂಜಿಸದೆ ಕಾರ್ಯಕ್ರಮ
ಮಾಡುವುದು ಲಿಂಗಾಯತ ಧರ್ಮೀಯರಿಗೆ ಸಲ್ಲದು. ಇದನ್ನು ಲಿಂಗಾಯತ ಸಮಾಜದವರೆಲ್ಲರೂ
(ಸಮಾಜದವರು ಜನಸಾಮಾನ್ಯರೇ ಇರಲಿ, ಮಠಾಧಿಪತಿಯೇ ಇರಲಿ) ಮೈಗೂಡಿಸಿಕೊಳ್ಳಬೇಕು.
ಇಲ್ಲದೆ ಹೋದಲ್ಲಿ ಈ ಧರ್ಮ ಬೆಳೆಯದು, ಲಿಂಗಾಯತರು ಸಂಘಟನೆಯಾಗಲಾರರು.

ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರೇ ನಾನೊಂದು ಸತ್ಯವನ್ನು ಹೇಳುತ್ತೇನೆ. ಅದರ
ಬಗ್ಗೆ ಚಿಂತಿಸಿರಿ. ನೂರಕ್ಕೆ ೬೦% ಸಾಧು ಲಿಂಗಾಯತರು ಲಿಂಗವನ್ನೇ ಕಟ್ಟಿಲ್ಲ. ೨೦% ಕಟ್ಟಿದ್ದಾರೆ.
ಕಟ್ಟಿದ್ದರೂ ಲಿಂಗಪೂಜೆಯನ್ನು ಮಾಡುವ ವಿಧಾನವೇ ಗೊತ್ತಿಲ್ಲ. ಲಿಂಗದ ಬಗ್ಗೆ ಕಲ್ಪನೆಯಾಗಲೀ
ಭಕ್ತಿಯಾಗಲೀ ಇಲ್ಲ. ಕಟಕಟಿ ದೇವರಿಗೆ ಮರದ ಗಂಟೆ ಎನ್ನುವ ರೀತಿ ಕಟ್ಟಿದ್ದಾರೆ. ೧೦% ನಾಸ್ತಿಕರು,
ಅವರಿಗೆ ಇಷ್ಟಲಿಂಗವಾಗಲೀ, ಶ್ರೀ ಗುರು ಬಸವಣ್ಣನವರಾಗಲೀ ಯಾರೂ ಬೇಕಿಲ್ಲ. ಇವರೆಲ್ಲಾ ನಿಮ್ಮ

ಹತ್ತಿರದ ಭಕ್ತರು. ಇನ್ನೂ ೧೦% ಸಾಧು ಲಿಂಗಾಯತರು ಶ್ರೀ ಗುರು ಬಸವಣ್ಣನವರನ್ನು ತಮ್ಮ ಧರ್ಮ ಗುರುವೆಂದೂ, ಇಷ್ಟಲಿಂಗವನ್ನು ತಮ್ಮ ಧರ್ಮಲಾಂಛನವೆಂದೂ, ವಚನಸಾಹಿತ್ಯ ತಮ್ಮ ಧರ್ಮ ಸಂಹಿತೆ ಎಂದು ನಂಬಿ ಸಾರ್ಥಕ ಜೀವನ ನಡೆಸುತ್ತಿದ್ದಾರೆ. ಇವರೆಲ್ಲರೂ ಪೂಜ್ಯ ಶ್ರೀ ಮಾತೆಯವರಿಂದ ದೀಕ್ಷೆ ಪಡೆದು, ಜ್ಞಾನವನ್ನು ಅಳವಡಿಸಿಕೊಂಡಿರುವರೇ ವಿನಾ ತಮ್ಮ ಮಠದಿಂದಲ್ಲ. ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರೇ ತಮಗೆ ವಚನ ಸಾಹಿತ್ಯದಲ್ಲಿ ಆಸಕ್ತಿ ಇಲ್ಲ, ಆಳವಾದ ಅಧ್ಯಯನವಿಲ್ಲವೆಂದು ತಮ್ಮ ನಡವಳಿಕೆಗಳಿಂದ ಸ್ಪಷ್ಟವಾಗುತ್ತದೆ. ನಿಮ್ಮ ಭಕ್ತರನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಹೇಗೆ ಸಾಧ್ಯ? ಪೂಜ್ಯ ಶ್ರೀ ಮಾತೆಯವರು ಯಾವ ಮಠಾಧಿಪತಿಯೂ ಮಾಡದಿರುವ ಕಾರ್ಯಗಳನ್ನು ಮಾಡುತ್ತಿದ್ದಾರೆ. ಪೂಜ್ಯ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ|| ಶ್ರೀ ಶಿವಕುಮಾರ ಸ್ವಾಮಿಗಳ ಮೇಲೆ ಕೆಲವು ಭಕ್ತರು ಒತ್ತಡ ತಂದು ತಾವು ಮಾಡಿದ ಹೇಳಿಕೆಯಂತೆ ಹೇಳಿಕೆ ಕೊಡಿಸಲು ಪ್ರಯತ್ನಿಸಿದರು. ಅದಕ್ಕೆ ಸಿದ್ಧಗಂಗಾ ಶ್ರೀಗಳು **''ಆ ತಾಯಿಗೆ ದೇವರು ಶಕ್ತಿಕೊಟ್ಟದ್ದಾನೆ ಅವರು ಮಾಡಲಿ, ನಾವೇಕೆ ಅಡ್ಡಿ ಪಡಿಸಬೇಕು''** ಎಂದರಂತೆ. ಇದು ದೊಡ್ಡತನ. ತಮ್ಮ ಕೈಲಾದರೆ ಒಳ್ಳೆಯ ಕೆಲಸಗಳನ್ನು ಮಾಡಬೇಕು ಇಲ್ಲವಾದರೆ ತೆಪ್ಪಗೆ ಇರಬೇಕು. ಬಸವ ಭಕ್ತರನ್ನು ಗೊಂದಲಕ್ಕೀಡುಮಾಡುವ ಕೀಟಲೆ ಕೆಲಸ ಮಾಡಬಾರದು ಎಂದು ನನ್ನ ಬಿನ್ನಹ. ಶರಣ ಧರ್ಮೀಯರಿಗೆ ಈ ಕೆಳಗಿನ ಬಸವಣ್ಣನವರ ವಚನದಂತೆ ಭೌತಿಕ ಸಂಸ್ಕಾರಗಳು, ಆತ್ಮೋದ್ಧಾರಕ್ಕೆ ಅಡಿಪಾಯವಿದ್ದಂತೆ.

ಶ್ರೀ ವಿಭೂತಿಯ ಪೂಸದವರ, ಶ್ರೀ ರುದ್ರಾಕ್ಷಿಯ ಧರಿಸದವರ
ನಿತ್ಯ ಲಿಂಗಾರ್ಚನೆಯ ಮಾಡದವರ, ಜಂಗಮವೇ ಲಿಂಗವೆಂದರಿಯದವರ
ಸದ್ಭಕ್ತರ ಸಂಗದಲ್ಲಿರದವರ, ಎನಗೊಮ್ಮೆ ತೋರದಿರಯ್ಯಾ
ಲಿಂಗದೇವಾ! ಸೆರಗೊಡ್ಡಿ ಬೇಡುವೆನು!

ಈ ಮೇಲಿನ ವಚನವನ್ನು ಈ ಕೆಳಗಿನಂತೆ ವಿಡಂಬಿಸಬಹುದಲ್ಲವೆ?

**೧. ಓಂ ಶ್ರೀ ಗುರು ಬಸವಲಿಂಗಾಯ ನಮಃ**
**ಎಂಬ ಗುರು ಮಂತ್ರವನ್ನು ಜಪಿಸದವರ**
**೨. ಬಸವಾದಿ ಶರಣರ ವಚನಗಳನ್ನು ಆಳವಾಗಿ ಅಧ್ಯಯನ ಮಾಡದವರ ಮತ್ತು ಪಠಿಸದವರ**
**೩. ಬಸವಾದಿ ಶರಣರ ವಚನ ಸಾಹಿತ್ಯವನ್ನು ''ಲಿಂಗಾಯತ ಧರ್ಮ ಸಂಹಿತೆ'' ಎಂದು ನಂಬದವರ**
**೪. ಶ್ರೀ ಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಆದ್ಯರೆಂದು ನಂಬದೆ, ಈ ಧರ್ಮದ**
**ಸಂಸ್ಥಾಪಕರೆಂದು ಅರಿಯದವರ ಎನಗೆ ತೋರದಿರಯ್ಯಾ!**
**ಲಿಂಗದೇವಾ! ಇವರಿಗೆಲ್ಲಾ ಸುಬುದ್ಧಿಯ ಕೊಡಲೆಂದು ಸೆರಗೊಡ್ಡಿ ಬೇಡುವೆನು!**

ಈ ಪತ್ರದಲ್ಲಿ ಬರೆದ ವಿಚಾರಗಳು ನನ್ನ ಎದೆಯಾಳದಿಂದ ಬಂದವುಗಳು. ಕಳಕಳಿಯೇ ವಿನಾ ಈರ್ಷೆಯಿಂದ ಬರೆದವುಗಳಲ್ಲ. ತಪ್ಪುಗಳಿದ್ದಲ್ಲಿ ಕ್ಷಮಿಸಿರಿ. ಕೊನೆಯದಾಗಿ ಸೃಷ್ಟಿಕರ್ತ ''ಲಿಂಗದೇವ'' ಧರ್ಮಕರ್ತ ''ಬಸವಣ್ಣ'' ತಮ್ಮ ಕಣ್ಣುತೆರೆಸಲಿ ಎಂದು ಪ್ರಾರ್ಥಿಸುತ್ತೇನೆ.

## ಲಿಂಗಾಯತರು ವೀರಶೈವರಲ್ಲ - ಅಭಿಪ್ರಾಯ

ಲಿಂಗಾಯತ ಮತ್ತು ವೀರಶೈವ ಸಮಾನಾರ್ಥ ಪದಗಳಲ್ಲ. ಅವು ಸ್ಪಷ್ಟವಾಗಿ ಬೇರೆ ಬೇರೆ. ಇಂದು ಸಾಮಾನ್ಯವಾಗಿ ಮತ್ತು ಸಾಮಾಜಿಕವಾಗಿ ಲಿಂಗಾಯತರಲ್ಲಿ ಕೆಲವರು ವೀರಶೈವರು ಎಂದು ಕರೆದುಕೊಳ್ಳುತ್ತಿದ್ದರೂ, ಕರ್ನಾಟಕ ಮತ್ತು ಇತರ ರಾಜ್ಯ, ರಾಷ್ಟ್ರಗಳಲ್ಲಿರುವ ಇಷ್ಟಲಿಂಗಧಾರಿಗಳು ಲಿಂಗಾಯತರೇ ವಿನಾ ವೀರಶೈವರು ಅಲ್ಲ. ಈ ವಿಚಾರ ಲಹರಿ ಸಂಶೋಧನೆ ಮತ್ತು ಆಳವಾದ



ಅಧ್ಯಯನದಿಂದ ತಿಳಿದು ಬರುತ್ತದೆ. ಅಂಗದ ಮೇಲೆ ಗೋಳಾಕಾರದ ಇಷ್ಟಲಿಂಗವನ್ನು ಧರಿಸಿದವರು ಲಿಂಗವಂತರು ಅಥವಾ ಲಿಂಗಾಯತರು. ಹಣವಿದ್ದವ ಹಣವಂತ, ಗುಣವಿದ್ದವ ಗುಣವಂತ, ವಿದ್ಯೆ ಇದ್ದವ ವಿದ್ಯಾವಂತ, ಲಿಂಗವಿದ್ದವ ಲಿಂಗವಂತ. ಇಲ್ಲಿ 'ವಂತ' ಎಂದರೆ ಹೊಂದಿದವನು ಎಂದರ್ಥ. 'ವಂತ' ಪದಕ್ಕೆ ಮಹತ್ವವಿದೆ. ''ಲಿಂಗಾಯತ''ದಲ್ಲಿ ಆಯತ ಪದಕ್ಕೆ ಹೆಚ್ಚಿನ ಒತ್ತು ಇದೆ. ಇಷ್ಟಲಿಂಗವನ್ನು ಬರಿ ಹೊಂದಿದ್ದರೆ ಸಾಲದು; ಗುರುವಿನ ಮೂಲಕ ಆಯತವನ್ನು ಮಾಡಿಕೊಂಡಿರಬೇಕು. ''ಆಯತ'' ಮಾಡಿಕೊಳ್ಳುವ ಭೌತಿಕ ಕ್ರಿಯೆಯ ನಂತರ ನಿಜಲಿಂಗಾಯತನು ಸ್ವಾಯತ ಮತ್ತು ಸನ್ನಿಹಿತ ಎರಡನ್ನೂ ಮಾಡಿಕೊಳ್ಳಬೇಕು. ಹೀಗೆ ದೇವರ ಕುರುಹನ್ನು ಸ್ಥೂಲ ಶರೀರಕ್ಕೆ ಆಯತ ಮಾಡಿಕೊಂಡು, ಮನದಲ್ಲಿ ಸ್ವಾಯತ ಮಾಡಿಕೊಂಡು, ಭಾವದಲ್ಲಿ ಸದಾ ಸನ್ನಿಹಿತವಾಗಿ ಐಹಿಕ ಬಾಳನ್ನು ಬಾಳಬೇಕು. ಹೀಗೆ ''ಲಿಂಗಾಯತ'' ಪದ ಸರ್ವಾಂಗ ಪರಿಪೂರ್ಣ, ಅರ್ಥಪೂರ್ಣ.

ವೀರಶೈವ ಪದವನ್ನು ಉಚ್ಚಾರ ಮಾಡುತ್ತಲೇ ಉಂಟಾಗುವ ಕಲ್ಪನೆ ಎಂದರೆ ''ಶಿವನಲ್ಲಿ ವೀರ ತಮವಾದ ಭಕ್ತಿ (ನಿಷ್ಠೆ) ಯುಳ್ಳವನೇ ವೀರಶೈವ''. ಈ ಪದವು ಲಿಂಗಾಯತರಿಗೆ ಲಿಂಗಾಯತ ಧರ್ಮಕ್ಕೆ ಅನ್ವಯವಾಗುವುದಿಲ್ಲ. ಲಿಂಗಾಯತನು ದೇವಪೂಜಕ. ಶಿವನು ಗಂಗೆ-ಗೌರಿವಲ್ಲಭ, ಜಟಾಮುಕುಟಧಾರಿ, ಸರ್ಪಭೂಷಣ. ಲಿಂಗಾಯತ ಧರ್ಮದ ಆದ್ಯ ಬಸವಣ್ಣನವರು. ಅವರು ಪೂಜಿಸಲು ಹೇಳಿರುವುದು, ಕಲಿಸಿರುವುದು ಸರ್ಪಭೂಷಣ ಶಿವನನ್ನಲ್ಲ, ನಿರಾಕಾರನು ನಿರ್ಗುಣನೂ ಆದ ದೇವನನ್ನು (ದೇವ ಪೂಜೆಯ ಮಾಟ ದುರಿತ ಬಂಧನದೋಟ- ಬಸವ ವಚನ) ಸ್ಥಾವರ ಲಿಂಗವು ಶಿವನ ಪ್ರತೀಕ, ಇಷ್ಟಲಿಂಗವು ದೇವನ ಪ್ರತೀಕ.

ವೀರಶೈವರು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ಪೂಜಕರಾದರೆ, ಲಿಂಗಾಯತರು ಸೃಷ್ಟಿಗೊಡೆಯನಾದ ದೇವನ ಆರಾಧಕರು. ''ಶಿವಜೀವೈಕ್ಯ ವಿದ್ಯೆಯಲ್ಲಿ ರಮಿಸುವವರು ಯಾರೋ ಅವರು ವೀರಶೈವರು'' ಎಂಬ ವ್ಯಾಖ್ಯಾನವನ್ನು ವೀರಶೈವವಾದಿಗಳು ಮಾಡುವರು. ವೀರಶೈವ ಪದ ಅಸ್ಪಷ್ಟವೂ, ಸಂದಿಗ್ಧವೂ ಆಗಿದೆ; ಆದರೆ ಲಿಂಗಾಯತವು ಅತ್ಯಂತ ಸ್ಪಷ್ಟಪದಗಳಲ್ಲಿ ತನ್ನ ಅನುಯಾಯಿತ್ವವನ್ನು ವಿವರಿಸುತ್ತದೆ. ಬಸವ ಪೂರ್ವದ ವೀರಶೈವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದರಿಂದ ವೀರಶೈವ ಪದವು ಲಿಂಗಾಯತ ಸಮಾಜದಲ್ಲಿ ನುಸುಳಿಕೊಂಡು ಬಂದಿರುವುದು ಸ್ಪಷ್ಟವಾಗುತ್ತದೆ. ಇದಲ್ಲದೇ ಯಾರಾದರೂ ನೀವು ಯಾವ ಜನಾಂಗದವರು ಎಂದು ಲಿಂಗಾಯತ ಧರ್ಮೀಯರನ್ನು ಪ್ರಶ್ನಿಸಿದರೆ (೯೮ %) ಸಾಮಾನ್ಯರು ಸಹಿತ ಲಿಂಗಾಯತರು ಎಂದು ತಕ್ಷಣ ಉತ್ತರಿಸುತ್ತಾರೆ. ಜನಮನದಲ್ಲಿ ''ಲಿಂಗಾಯತ'' ಪದ ಹಾಸು ಹೊಕ್ಕಾಗಿ ಬಂದಿದೆ. ಆ ಆಗಂತುಕ ತತ್ವರಹಿತ ವೀರಶೈವ ಪದದ ಗೊಡವೆ ನಮಗೇಕೆ? ಲಿಂಗಾಯತ ಧರ್ಮೀಯರು ವಿಚಾರಮಾಡಿ ಈ ಮುಂಬರುವ ಜನಗಣತಿಯಲ್ಲಿ ''ಲಿಂಗಾಯತ'' [Lingayat (L)] ಎಂದು ಬರೆಸುವ ಮೂಲಕ ಸತ್ಯವನ್ನು ಎತ್ತಿ ಹಿಡಿಯುತ್ತಾರೆ ಎಂದು ಆಶಿಸೋಣವೇ? ವೀರಶೈವ ಮಹಾಸಭೆ ಮತ್ತೊಮ್ಮೆ ತಪ್ಪುಮಾಡಿ ಮುಂದೆ ಪರಿತಪಿಸುವುದು ಬೇಡ. ಲಿಂಗಾಯತರನ್ನು ದಾರಿತಪ್ಪಿಸುವ ಕೆಲಸಕ್ಕೆ ಕೈಹಾಕಬೇಡಿ ಎಂದು ವೀರಶೈವ ಮಹಾಸಭೆಯ ಅಧ್ಯಕ್ಷರಿಗೆ ಈ ಪತ್ರದ ಮೂಲಕ ವಿನಂತಿಸಿಕೊಳ್ಳುತ್ತೇನೆ. ''ವೀರಶೈವ ಮಹಾಸಭೆ''ಯ ಹೆಸರನ್ನು ''ಲಿಂಗಯತ ಧರ್ಮ ಮಹಾಸಭೆ'' ಎಂದೂ ಬದಲಿಸಿ ಈ ಸಮಾಜಕ್ಕೆ ಉಪಕಾರಮಾಡಲಿ ಎಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ. ಈ ಬದಲಾವಣೆ ಆಗದ ಹೊರತು ಈ ವೀರಶೈವ ವಾದಿಗಳ ಗೊಂದಲ/ಗದ್ದಲ ತಪ್ಪದು.

-ಹೆಚ್.ಎ.ಶರಣಪ್ಪ
ನಿವೃತ್ತ ನಿಯಂತ್ರಣಾಧಿಕಾರಿ, ಕ.ವಿ.ಮಂ.
ಅಕ್ಕಮಹಾದೇವಿ ನಿಲಯ, ನಂ. ೧೫೭, ೪ನೇ ಮುಖ್ಯರಸ್ತೆ, ಬಸವೇಶ್ವರ ನಗರ, ಬೆಂಗಳೂರು

# ಬಸವ ಗಂಗೋತ್ರಿ ನಗರ ಯೋಜನೆ

## ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **"ಕಲ್ಯಾಣ ನಗರ"** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು



ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

## ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.




ಬಸವ ಮೂರ್ತಿಯ ಚಿತ್ಕಳಾಧಾರಣೆ ಪೂಜ್ಯ ಶ್ರೀ ಮಾತಾಜಿಯವರಿಂದ



ಬೆಂಗಳೂರಿನ ಬಸವ ಮಂಟಪದಲ್ಲಿ ದಿ.೬-೫-೨೦೦೦ದಂದು
ವಿಶ್ವಗುರು ಬಸವಣ್ಣನವರ ಲ೬೭ನೆಯ ಜಯಂತಿ ಉತ್ಸವ
ವಿಶ್ವಗುರು ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆ



ವಿಶ್ವಗುರು ಬಸವಣ್ಣನವರ
ಅಬಯ ಹಸದ ಅಮೃತಶಿಲಾ ಮೂರ್ತಿ



ಧ್ವಜಾರೋಹಣ ಶರಣ ಸಿದ್ದರಾಮಪ್ಪ ಮತ್ತು ಶರಣೆ ಪುಷ್ಪಾ ಪಾಟೀಲ ಅವರಿಂದ



ಬಸವ ಜಯಂತಿ ವೇದಿಕೆಯ ಮೇಲೆ ಪೂಜ್ಯ ಮಾತಾಜಿಯವರಿಂದ ಪ್ರಾಸ್ತಾವಿಕ ಭಾಷಣ
ಉಪಸ್ಥಿತರು : ಎಡದಿಂದ ಬಲಕ್ಕೆ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮೀಜಿ, ಶರಣ. ಡಿ.ಪಿ.ಪ್ರಕಾಶ್
ಶರಣ. ಜೈರಾಜ್ ವಕೀಲರು, ಶರಣ, ಸಿದ್ಧರಾಮಪ್ಪ ಪಾಟೀಲ್, ಪೂಜ್ಯ ಶ್ರೀ ಮಹಾದೇವ ಸ್ವಾಮಿಗಳು



ಬಸವ ಜಯಂತಿ ವಿಶೇಷ ಪೂಜೆ ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳಿಂದ



ಲಿಂಗಾಯತ ಜನಗಣತಿ ಪ್ರಚಾರಾರ್ಥ ಮೆರವಣಿಗೆ



ಅಶ್ವಾರೂಢ ಬಸವಣ್ಣನವರ
ಪುತ್ಥಳಿಗೆ ಮಾಲಾರ್ಪಣೆ



ಜನಗಣತಿ ಪ್ರಚಾರ ಆಂದೋಲನದ
ಉದ್ಘಾಟನೆ, ದಿ. ೨೨-೫-೨೦೦೦



ಶಾಲನ್ನು ಹೊದ್ದಿಸಿ ಸತ್ಕರಿಸುತ್ತಿರುವ ಶರಣ. ಕೆ.ಎಮ್.ಶಿವಶಂಕರ್ ಮತ್ತು
ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶರಣ. ತಮ್ಮಯ್ಯ



ಶ್ರೀ ಬಸವೇಶ್ವರ ವೀಡಿಯೋದವರ ಫೋನ್ ಇನ್ ಕಾರ್ಯಕ್ರಮಕ್ಕೆ ಆಗಮಿಸಿದ್ದ ಶಿಕ್ಷಣ ಸಚಿವ
ಶ್ರೀ ವಿಶ್ವನಾಥರವರನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಆಶೀರ್ವದಿಸುತ್ತಿದ್ದಾರೆ.

ಕಲ್ಯಾಣ ಕಿರಣ CPMG/KA/BGW-50 ಜೂನ್-೨೦೦೦
R.No.19980/70




'ಲಿಂಗಾಯತ' ಎಂದು ಜನಗಣತಿಯಲ್ಲಿ ಬರೆಸಲು
ಪ್ರಚಾರ ಆಂದೋಲನ ಉದ್ಘಾಟನೆ ದಿ. ೨೨-೫-೨೦೦೦